ಶುಕ್ರವಾರ, ಜೂನ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 160 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ತುರ್ತು ನಿರ್ಗಮನ'ದ ಬಾಗಿಲಿನಲ್ಲಿ ಮತ್ತೆ ತ್ವರಿತ ಆಗಮನದ ತವಕದಲ್ಲಿದ್ದಾರೆ ನಟ ಸುನೀಲ್ ರಾವ್



ಆಳ-ಅಗಲ
ಚುನಾವಣಾ ಬಾಂಡ್ ಮುಚ್ಚಿದ ಲಕೋಟೆಯ ಮಿಥ್ಯೆ

ನೀಟ್-ಪಿಜಿ: ವಿಶೇಷ ಕೌನ್ಸೆಲಿಂಗ್ ಕುರಿತು ಇಂದು ತೀರ್ಪು 10
ಇನ್ನೆರಡು ದಿನಗಳಲ್ಲಿ ಮುಂಗಾರು ಚುರುಕು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,320 ▲	16,478 ▲	₹53,060 (ಬೆಂಗಳೂರು) ▲	₹63,900 (ಬೆಂಗಳೂರು) ▲	77.74 ▼

ಪರಿಶೀಲನೆಯಷ್ಟೇ ಚಕ್ರತೀರ್ಥ ಕೆಲಸ: ಮೌಖಿಕ ಸೂಚನೆ ಕೊಟ್ಟ ಸಚಿವ ನಾಗೇಶ್?

ಆದೇಶ ಇಲ್ಲದೇ ಪಠ್ಯ ಪರಿಷ್ಕರಣೆ

• ವೈ.ಗ. ಜಗದೀಶ್

ಬೆಂಗಳೂರು: ಪಠ್ಯಪುಸ್ತಕಗಳಲ್ಲಿ ಇರಬಹುದಾದ ಸೂಕ್ಷ್ಮ ಹಾಗೂ ಸಂಕೀರ್ಣ ವಿಷಯಗಳ ಕುರಿತು ಪರಿಶೀಲಿಸಿ ವರದಿ ನೀಡುವ ಉದ್ದೇಶಕ್ಕೆ ರಚಿಸಲಾಗಿದ್ದ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ, ಸರ್ಕಾರದ ಅಧಿಕೃತ ಆದೇಶ ಇಲ್ಲದೇ ಪರಿಷ್ಕರಣೆ ಮಾಡಿರುವುದು ಈಗ ಚರ್ಚೆಯ ಮುನ್ನೆಲೆಗೆ ಬಂದಿದೆ.

ಪ್ರಜಾವಾಣಿ ವಿಶೇಷ

2022–23ನೇ ಸಾಲಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ಮುದ್ರಿಸಿ ವಿತರಿಸುವ ಬಗ್ಗೆ ಮಾರ್ಚ್ 9 ರಂದು ಶಿಕ್ಷಣ ಇಲಾಖೆ ಹೊರಡಿಸಿದ ಆದೇಶ ದಲ್ಲಿ, 'ಪಠ್ಯಪುಸ್ತಕಗಳನ್ನು ಪರಿಷ್ಕೃತ ಗೊಳಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಿ, ಮುದ್ರಿಸಲು ಸೂಚಿಸಲಾಗಿದೆ' ಎಂಬ ಉಲ್ಲೇಖವಿದೆ. ಸರ್ಕಾರದ ಕೆಲಸವನ್ನೋ ಅಥವಾ ಕಾಮಗಾರಿಗೆ ಅನುದಾನ ಕೊಡಿಸಿಯೇ ತೀರುವೆ ಎಂಬ ವಿಶ್ವಾಸ ಇರುವ ಮುಖ್ಯಮಂತ್ರಿ ಅಥವಾ ಸಚಿವರು ಅಧಿಕೃತ ಆದೇಶ ಇಲ್ಲದೇ ಕೆಲಸ ಮಾಡಿಸುತ್ತಾರೆ. ಕೆಲಸ ಮುಗಿದ ಮೇಲೆ ಘಟನೋತ್ತರ ಅನುಮತಿ/ ಆದೇಶ ಹೊರಡಿಸುವ ಪರಿಪಾಟ ಇದೆ. ಮೌಖಿಕ ಸೂಚನೆ ಮೇರೆಗೆ ಪಠ್ಯಪುಸ್ತಕ ಪರಿಷ್ಕರಣೆಗೆ ಅವಕಾಶ ಕೊಟ್ಟು, ಬಳಿಕ ಆದೇಶ ಹೊರಡಿಸಿರುವುದು ತಕರಾರಿಗೆ ಕಾರಣವಾಗಿದೆ.

ಆಗಿದ್ದೇನು?: ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಆರಂಭದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದ ಎಸ್. ಸುರೇಶ್ ಕುಮಾರ್ ಅವರು, 2020ರ ಡಿಸೆಂಬರ್ 17ರಂದು ಶಿಕ್ಷಣ ಇಲಾಖೆಗೆ ಟಿಪ್ಪಣಿಯೊಂದನ್ನು ಕಳುಹಿಸಿದ್ದರು. ಅದರಲ್ಲಿ 'ಆರನೇ ತರಗತಿಯ ಸಮಾಜ ವಿಜ್ಞಾನ ಭಾಗ–1ರ ಪುಟ ಸಂಖ್ಯೆ 82ರ 'ಹೊಸಧರ್ಮಗಳು ಏಕೆ ಉದಯಿಸಿದವು' ಎಂಬ ಶೀರ್ಷಿಕೆಯಡಿಯ ಎರಡು ಪ್ಯಾರಾಗಳು ಮತ್ತು ಪುಟ ಸಂಖ್ಯೆ 83ರ ಪ್ರಾರಂಭಿಕ ಆರು ಸಾಲುಗಳನ್ನು 2021–22ರ ಶೈಕ್ಷಣಿಕ ಸಾಲಿನಿಂದ ಎಲ್ಲ ಏಳು ಭಾಷೆಗಳ ಪಠ್ಯಪುಸ್ತಕಗಳಿಂದ ಕೈಬಿಡಲು ಹಾಗೂ 1ರಿಂದ 10 ನೇ ತರಗತಿಯ ಭಾಷಾ ವಿಷಯಗಳು, ಪರಿಸರ ಅಧ್ಯಯನ, 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ವಿಷಯಗಳಲ್ಲಿ ಇರಬಹುದಾದ ಸೂಕ್ಷ್ಮ/ ಸಂಕೀರ್ಣ ವಿಷಯಗಳನ್ನು ಕುರಿತು ಪರಿಶೀಲಿಸಿ ವರದಿ ನೀಡುವುದಕ್ಕೆ ಸಮಿತಿ ರಚಿಸಲು' ಸೂಚಿಸಲಾಗಿತ್ತು. ಇದನ್ನು ಆಧರಿಸಿ, 2021ರ ಸೆಪ್ಟೆಂಬರ್ 9ರಂದು ಹೊರಡಿಸಿದ ಆದೇಶದಲ್ಲಿ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಒಂದು ತಿಂಗಳಿನಲ್ಲಿ ವರದಿ ಸಲ್ಲಿಸಲು ಆದೇಶಿಸಲಾಗಿತ್ತು.



ಸರ್ಕಾರಿ ಆದೇಶದ ಪ್ರತಿ

'ಆಕ್ಷೇಪಣೆಗೆ ಉತ್ತರಿಸುವುದು ರೋಹಿತ್ ಹೊಣೆ'

'ಪರಿಷ್ಕೃತ ಪಠ್ಯಪುಸ್ತಕದಲ್ಲಿರುವ ವಿಷಯಗಳಿಗೆ ಮುಂದಿನ ದಿನಗಳಲ್ಲಿ ಆಕ್ಷೇಪಣೆಗಳು ಬಂದಲ್ಲಿ ಉತ್ತರಿಸುವ ಜವಾಬ್ದಾರಿ ಸಮಿತಿ ಅಧ್ಯಕ್ಷರಾಗಿರುವ ರೋಹಿತ್ ಚಕ್ರತೀರ್ಥ ಅವರದ್ದಾಗಿರುತ್ತದೆ' ಎಂದು ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

2022ರ ಮಾರ್ಚ್ 19ರಂದು ಹೊರಡಿಸಿದ ಆದೇಶ (ಸಂಖ್ಯೆ ಇಡಿ 52 ಪಿಎಂಸಿ 2021) ದಲ್ಲಿ, 'ಕನ್ನಡ ಭಾಷೆ, ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ವಿಷಯದ ಪರಿಷ್ಕೃತ ಪಠ್ಯಪುಸ್ತಕಗಳಲ್ಲಿರುವ ಎಲ್ಲ ವಿಷಯಾಂಶಗಳು, ಲೇಖಕರು/ಕವಿಗಳು, ಚಿತ್ರಗಳು, ಭೂಪಟಗಳು , ನಕ್ಷೆಗಳು ಹಾಗು ಆಧಾರಗಳಿಗೆ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಜವಾಬ್ದಾರರಾಗಿದ್ದು , ಪಠ್ಯಪುಸ್ತಕಗಳಲ್ಲಿರುವ ವಿಷಯಗಳಿಗೆ ಮುಂದಿನ ದಿನಗಳಲ್ಲಿ ಆಕ್ಷೇಪಣೆ ಬಂದಲ್ಲಿ ರೋಹಿತ್ ಚಕ್ರತೀರ್ಥ, ಸಮಿತಿ ಅಧ್ಯಕ್ಷರು ಉತ್ತರಿಸುವ ಜವಾಬ್ದಾರಿ ಹೊಂದಿರುತ್ತಾರೆ' ಎಂದಿದೆ.

ಅಂತರ್ಜಾಲದಲ್ಲಿ ಕಾಣದ ಆದೇಶಗಳು!

ಪಠ್ಯಪುಸ್ತಕ ಪರಿಷ್ಕರಣೆ, ಪರಿಶೀಲನಾ ಸಮಿತಿ ರಚನೆ, ಪುಸ್ತಕ ವಿತರಣೆಗೆ ಸಂಬಂಧಪಟ್ಟ ಯಾವುದೇ ಆದೇಶಗಳು 'ಕರ್ನಾಟಕ ಪಠ್ಯ ಪುಸ್ತಕ ಸಂಘ'ದ ಅಂತರ್ಜಾಲ ತಾಣದಲ್ಲಿ ಇಲ್ಲ.

ಈ ಕುರಿತು ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶ, ಸುತ್ತೋಲೆಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಅಂತ-ರ್ಜಾಲದಲ್ಲಿ ಅಪ್ ಲೋಡ್ ಮಾಡುವ ಪದ್ಧತಿ ಇತ್ತು. ಪರಿಷ್ಕೃತ ಪಠ್ಯಪುಸ್ತಕದ ಮುದ್ರಣಕ್ಕೆ ಆಹ್ವಾನಿಸಿದ ಟೆಂಡರ್ ದಾಖಲೆಗಳೂ ಇಲ್ಲ. ಈ ಎಲ್ಲವನ್ನೂತೆಗೆದುಹಾಕಿರುವುದು ಸಂಶಯಕ್ಕೆ ಕಾರಣವಾಗಿದೆ.

5ನೇ ಪುಟ ನೋಡಿ

'ಅಡ್ಡ' ಮತದಾನ ಯಾರಿಗೆ ಹಿತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಚುನಾವಣೆಯ ನಾಲ್ಕು ಸ್ಥಾನಗಳ ಪೈಕಿ ಮೂರು ಸ್ಥಾನಗಳ ಆಯ್ಕೆ ನಿರಾತಂಕವಾಗಿದೆ. ಆದರೆ, ನಾಲ್ಕನೇ ಸ್ಥಾನಕ್ಕೆ ಜಿದ್ದಾಜಿದ್ದಿನ ಸ್ಪರ್ಧೆ ಏರ್ಪಟ್ಟಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್ ಪರಸ್ಪರ 'ಸಹಕಾರ' ನೀಡದಿರುವ ಬಗ್ಗೆ ಬಿಗಿ ನಿಲುವು ತಳೆದಿವೆ. ಇದರ ಪರಿಣಾಮ ಶುಕ್ರವಾರ ನಡೆಯುವ ಮತದಾನ ವೇಳೆ 'ಅಡ್ಡ ಮತದಾನ' ಹಾಗೂ ಕೊನೆ ಕ್ಷಣದ ನಾಟಕೀಯ ಬೆಳವಣಿಗೆಗಳ ಸಾಧ್ಯತೆ ದಟ್ಟವಾಗಿದೆ.

ಬಿಜೆಪಿ ತನ್ನ ಮೂರನೇ ಅಭ್ಯ-ರ್ಥಿಯನ್ನು ಗೆಲ್ಲಿಸಿಕೊಳ್ಳಲು ಸದ್ದಿಲ್ಲದೇ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಕೆಲವು ಶಾಸಕರ ಮತವನ್ನು ಸೆಳೆಯುವ ಪ್ರಯತ್ನ ವನ್ನೂ ಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್.ಅಶೋಕ ಅವರು ಇದರ ಉಸ್ತುವಾರಿ ನೋಡಿಕೊಂಡಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿಜೆಪಿಯಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಗ್ಗೇಶ್, ಕಾಂಗ್ರೆಸ್‌ನ ಜೈರಾಂ ರಮೇಶ್ ಅವರಿಗೆ ಗೆಲುವಿನ ಹಾದಿ ಸಲೀಸು. ನಾಲ್ಕನೇ ಸ್ಥಾನಕ್ಕೆ ಬಿಜೆಪಿಯಿಂದ ಲಹರ್ ಸಿಂಗ್ ಸಿರೋಯಾ, ಕಾಂಗ್ರೆಸ್‌ನಿಂದ ಮನ್ಸೂರ್ ಖಾನ್ ಮತ್ತು ಜೆಡಿಎಸ್‌ನಿಂದ ಕುಪೇಂದ್ರ ರೆಡ್ಡಿ ಕಣದಲ್ಲಿದ್ದಾರೆ.

ಜೆಡಿಎಸ್‌ನಿಂದ ಅಡ್ಡ ಮತದಾನ ಮಾಡುವ ಸಾಧ್ಯತೆ ಇರುವ ಶಾಸಕರನ್ನು ಅಭ್ಯರ್ಥಿ ಕುಪೇಂದ್ರ ರೆಡ್ಡಿ ಅವರು ವೈಯಕ್ತಿಕವಾಗಿ ಭೇಟಿ ಮಾಡಿ ಸಮಾಧಾನಪಡಿಸಿ, ಅವರ ಮತಗಳನ್ನು ಖಾತರಿಪಡಿಸಿಕೊಂಡಿದ್ದಾರೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ನೂಪುರ್, ಜಿಂದಾಲ್ ವಿರುದ್ಧ ಎಫ್‌ಐಆರ್

ನವದೆಹಲಿ: ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣ-ಗಳಲ್ಲಿ ಕೋಮುಭಾವನೆ ಕೆರಳಿಸಿದ ಆರೋಪದಲ್ಲಿ ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ, ದೆಹಲಿ ಬಿಜೆಪಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿದ್ದ ನವೀನ್ ಕುಮಾರ್ ಜಿಂದಾಲ್, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹಾಗೂ ಸಂತ ಯತಿ ನರಸಿಂಗಾನಂದ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. 10

ಕಾರವಾರದ ರೈಲ್ವೆ ಪೊಲೀಸರು ಆರೋಪಿ ಚೇನ್ ಸಿಂಗ್‌ನಿಂದ ₹ 2 ಕೋಟಿ ನಗದು ಜಪ್ತಿ ಮಾಡಿರುವುದು

ದಾಖಲೆಗಳಿಲ್ಲದೇ ₹ 2 ಕೋಟಿ ಸಾಗಣೆ

ಪ್ರಜಾವಾಣಿ ವಾರ್ತೆ

ಕಾರವಾರ: ಆತ ಟಿಕೆಟ್ ತೆಗೆದುಕೊಳ್ಳದೇ ಮುಂಬೈನಿಂದ ಮಂಗಳೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ. ರೈಲಿನ ಟಿ.ಟಿ. ಅವನ ಬಳಿ ಟಿಕೆಟ್ ಕೇಳಿದಾಗ ಬಯಲಾಗಿದ್ದು, ಅಕ್ರಮವಾಗಿ ಹಣ ಸಾಗಿಸುವ ದಂಧೆ. ಆತನ ಬಳಿ ಸಿಕ್ಕಿದ್ದು ಬರೋಬ್ಬರಿ ₹ 2 ಕೋಟಿ ನಗದು!

ಹಣ ಅಕ್ರಮ ಸಾಗಣೆಯ ಕೃತ್ಯದಲ್ಲಿ ತೊಡಗಿರುವ ಯುವಕನನ್ನು ರೈಲ್ವೆ ಪೊಲೀಸರು ಇಲ್ಲಿನ ಶಿರವಾಡ ರೈಲು ನಿಲ್ದಾಣದಲ್ಲಿ ಬುಧವಾರ ರಾತ್ರಿ ಬಂಧಿಸಿದ್ದಾರೆ. ರಾಜಸ್ಥಾನದ ಸೂಂತ್ರಿಯ ಚೇನ್ ಸಿಂಗ್ (22) ಬಂಧಿತ ಆರೋಪಿ.

ಆತ ಮುಂಬೈನಿಂದ ಮಂಗಳೂರಿಗೆ ಹೋಗುತ್ತಿದ್ದ ರೈಲಿನಲ್ಲಿ ಪ್ರಯಾಣಿಸು-ತ್ತಿದ್ದ. ರೈಲಿನ ಟಿ.ಟಿ ಪ್ರಯಾಣಿಕರ ಬಳಿ ಟಿಕೆಟ್ ತಪಾಸಣೆ ಮಾಡುತ್ತಿರುವಾಗ ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದ. ಪರಿಶೀಲಿಸಿದಾಗ ಆತ ಟಿಕೆಟ್ ಇಲ್ಲದೇ ಪ್ರಯಾಣಿಸುತ್ತಿರುವುದು ಗೊತ್ತಾಯಿತು.

ಯುವಕನ ಬಳಿಯಿದ್ದ ಬಾಕ್ಸ್ ಬಗ್ಗೆ ವಿಚಾರಿಸಿದಾಗ ಸರಿಯಾಗಿ ಉತ್ತರಿಸ-ಲಿಲ್ಲ. ಇದರಿಂದ ಅನುಮಾನಗೊಂಡ ಟಿಕೆಟ್ ಪರಿಶೀಲನಾ ಸಿಬ್ಬಂದಿ, ಕೊಂಕಣ ರೈಲ್ವೆಯ ಮುಖ್ಯ ಭದ್ರತಾ ಇನ್‌ಸ್ಪೆಕ್ಟರ್ ಎಚ್.ಕೆ.ಪ್ರಸನ್ನ ಅವರಿಗೆ ಮಾಹಿತಿ ನೀಡಿದರು. ಬಾಕ್ಸ್ ತೆರೆದು ನೋಡಿದಾಗ ನೋಟುಗಳು ಕಂಡುಬಂದವು.

ಆರೋಪಿ ಮತ್ತು ಬಾಕ್ಸ್ ವಶಕ್ಕೆ ಪಡೆದ ರೈಲ್ವೆ ಪೊಲೀಸರು, ಟಿಕೆಟ್‌ರಹಿತ ಪ್ರಯಾಣಕ್ಕಾಗಿ ₹ 1,060 ದಂಡ ವಿಧಿಸಿದರು.

4ನೇ ಪುಟ ನೋಡಿ

ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿರುವ ಪ್ರದೇಶಗಳಲ್ಲಿ ಸೋಂಕು ಪತ್ತೆ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಗುರುವಾರ ಸೂಚನೆ ನೀಡಿದೆ. ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸುವುದರಿಂದ ರೋಗ ಹರಡುವಿಕೆಯ ಮಟ್ಟವನ್ನು ಆರಂಭದಲ್ಲೇ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಕೋವಿಡ್ ನಿಯಂತ್ರಿಸಲು ಐದು ಹಂತದ ಕ್ರಮಗಳಾದ, ಪರೀಕ್ಷೆ-ಪತ್ತೆ-ಚಿಕಿತ್ಸೆ-ಲಸಿಕೆ-ಮಾರ್ಗಸೂಚಿ ಪಾಲನೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸೂಚಿಸಿದೆ. ಮೂರ್ನಾಲ್ಕು ತಿಂಗಳಿನಿಂದ ದೇಶದ ಬಹುತೇಕ ಭಾಗಗಳಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗಿದ್ದವು. ಆದರೆ ಎರಡು ವಾರಗಳಿಂದ ಸೋಂಕಿತರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

ಜೂನ್ 8ಕ್ಕೆ ಕೊನೆಗೊಂಡ ವಾರದಲ್ಲಿ ನಿತ್ಯ ಸರಾಸರಿ 4,207 ಹೊಸ ಪ್ರಕರಣಗಳು ವರದಿಯಾಗಿದ್ದವು. ಜೂನ್ 1ಕ್ಕೆ ಕೊನೆಗೊಂಡ ವಾರದಲ್ಲಿ ನಿತ್ಯ ಸರಾಸರಿ 2,663 ಹೊಸ ಪ್ರಕರಣ ಪತ್ತೆಯಾಗಿದ್ದವು ಎಂಬ ಅಂಶಕ್ಕೆ ಪತ್ರದಲ್ಲಿ ಒತ್ತು ನೀಡಲಾಗಿದೆ.

3ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಐಎಎಸ್‌ಸಿ 155ನೇ ರ‍್ಯಾಂಕ್ 10

ರಾಜಧಾನಿಯಲ್ಲಿ 4 ವರ್ಷ ವಾಸವಿದ್ದ ಶಂಕಿತ ಉಗ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜ್ಬುಲ್–ಮುಜಾಹಿದ್ದೀನ್ (ಎಚ್‌ಎಂ) ಉಗ್ರ ಸಂಘಟನೆಯ ಕಮಾಂಡರ್ ತಾಲಿಬ್ ಹುಸೇನ್ ಅಲಿಯಾಸ್ ತಾರಿಕ್ (36) ನಗರದಲ್ಲಿ ನಾಲ್ಕು ವರ್ಷಗಳಿಂದ ವಾಸವಿದ್ದನೆಂಬ ಸಂಗತಿ ಗುಪ್ತದಳ ಹಾಗೂ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಜಮ್ಮುವಿನಲ್ಲಿ ಸೈನಿಕರು ಹಾಗೂ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ ಹಿಂಸಾಚಾರಕ್ಕೆ ಕಾರಣವಾಗಿದ್ದ 'ಎ ದರ್ಜೆ' ಉಗ್ರ ಎನ್ನಲಾದ ತಾಲಿಬ್‌ನನ್ನು ಇತ್ತೀಚೆಗಷ್ಟೇ ನಗರದ ಓಕಳಿಪುರದ ಮಸೀದಿ ಪಕ್ಕದ ಮನೆಯಲ್ಲಿ ಬಂಧಿಸಲಾಗಿದ್ದು, ಆತನ ಪೂರ್ವಾಪರ ತಿಳಿಯಲು ತನಿಖೆ ಮುಂದುವರಿದಿದೆ.

ತಾಲಿಬ್ ಹುಸೇನ್

'2020ರಿಂದ ಓಕಳಿಪುರದ ಮಸೀದಿ ಪಕ್ಕದ ಮನೆಯಲ್ಲಿ ಪತ್ನಿ ಹಾಗೂ ಮೂವರು ಮಕ್ಕಳ ಜೊತೆ ತಾಲಿಬ್ ನೆಲೆಸಿದ್ದನೆಂಬ ಮಾಹಿತಿ ಮಾತ್ರ ಆರಂಭದಲ್ಲಿ ಗೊತ್ತಾಗಿತ್ತು. ಸ್ಥಳೀಯರು ಹಾಗೂ ಸ್ನೇಹಿತರ ವಿಚಾರಣೆ ನಡೆಸಿದಾಗ, ತಾಲಿಬ್ ನಾಲ್ಕು ವರ್ಷಗಳಿಂದ ನಗರದಲ್ಲಿ ವಾಸವಿದ್ದನೆಂಬುದು ಖಾತ್ರಿಯಾಗಿದೆ' ಎಂದು ಪೊಲೀಸ್ ಇಲಾಖೆ ಮೂಲಗಳು ಹೇಳಿವೆ.

6ನೇ ಪುಟ ನೋಡಿ

ಜುಲೈ 18ರಂದು ರಾಷ್ಟ್ರಪತಿ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಚುನಾವಣಾ ಆಯೋಗವು ಗುರುವಾರ ವೇಳಾಪಟ್ಟಿ ಪ್ರಕಟಿಸಿದ್ದು, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಉತ್ತರಾಧಿಕಾರಿ ಆಯ್ಕೆಗೆ ವೇದಿಕೆ ಸಿದ್ಧವಾಗಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಮುಖ್ಯ ಚುನಾವಣಾಧಿಕಾರಿ ರಾಜೀವ್ ಕುಮಾರ್, 'ಜುಲೈ 18ರಂದು ಮತದಾನ ನಡೆಯಲಿದೆ. ಲೋಕಸಭೆ, ಹಾಗೂ ರಾಜ್ಯಸಭೆಯ ಸದಸ್ಯರು, ದೆಹಲಿ, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳು ಮತ್ತು ಎಲ್ಲ ರಾಜ್ಯಗಳ ವಿಧಾನಸಭೆಯ ಸದಸ್ಯರು ಸೇರಿ 4,809 ಚುನಾಯಿತ ಸದಸ್ಯರು ಮತ ಚಲಾಯಿಸಲಿದ್ದಾರೆ. ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲಾಗುವುದು' ಎಂದರು.

2017ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ರಾಮನಾಥ ಕೋವಿಂದ್ (7,02,044 ಮತಗಳು) ಅವರು ವಿರೋಧ ಪಕ್ಷಗಳ ಅಭ್ಯರ್ಥಿಯಾಗಿದ್ದ ಲೋಕಸಭೆಯ ಮಾಜಿ ಸಭಾಧ್ಯಕ್ಷೆ ಮೀರಾ ಕುಮಾರ್ (3,67,314 ಮತಗಳು) ಅವರನ್ನು 3,34,730 ಮತಗಳ ಅಂತರದಿಂದ ಸೋಲಿಸಿದ್ದರು.

ಈ ಸಲದ ಚುನಾವಣೆಯಲ್ಲಿ ಸಂಸದರ ಮತ ಮೌಲ್ಯ 700. ಆದರೆ, ಶಾಸಕರ ಮತ ಮೌಲ್ಯ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ.

6ನೇ ಪುಟ ನೋಡಿ

ಸಾಲದ ಬಡ್ಡಿ ದರ ಏರಿಕೆ

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಲಿಮಿಟೆಡ್ ಸಾಲದ ಬಡ್ಡಿ ದರ ಹೆಚ್ಚಿಸಿದೆ. ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ರೆಪೊ ದರ ಆಧಾರಿತ ಸಾಲದ ಬಡ್ಡಿ ದರವನ್ನು ಜಾಸ್ತಿ ಮಾಡಿದೆ.

ಎಚ್‌ಡಿಎಫ್‌ಸಿ ಲಿಮಿಟೆಡ್ ತನ್ನ ಗೃಹ ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.50ರಷ್ಟು ಜಾಸ್ತಿ ಮಾಡಿದೆ. ಇದು ಶುಕ್ರವಾರದಿಂದ ಜಾರಿಗೆ ಬರಲಿದೆ. ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಶುಕ್ರವಾರದಿಂದ ಅನ್ವಯವಾಗುವಂತೆ ಬಡ್ಡಿ ದರವನ್ನು ಶೇ 0.50ರಷ್ಟು ಜಾಸ್ತಿ ಮಾಡಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್, ಇಂಡಿಯನ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡಿಯಾ ತಮ್ಮ ರೆಪೊ ಆಧಾರಿತ ಸಾಲದ ಬಡ್ಡಿ ದರವನ್ನು ಶೇ 0.50ರಷ್ಟು ಜಾಸ್ತಿ ಮಾಡುವುದಾಗಿ ಪ್ರಕಟಿಸಿವೆ.

ಬೊಮ್ಮಸಂದ್ರದಿಂದ ಹೊಸೂರಿಗೆ ಅಂದಾಜು 20.5 ಕಿ. ಮೀ ಉದ್ದದ ಮಾರ್ಗ

ಹೊಸೂರು ತನಕ ಮೆಟ್ರೊ ರೈಲಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ 2ನೇ ಹಂತದ ಆರ್.ವಿ.ರಸ್ತೆ–ಬೊಮ್ಮಸಂದ್ರ(-ರೀಚ್- 5) ಮಾರ್ಗವನ್ನು ಹೊಸೂರು ತನಕ ವಿಸ್ತರಿಸುವ ಪ್ರಸ್ತಾವನೆಗೆ ಕರ್ನಾಟಕ ಸರ್ಕಾರ ಅನುಮೋದನೆ ನೀಡಿದೆ.

‘ಬೊಮ್ಮಸಂದ್ರದಿಂದ ಹೊಸೂರು ನಡುವಿನ ಮೆಟ್ರೊ ರೈಲು ಮಾರ್ಗ ವಿಸ್ತರಿಸುವ ಸಂಬಂಧ ತಮಿಳುನಾಡು ಸರ್ಕಾರ ಅಧ್ಯಯನ ನಡೆಸಬಹುದು’ ಎಂದು ಮುಖ್ಯಮಂತ್ರಿ ಅನುಮೋದನೆ ನೀಡಿದ್ದಾರೆ. ಕರ್ನಾಟಕ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿರುವ ವಿಷಯವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ-

ದ(ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿಗೆ ಮೇ 23ರಂದು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ಕರ್ನಾಟಕ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿರುವುದು ಮಹತ್ವದ ಬೆಳವಣಿಗೆಯಾಗಿದ್ದು, ಈ ಸಂಬಂಧ ತಮಿಳುನಾಡು ಸರ್ಕಾರದ ಜತೆ ಮಾತನಾಡುತ್ತೇನೆ’ ಎಂದು ತಮಿಳುನಾಡಿನ ಕೃಷ್ಣಗಿರಿ ಸಂಸದ ಡಾ. ಎ.ಚೆಲ್ಲಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೊಮ್ಮಸಂದ್ರದಿಂದ ಹೊಸೂರಿಗೆ 20.5 ಕಿಲೋ ಮೀಟರ್ ಉದ್ದದ ಮೆಟ್ರೊ ರೈಲು ಮಾರ್ಗ ನಿರ್ಮಾಣ ಆಗಬೇಕು ಎಂದು ಅಂದಾಜಿಸಲಾಗಿದೆ. ಅದರಲ್ಲಿ ಕರ್ನಾಟಕದ ವ್ಯಾಪ್ತಿಯಲ್ಲಿ 11.7 ಕಿಲೋ ಮೀಟರ್ ಇದೆ. ಉಳಿದ 8.8 ಕಿಲೋ ಮೀಟರ್ ಮಾರ್ಗ ರಾಜ್ಯದ ಗಡಿ ದಾಟಿ ನಿರ್ಮಾಣ ಆಗಬೇಕಿದೆ. 2017ರ ಮೆಟ್ರೊ ರೈಲು ನೀತಿ ಪ್ರಕಾರ ನೆರೆಯ ರಾಜ್ಯ ಅಧ್ಯಯನ ಕೈಗೊಳ್ಳುವುದು ಸೂಕ್ತ’ ಎಂದು ಅಂಜುಂ ಪರ್ವೇಜ್ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ಯೋಜನೆಗೆ ತಗಲುವ ವೆಚ್ಚವನ್ನು ಎರಡೂ ಸರ್ಕಾರಗಳು ಹಂಚಿಕೆ ಮಾಡಿಕೊಳ್ಳಬೇಕಾಗುತ್ತದೆ. ಕಾರ್ಯಾಚರಣೆ ಸಂದರ್ಭದಲ್ಲೂ ಸಮನ್ವಯದ ಅಗತ್ಯವಿದೆ’ ಎಂದು ಅವರು ಹೇಳಿದ್ದಾರೆ.

‘ಚೆನ್ನೈ ಮೆಟ್ರೊ ರೈಲು ನಿಗಮದ ಅಧಿಕಾರಿಗಳ ಜತೆ ಮಾತನಾಡಿದ್ದೇನೆ. ಬಿಎಂಆರ್‌ಸಿಎಲ್ ಮೂಲಕವೇ ಅಧ್ಯಯನ ನಡೆಸುವುದು ಒಳ್ಳೆಯದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಬಿಎಂಆರ್‌ಸಿಎಲ್ ಮೂಲಕವೇ ಅಧ್ಯಯನ ನಡೆಸುವಂತೆ ಕೋರಿ ಕರ್ನಾಟಕದ ಮುಖ್ಯಮಂತ್ರಿಗೆ ಪತ್ರ ಬರೆಯುತ್ತೇನೆ. ಯೋಜನೆಗೆ ಅಗತ್ಯ ಮಂಜೂರಾತಿ ದೊರೆತ ಬಳಿಕ ಹಣಕಾಸಿನ ಸಮಸ್ಯೆಯೂ ಬಗೆಹರಿಯಲಿದೆ’ ಎಂದು ಚೆಲ್ಲಕುಮಾರ್ ಸ್ಪಷ್ಟಪಡಿಸಿದರು.

ಮೊದಲ ಹಂತದಲ್ಲಿ ಹೀಲಳಿಗೆ ತನಕ ಗುರುತಿಸಿರುವ ಉಪನಗರ ರೈಲು ಯೋಜನೆಯನ್ನು ಹೊಸೂರು ತನಕ ವಿಸ್ತರಿಸುವ ಉದ್ದೇಶವನ್ನೂ ಉಪನಗರ ರೈಲು ಯೋಜನೆ ಹೊಂದಿತ್ತು. ‘ಎರಡೂ ಯೋಜನೆ ಅನುಷ್ಠಾನಗೊಂಡರೆ ತೊಂದರೆ ಏನೂ ಇಲ್ಲ. ಚೆನ್ನೈನಲ್ಲಿ ರೈಲು ಮತ್ತು ಮೆಟ್ರೊ ರೈಲು ಮಾರ್ಗಗಳು ಒಟ್ಟಿಗೇ ಇವೆ. ಎರಡು ಮಾರ್ಗಗಳೂ ಜನರಿಗೆ ಮುಖ್ಯ ಆಗಲಿವೆ’ ಎಂದು ಹೇಳಿದರು.

‘ಕರ್ನಾಟಕದಲ್ಲಿ ಮಹಿಳಾ ಚಳವಳಿಯ ನೆಲೆ – ಹಿನ್ನೆಲೆ’ ವಿಚಾರಗೋಷ್ಠಿ

‘ಸಾಮಾಜಿಕ ನ್ಯಾಯ ಮಾಯವಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಜನಸಾಮಾನ್ಯರು ಅಪಾಯಕಾರಿ ಸನ್ನಿವೇಶದಲ್ಲಿ ಬದುಕುತ್ತಿದ್ದಾರೆ. ಸಾಮಾಜಿಕ ನ್ಯಾಯ ಮಾಯವಾಗಿದೆ’ ಎಂದು ಲೇಖಕಿ ಡಾ.ವಸುಂಧರಾ ಭೂಪತಿ ಅವರು ಆತಂಕದಿಂದ ನುಡಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ ನಗರದಲ್ಲಿ ಗುರುವಾರ ಆಯೋಜಿಸಿದ್ದ ‘ಕರ್ನಾಟಕದಲ್ಲಿ ಮಹಿಳಾ ಚಳವಳಿಯ ನೆಲೆ-ಹಿನ್ನೆಲೆ’ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಮಹಿಳೆಯರನ್ನು ಮತ್ತೆ ನಾಲ್ಕು ಗೋಡೆಗಳ ನಡುವೆ ಬಂಧಿಸಿಡುವ ಹುನ್ನಾರಗಳು ನಡೆಯುತ್ತಿವೆ. ಕೋವಿಡ್ ನಂತರದ ದಿನಗಳಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿವೆ. ಶಾಲಾ, ಕಾಲೇಜುಗಳಿಂದ ದೂರ ಉಳಿಯುವ ಹೆಣ್ಣು ಮಕ್ಕಳ ಸಂಖ್ಯೆಯೂ ಏರಿಕೆ ಕಂಡಿದೆ. ಮುಸ್ಲಿಂ ಹೆಣ್ಣುಮಕ್ಕಳು ತಲೆಗೆ ಬಟ್ಟೆ ಕಟ್ಟಿಕೊಳ್ಳುತ್ತಿದ್ದರು. ಅದಕ್ಕೂ ವಿರೋಧ ವ್ಯಕ್ತಪಡಿಸಲಾಯಿತು. ಸಮಾಜವು ಎತ್ತ ಸಾಗುತ್ತಿದೆ’ ಎಂದು ಪ್ರಶ್ನಿಸಿದರು.

‘ಕರ್ನಾಟಕದಲ್ಲಿ ಮಹಿಳಾ ಚಳವಳಿಯ ನೆಲೆ–ಹಿನ್ನೆಲೆ’ ಕುರಿತ ವಿಚಾರಗೋಷ್ಠಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್‌. ವಿಮಲಾ ಮಾತನಾಡಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಚಿಂತಕರಾದ ಡಾ.ಎನ್‌. ಗಾಯತ್ರಿ, ಲೇಖಕಿ ಡಾ.ವಸುಂಧರಾ ಭೂಪತಿ ಮತ್ತು ಸಂಘಟನೆಯ ಅಧ್ಯಕ್ಷರಾದ ದೇವಿ ಇದ್ದಾರೆ – ಪ್ರಜಾವಾಣಿ ಚಿತ್ರ

‘ರಾಜ್ಯವು ಶಾಂತಿಯ ತೋಟದಂತೆ ಇತ್ತು. ಎಲ್ಲರ ಪಾಲಿಗೂ ಸುರಕ್ಷಿತ ತಾಣವಾಗಿತ್ತು. ಇಂತಹ ತಿಳಿಯಾದ ಕೊಳಕ್ಕೆ ಕಲ್ಲು ಎಸೆಯುತ್ತಿದ್ದಾರೆ. ಮಹಿಳೆಯರು ಇನ್ನಷ್ಟು ಶಕ್ತಿಯುತವಾಗಿ, ಜಾಗೃತಿಯಿಂದ ಇರಬೇಕು’ ಎಂದು ಹೇಳಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್. ವಿಮಲಾ, ‘ಸ್ವಾತಂತ್ರ್ಯವು ಎಲ್ಲರಿಗೂ ಸಮಾನತೆ ತರಲಿದೆ ಎಂಬ ಉದ್ದೇಶದೊಂದಿಗೆ ಸ್ವಾತಂತ್ರ್ಯ ಚಳವಳಿ ನಡೆದಿತ್ತು. ಆದರೆ, ಅಸಮಾನತೆ ಮುಂದುವರಿದಿದೆ. ಕಳೆದ 40 ವರ್ಷದಿಂದ ಜನವಾದಿ ಸಂಘಟನೆಯು ವರದಕ್ಷಿಣೆ ಕಿರುಕುಳ, ಬಾಲ್ಯವಿವಾಹದ ವಿರುದ್ಧ ಹೋರಾಟ ನಡೆಸಿಕೊಂಡು ಬರುತ್ತಿದೆ. ಧರ್ಮ, ಕೋಮು ಹೆಸರಿನಲ್ಲಿ ಸಂಘರ್ಷಗಳು ನಡೆಯುತ್ತಿರುವುದು ದುರಂತ’ ಎಂದು ವಿಷಾದಿಸಿದರು.

> **ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಕಸಿಯಲಾಗುತ್ತಿದೆ. ಉದ್ಯೋಗಾವಕಾಶ ಕಡಿಮೆಯಾಗಿವೆ. ಆಸ್ತಿಯ ಹಕ್ಕು, ಶಿಕ್ಷಣದ ಹಕ್ಕನ್ನೂ ಕಸಿಯುವ ಪ್ರಯತ್ನ ನಡೆಯುತ್ತಿವೆ**
> **ಕೆ.ಎಸ್.ವಿಮಲಾ,** ಉಪಾಧ್ಯಕ್ಷೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ದೇವಿ ಅಧ್ಯಕ್ಷತೆ ವಹಿಸಿದ್ದರು. ವಿಚಾರಗೋಷ್ಠಿಯಲ್ಲಿ ಸಂಘಟನೆಯ ರಾಜ್ಯ ಸಹ ಕಾರ್ಯದರ್ಶಿ ವಿಜಯಕುಮಾರಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಖಜಾಂಚಿ ಲಲಿತಾ ಶೆಣೈ ಹಾಜರಿದ್ದರು.

‘ಈವರೆಗೆ ಒಂದೂ ಮನೆ ನಿರ್ಮಿಸದ ಗುತ್ತಿಗೆದಾರ’

ಬೆಂಗಳೂರು: 12 ವರ್ಷಗಳ ಹಿಂದೆ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮನೆಗಳನ್ನು ನಿರ್ಮಿಸಲು ಗುತ್ತಿಗೆ ಪಡೆದಿದ್ದ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಉದಯ ಗರುಡಾಚಾರ್ ಮಾಲೀಕತ್ವದ ಗುತ್ತಿಗೆ ಕಂಪನಿಯು ಈವರೆಗೆ ಒಂದೂ ಮನೆ ನಿರ್ಮಿಸಿಲ್ಲ ಎಂದು ಆರೋಪಿಸಿ ‘ಇಡಬ್ಲ್ಯುಸ್ ಮನೆ ಕಳೆದುಕೊಂಡವರ ಹೋರಾಟ ಸಮಿತಿ’ ಆರೋಪಿಸಿದೆ.

20 ವರ್ಷಗಳ ಹಿಂದ ಶಾಂತಿನಗರ ವಿಧಾನಸಭೆ ವ್ಯಾಪ್ತಿಯಲ್ಲಿ ಆರ್ಥಿಕ ಹಿಂದುಳಿದವರ ವರ್ಗಗಳಿಗೆ ನಿರ್ಮಿಸಿದ ಮನೆಗಳು ಕಳಪೆ ಗುಣಮಟ್ಟದ ಕಾರಣ ಕುಸಿದು ಬಿದ್ದಿದ್ದವು. 18 ತಿಂಗಳಲ್ಲಿ ಮನೆ ನಿರ್ಮಿಸಿ ಕೊಡುವಂತೆ 2012ರಲ್ಲಿ ಹೈಕೋರ್ಟ್ ಗುತ್ತಿಗೆದಾರರಿಗೆ ಆದೇಶ ನೀಡಿತ್ತು. ಆದರೂ ಗುತ್ತಿಗೆದಾರರು ಈವರೆಗೆ ಒಂದೂ ಮನೆ ನಿರ್ಮಿಸಿಲ್ಲ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಅಧ್ಯಕ್ಷ ಎನ್.ಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

15 ಎಕರೆ ಪ್ರದೇಶದಲ್ಲಿ ನಿರ್ಮಿಸಿದ್ದ ಕಳಪೆ ಗುಣಮಟ್ಟದ ಮನೆಗಳನ್ನು ಸರ್ಕಾರವೇ ನೆಲಸಮಗೊಳಿಸಿತ್ತು. ಮನೆಗಳನ್ನು ಕಳೆದುಕೊಂಡ ಎಲ್ಲರಿಗೂ ಮತ್ತೆ ಮನೆ ನಿರ್ಮಿಸಿಕೊಡಲು ಸರ್ಕಾರ ನೀಲನಕ್ಷೆಯನ್ನು ಸಿದ್ಧಪಡಿಸಿತ್ತು. 1512 ಬಡ ಕುಟುಂಬಗಳಿಂದ ಸರ್ಕಾರ ನಿಗದಿಗೊಳಿಸಿದ ಹಣವನ್ನು ಕಟ್ಟಿಸಿಕೊಂಡಿದೆ. 2010ರಲ್ಲಿ ಟೆಂಡರ್ ಪ್ರಕ್ರಿಯೆ ಮೂಲಕ ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್ ಮಾಲೀಕತ್ವದ ಕಟ್ಟಡ ನಿರ್ಮಾಣ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು ಎಂದು ವಿವರ ನೀಡಿದರು.

‘ನಮ್ಮ ಮನೆ ನಮ್ಮ ಹಕ್ಕು ಘೋಷವಾಕ್ಯದೊಂದಿಗೆ ಜೂ.20ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳಲಾಗುವುದು’ ಎಂದರು.

ನಾಗರಾಜ ಶ್ರೀಮನೆ, ಮರಿಯಪ್ಪ, ಅಲಿಬಾಬಾ, ವೇದಾವತಿ, ಕೃಷ್ಣ, ಗಾಯತ್ರಿ, ಚಾಂದಬಿ ಇದ್ದರು.

ನಗರದಲ್ಲಿ ಇಂದು

ಕಲ್ಯಾಣಮ್ಮ ಹಾಗೂ ಕೆ.ಟಿ.ಬನಶಂಕರಮ್ಮ ಪ್ರಶಸ್ತಿ ಪ್ರದಾನ ಸಮಾರಂಭ: ಅಧ್ಯಕ್ಷತೆ: ಕೆ.ಮೋಹನ್ ದೇವ್ ಆಳ್ವ, ಪ್ರಶಸ್ತಿ ಪ್ರದಾನ: ಸಿ.ಜಿ.ಶ್ರೀನಿವಾಸ್, ಬಿ.ವಿ. ಸುಬ್ಬರಾವ್, ಆಯೋಜಕರು: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಳಿಗ್ಗೆ: 10

‘ಮಹಿಳಾ ಅಸಮಾನತೆಯ ನೆಲೆಗಳು ಮತ್ತು ಮುಂದಿನ ದಾರಿ’ ವಿಚಾರಗೋಷ್ಠಿ: ವಿಷಯ ಮಂಡನೆ: ಎಚ್.ಎನ್. ನಾಗಮೋಹನ್ ದಾಸ್, ಶಾಂತಕುಮಾರಿ, ಅಧ್ಯಕ್ಷತೆ: ಚಂದ್ರಕುಮಾರಿ, ಆಯೋಜಕರು: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸ್ಥಳ: ಸೌಹಾರ್ದ ನಂ.:1, 1ನೇ ಅಡ್ಡ ರಸ್ತೆ, ಸಿಎಸ್‌ಐ ಕಾಂಪೌಂಡ್, ಮಿಷನ್ ರಸ್ತೆ , ಸುಬ್ಬಯ್ಯ ಸರ್ಕಲ್ ಹತ್ತಿರ, ಬೆಳಿಗ್ಗೆ: 10.30

ನಾಗಮೋಹನ್ ದಾಸ್

ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘದ ಉದ್ಘಾಟನೆ: ಉದ್ಘಾಟನೆ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಉಪಸ್ಥಿತಿ: ಕೋಟಾ ಶ್ರೀನಿವಾಸ ಪೂಜಾರಿ, ಆನಂದ್ ಸಿಂಗ್, ಅತಿಥಿಗಳು: ಎಚ್.ಬಿಳ್ಳಪ್ಪ, ಬಿ.ಕೆ. ಹರಿಪ್ರಸಾದ್, ಅಧ್ಯಕ್ಷತೆ: ಸುರೇಶ್ ಎಂ. ಲಾತೂರ, ಆಯೋಜನೆ: ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ: 4

ಎನ್‌ಇಪಿ ಎಕ್ಸ್‌ಪೀರಿಯನ್ಸ್ ಲರ್ನಿಂಗ್ ಸ್ಟೇಷನ್ ಉದ್ಘಾಟನಾ ಸಮಾರಂಭ: ಅತಿಥಿಗಳು: ಗುರುರಾಜ ಕರಜಗಿ, ಹೇರಂಬ ಕುಲಕರ್ಣಿ, ಅಧ್ಯಕ್ಷತೆ: ಡಾ.ಕೆ. ಎಸ್.ಸಮೀರಾ ಸಿಂಹ, ಆಯೋಜಕರು: ಸಿಲಿಕಾನ್ ಸಿಟಿ ಆಫ್ ಸೆಕೆಂಡರಿ ಎಜುಕೇಷನ್ ಸಂಸ್ಥೆ, ಸ್ಥಳ: ಸಿಲಿಕಾನ್ ಸಿಟಿ ಆಫ್ ಸೆಕೆಂಡರಿ ಎಜುಕೇಶನ್ ಸಂಸ್ಥೆ ಆವರಣ, ಸಂಜೆ: 5

ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತ್ಯುತ್ಸವ: ಅತಿಥಿಗಳು: ಡಾ.ಲಕ್ಷ್ಮೀಪತಿ, ಅಧ್ಯಕ್ಷತೆ: ನಾಗಾ ಹನುಮಯ್ಯ, ಆಯೋಜಕರು: ಕೇಂದ್ರೀಯ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ ಮತ್ತು ಸಿಎಂಟಿಐ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಂಘ, ಸ್ಥಳ: ಸಿಎಂಟಿಐ ಸಂಸ್ಥೆ ಸಭಾಂಗಣ, ತುಮಕೂರು ರಸ್ತೆ, ಮಧ್ಯಾಹ್ನ: 2.30

ಚಂದ್ರನಾಥ ಆಚಾರ್ಯ ಅವರ ಚಿತ್ರಕಲಾ ಪ್ರದರ್ಶನ ಉದ್ಘಾಟನಾ ಸಮಾರಂಭ: ಅತಿಥಿಗಳು: ಚಿರಂಜೀವಿ ಸಿಂಗ್, ಎಸ್. ಜಿ.ವಾಸುದೇವ್, ಎ.ಆರ್.ಮಿತ್ರಾ, ಡಾ.ಆರ್.ಗಣೇಶ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ನಂ.:6 ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ: 11

ಮೂಡಲ್ ಕುಣಿಗಲ್ ಕೆರೆ ವಿಚಾರ ಸಂಕಿರಣ: ಅಧ್ಯಕ್ಷತೆ: ಜಾಣಗೆರೆ ವೆಂಕಟರಾಮಯ್ಯ, ವಿಷಯ ಮಂಡನೆ: ಡಾ.ತಲಕಾಡು ಚಿಕ್ಕರಂಗೇಗೌಡ, ಕೆ.ಜಿ. ಕುಮಾರ್, ಆಯೋಜಕರು: ಹಸಿರು ಪ್ರತಿಷ್ಠಾನಾ, ಸ್ಥಳ: ಅಭಿಮಾನಿ ಇನ್ ಕನ್ವೆನ್‌ಷನ್ ಸೆಂಟರ್, 2ನೇ ಮಹಡಿ, ಬಸವೇಶ್ವರನಗರ, ಸಂಜೆ: 4.30

ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ಸೂಚನೆ

ಒಂದನೇ ಪುಟದಿಂದ...

ವಾರದ ಕೋವಿಡ್ ದೃಢಪಡುವಿಕೆ ದರ ಶೇ 0.63ರಿಂದ (ಜೂನ್ 1) ಶೇ 1.12ಕ್ಕೆ (ಜೂನ್ 8) ಏರಿಕೆಯಾಗಿದೆ.

ಪ್ರತಿ ಹತ್ತು ಲಕ್ಷ ಜನಸಂಖ್ಯೆಗೆ ಸರಾಸರಿ ಎಷ್ಟು ಪರೀಕ್ಷೆಗಳನ್ನು ಮಾಡಲಾಗುತ್ತಿದೆ ಹಾಗೂ ಈ ಪರೀಕ್ಷೆಗಳ ಪೈಕಿ ಆರ್‌ಟಿ–ಪಿಸಿಆರ್ ಪಾಲು ಎಷ್ಟು ಎಂಬುದರ ಮೇಲೆ ರಾಜ್ಯಗಳು ನಿಗಾ ವಹಿಸಬೇಕು ಎಂದು ಸರ್ಕಾರ ಸೂಚಿಸಿದೆ. ಇದರಿಂದಾಗಿ, ಅಗತ್ಯವಿರುವ ಕಡೆ ಮುಂಜಾಗ್ರತಾ ಕ್ರಮ ಕೈಕೊಳ್ಳಲು ಅನುಕೂಲವಾಗುತ್ತದೆ ಎಂದು ವಿವರಿಸಿದೆ.

24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 7,240 ಹೊಸ ಸೋಂಕಿತರು ಕಂಡುಬಂದಿದ್ದಾರೆ. ಇದರಲ್ಲಿ ಶೇ 81ರಷ್ಟು ಪ್ರಕರಣಗಳು ಮಹಾರಾಷ್ಟ್ರ, ಕೇರಳ, ದೆಹಲಿ ಮತ್ತು ಕರ್ನಾಟಕದಲ್ಲಿ ವರದಿಯಾಗಿವೆ.

ಮಹಾರಾಷ್ಟ್ರ, ದೆಹಲಿಯಲ್ಲಿ ಪ್ರಕರಣ ಏರಿಕೆ: ಮಹಾರಾಷ್ಟ್ರದಲ್ಲಿ 24 ಗಂಟೆಗಳ ಅವಧಿಯಲ್ಲಿ 2,813 ಪ್ರಕರಣಗಳು ವರದಿಯಾಗಿದ್ದು, ಇದು ನಾಲ್ಕು ತಿಂಗಳಲ್ಲೇ ಅಧಿಕ. ಕೋವಿಡ್‌ನಿಂದ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 11,571ಕ್ಕೆ ಏರಿಕೆಯಾಗಿದೆ. ಮುಂಬೈ ನಗರವೊಂದರಲ್ಲೇ 1,702 ಜನರಿಗೆ ಸೋಂಕು ದೃಢಪಟ್ಟಿದೆ.

ದೆಹಲಿಯಲ್ಲಿ 622 ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಇಬ್ಬರು ಮೃತಪಟ್ಟಿದ್ದಾರೆ. ದೃಢಪಡುವಿಕೆ ದರವು ಶೇ 3.17ಕ್ಕೆ ಹೆಚ್ಚಳವಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1,774ಕ್ಕೆ ಏರಿಕೆಯಾಗಿದೆ. ನಗರದಲ್ಲಿ ಕೋವಿಡ್ ರೋಗಿಗಳಿಗಾಗಿ 9,630 ಹಾಸಿಗೆಗಳನ್ನು ಮೀಸಲಿರಿಸಲಾಗಿದೆ.

‘ಬಿಬಿಎಂಪಿ ಚುನಾವಣೆಗೆ ಐಕ್ಯರಂಗ ಒಕ್ಕೂಟದಿಂದ ಸ್ಪರ್ಧೆ’

ಬೆಂಗಳೂರು: ಕರ್ನಾಟಕ ರಾಷ್ಟ್ರ ಸಮಿತಿ, ಸಂಯುಕ್ತ ಜನತಾದಳ ಮತ್ತು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ (ಡಬ್ಲ್ಯುಪಿಐ) ಪಕ್ಷಗಳು ಬಿಬಿಎಂಪಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸೇರಿದಂತೆ 2023ರ ವಿಧಾನಸಭೆ ಚುನಾವಣೆಗಳಲ್ಲಿ ಮೈತ್ರಿಕೂಟದ ಮೂಲಕ ಸ್ಪರ್ಧಿಸಲಿವೆ ಎಂದು ಸಂಯುಕ್ತ ಜನತಾ ದಳದ ರಾಜ್ಯಾಧ್ಯಕ್ಷ ಮಹಿಮ.ಜೆ.ಪಟೇಲ್ ತಿಳಿಸಿದರು.

ಕಳೆದ ಎರಡು ದಶಕಗಳಿಂದ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಅನೀತಿ ರಾಜಕಾರಣ, ಭ್ರಷ್ಟಾಚಾರ ಮತ್ತು ಅಕ್ರಮ ನೇಮಕಾತಿಗಳಿಂದ ಜನ ಬೇಸತ್ತಿದ್ದಾರೆ. ಈ ಕೊಳೆತ ವ್ಯವಸ್ಥೆ ಸುಧಾರಿಸಲು ಮೈತ್ರಿ ಮಾಡಿಕೊಳ್ಳಲಾಗಿದೆ ಎಂದು ಗುರುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೆಆರ್‌ಎಸ್ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣರೆಡ್ಡಿ ಮಾತನಾಡಿ, ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿಯ ಅನೀತಿ ರಾಜಕಾರಣ, ಭ್ರಷ್ಟಾಚಾರ ದುರಾಡಳಿತದಿಂದಾಗಿ ರಾಜ್ಯ ರಾಜಕೀಯವು ಹಿಂದೆಂದೂ ಕಾಣದ ಅಧೋಗತಿಗೆ ತಲುಪಿದೆ ಎಂದು ಆರೋಪಿಸಿದರು.

ಮುಂಬರುವ ಬಿಬಿಎಂಪಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಸ್ಥಾನ ಹೊಂದಾಣಿಕೆ, ಜಂಟಿ ಪ್ರಚಾರ ಹಾಗೂ ಕನಿಷ್ಠ ಕಾರ್ಯಕ್ರಮಗಳ ಮೂಲಕ ಮೈತ್ರಿಕೂಟವನ್ನು ಮುನ್ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳ ಭ್ರಷ್ಟ, ಲಂಚಕೋರ ಜನಪ್ರತಿನಿಧಿಗಳ ವಿರುದ್ಧ ರೋಸಿ ಹೋಗಿರುವ ಜನ ಬದಲಾವಣೆಯನ್ನು ಬಯಸುತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ಮೌಲ್ಯ ಆಧಾರಿತ ರಾಜಕಾರಣ, ಸಾಮಾಜಿಕ ನ್ಯಾಯ ದಕ್ಷ ಆಡಳಿತ ಸಮಾಜವಾದಿ ಆಶಯಗಳನ್ನು ಮುನ್ನೆಲೆಗೆ ತರುವ ಅವಶ್ಯಕತೆ ಇದೆ ಎಂದು ಡಬ್ಲ್ಯುಪಿಐ ರಾಜ್ಯಾಧ್ಯಕ್ಷ ತಾಹೀರ್ ಹುಸೇನ್ ಹೇಳಿದರು.

22ಕ್ಕೆ ಜೆಡಿಎಸ್ ‘ಜನತಾ ಸೇವಕ’

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ‘ಜನತಾ ಸೇವಕ’ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಗಿದ್ದು, ಇದೇ 22ರಂದು ಚಾಲನೆ ನೀಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರದಲ್ಲಿರುವ ಸಮಸ್ಯೆಗಳ ಬಗ್ಗೆ ಅರಿಯಲು ಹಾಗೂ ಜನಾಭಿಪ್ರಾಯ ಮೂಡಿಸಲು ಜನತಾ ಸೇವಕ ಕಾರ್ಯಕ್ರಮ ರೂಪಿಸಲಾಗಿದೆ. ಬಸವನಗುಡಿ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದರು.

‘ಕಾರ್ಯಕ್ರಮಕ್ಕೆ 15 ವಾಹನಗಳನ್ನು ಸಿದ್ಧಪಡಿಸಲಾಗಿದ್ದು, ನಗರದ ಗಲ್ಲಿ, ಗಲ್ಲಿಗೂ ಹೋಗಿ ಜನರಿಗೆ ನಮ್ಮ ಪಕ್ಷ ಕೊಟ್ಟಿದ್ದೇನು’ ಎಂದು ತಿಳಿಸುವುದಾಗಿ ಹೇಳಿದರು.

ಕೋವಿಡ್ ಪ್ರಕರಣ ಮತ್ತಷ್ಟು ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಏರಿಕೆ ಕಂಡಿದ್ದು, ಒಂದೇ ದಿನ 471 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ರಾಜಧಾನಿಯಲ್ಲೇ 458 ಮಂದಿಗೆ ಸೋಂಕು ತಗುಲಿದೆ. ಇತ್ತೀಚಿನ ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 3, ಬೀದರ್ 2, ದಕ್ಷಿಣ ಕನ್ನಡ 3, ಧಾರವಾಡ 3, ಕಲಬುರಗಿ 1, ಉಡುಪಿ ಜಿಲ್ಲೆಯಲ್ಲಿ 1 ಪ್ರಕರಣಗಳು ವರದಿಯಾಗಿವೆ.

ರಾಜ್ಯದಲ್ಲಿ ಗುರುವಾರ ಕೋವಿಡ್ ಮರಣ ಪ್ರಕರಣ ವರದಿಯಾಗಿಲ್ಲ. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗಿದ್ದವು. ಈಗ ಏಕಾಏಕಿ ಪ್ರಕರಣಗಳು ಏರಿಕೆ ಕಾಣಿಸುತ್ತಿದ್ದು, ಪರೀಕ್ಷೆ ಹೆಚ್ಚಿಸಲಾಗಿದೆ. ಗುರುವಾರ 21,927 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು.

ರಾಜ್ಯದಲ್ಲಿ 214 ಮಂದಿ ಆಸ್ಪತ್ರೆಯಿಂದ ಗುಣಮುಖರಾಗಿ 214 ಮಂದಿ ಬಿಡುಗಡೆಯಾಗಿದ್ದಾರೆ. ಸಕ್ರಿಯ ಪ್ರಕರಣಗಳು 2,880ಕ್ಕೆ ಏರಿಕೆಯಾಗಿವೆ. ಕೋವಿಡ್ ದೃಢ ಪ್ರಮಾಣವು ಶೇ 2.14ರಷ್ಟಿದೆ. ಬೆಂಗಳೂರಿನಲ್ಲಿ ಗುರುವಾರ 208 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. 2,776 ಸಕ್ರಿಯ ಪ್ರಕರಣಗಳಿವೆ.

ಲೈಂಗಿಕ ದೌರ್ಜನ್ಯ: ಯುವಕನಿಗೆ 20 ವರ್ಷ ಜೈಲು ಶಿಕ್ಷೆ

ಕೋಲಾರ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ 27 ವರ್ಷದ ಮುನಿರಾಜು ಎಂಬ ವ್ಯಕ್ತಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯ ಗುರುವಾರ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ.ಪಿ.ದೇವಮಾನೆ ಅವರು, ಅಪರಾಧಿಗೆ ₹20 ಸಾವಿರ ದಂಡವನ್ನೂ ವಿಧಿಸಿದ್ದು, ಬಾಲಕಿಗೆ ₹5 ಲಕ್ಷ ಪರಿಹಾರ ನೀಡುವಂತೆಯೂ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಡಿ. ಲಲಿತಾಕುಮಾರಿ ವಾದ ಮಂಡಿಸಿದ್ದರು.

ಪ್ರಥಮ ವರ್ಷದ ಪುಣ್ಯಸ್ಮರಣೆ

ಶ್ರೀ ಪಿ. ಸಿದ್ಧಾರ್ಥ ರೆಡ್ಡಿ

ಜೂನ್ 12, 2021 ರಂದು ದೆಹಲಿಯ ಪತ್ರಿಕೆ Sunday Guardian ಸಿದ್ಧಾರ್ಥರವರ ವ್ಯಕ್ತಿತ್ವ ಹಾಗೂ ಸಾಧನೆ ಬಗ್ಗೆ ವರ್ಣನೆ ಮಾಡುತ್ತಾ ಹೀಗೆ ಹೇಳಿದ್ದಾರೆ, “Siddhartha Reddy was India class, alas Indian Politics never gave him his due. He should have been capped long back”. ಸತ್ಯ, ಸಿದ್ಧಾರ್ಥರವರು ದೇಶ ಕಂಡ ಒಬ್ಬ ಮೇಧಾವಿ ವ್ಯಕ್ತಿ. ಅವರ ಅಗಾಧವಾದ ಪ್ರತಿಭೆ, ಅಪ್ರತಿಮ ದೇಶಭಕ್ತಿ, ದೇಶದ ಹಿತ ಚಿಂತನೆಯಲ್ಲಿ ದಣಿವರಿಯದ ಶ್ರಮ, ಅಚಲ ಆತ್ಮ ವಿಶ್ವಾಸ ಮಹಾ ನಾಯಕರುಗಳ ಮತ್ತು ವಿವಿಧ ಕ್ಷೇತ್ರದ ದಿಗ್ಗಜರುಗಳ ಗಮನ ಸೆಳೆದು ಗೌರವಕ್ಕೆ ಪಾತ್ರರಾದ ವ್ಯಕ್ತಿ.

ಅತಿ ಕಿರಿಯ ವಯಸ್ಸಿನಲ್ಲಿ ರಾಜೀವ್ ಗಾಂಧಿಯವರ ಸಹವರ್ತಿಯಾಗಿ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶ. ರಾಜೀವ್ ಗಾಂಧಿಯವರು ಸಾಧಿಸಿದ ತಂತ್ರಜ್ಞಾನ ಅಭಿವೃದ್ಧಿಯ ಯಶಸ್ಸಿನ ಹಿಂದೆ ಹಾಗೂ ಇನ್ನಿತರ ಕಾರ್ಯಗಳ ಹಿಂದೆ ಸಿದ್ಧಾರ್ಥರವರ ಪಾತ್ರವೂ ಇದೆ. ರಾಜೀವ್ ಗಾಂಧಿಯವರ ಪ್ರತಿನಿಧಿಯಾಗಿ ಅಮೇಥಿ ಚುನಾವಣಾ ಜವಾಬ್ದಾರಿಯನ್ನು ಹೊತ್ತಿದ್ದರು ಹಾಗೂ ಅಮೇಥಿ ಕ್ಷೇತ್ರದಲ್ಲಿ ಮಾಡಿದ ಅಭಿವೃದ್ಧಿ ಕಾರ್ಯದ ಬಗ್ಗೆ ಶ್ರೀಮತಿ ಸೋನಿಯಾ ಗಾಂಧಿಯವರು ತಮ್ಮ ಸಂತಾಪ ಸೂಚನ ಪತ್ರದಲ್ಲಿ ಸ್ಮರಿಸಿದ್ದಾರೆ.

ಸಿದ್ಧಾರ್ಥರವರು ಕೆಲಕಾಲ ದೆಹಲಿ, Asian age ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಮುಂದೆ ಅವರದೇ Website: Politicsparty.com ನಲ್ಲಿ ಕೊನೆಯತನಕ 18 ವರ್ಷ ನಿರಂತರವಾಗಿ ದೇಶ ಹಿತರಕ್ಷಣೆ ಮತ್ತು ಜನ ಜಾಗೃತಿಗೆ ಸತ್ಯದ ವಿಚಾರವನ್ನು ಅನಾವರಣಗೊಳಿಸುತ್ತಿದ್ದ ಅವರ ಹರಿತವಾದ ಲೇಖನಗಳಿಂದ ಅಪಾರವಾದ ಓದುಗರನ್ನು ದೇಶ ವಿದೇಶದಲ್ಲಿ ಪಡೆದಿದ್ದರು. ದೇಶದ ಮಹಾ-ಮಹಾ ನಾಯಕರು ಅವರೊಡನೆ ಚರ್ಚಿಸುತ್ತಿದ್ದರು, ಸಲಹೆಗಳನ್ನು ಪಡೆಯುತ್ತಿದ್ದರು.

ಇಂತಹ ಮಹಾ ವ್ಯಕ್ತಿಯ ಜೀವನದಲ್ಲಿ
ನಾವು ಭಾಗವಾಗಿದ್ದು ನಮ್ಮ ಭಾಗ್ಯ
ಸಿದ್ಧಾರ್ಥರವರ ಆಕರ್ಷಕ ವ್ಯಕ್ತಿತ್ವ ಒಂದು ಸ್ಫೂರ್ತಿ
ಸಿದ್ಧಾರ್ಥ ಮತ್ತೊಮ್ಮೆ ಹುಟ್ಟಿಬನ್ನಿ......

ಶ್ರೀಮತಿ ಡಿ.ಕೆ. ತಾರಾದೇವಿ ಸಿದ್ಧಾರ್ಥ
ಮಾಜಿ ಕೇಂದ್ರ ಸಚಿವೆ

ಶ್ರೀ ಡಿ. ಕೆ. ಉದಯಶಂಕರ್ ಮತ್ತು ಕುಟುಂಬ,
ಮಾಜಿ ಉಪಾಧ್ಯಕ್ಷರು, ಕಾಫಿ ಮಂಡಳಿ, ಭಾರತ ಸರ್ಕಾರ, ಮೂಡಿಗೆರೆ
ಶ್ರೀ ರಾಮ್ ರೆಡ್ಡಿ ಮತ್ತು ಕುಟುಂಬ,
ಪ್ರಿಯದರ್ಶಿನಿ, ಅಡ್ವರ್ಟೈಸಿಂಗ್ ಕಂಪನಿ, ಹೈದರಾಬಾದ್, ಬಂಧುಗಳು–ಅಭಿಮಾನಿಗಳು

ಯುವಿಸಿಇ ‘ಆರ್ ಆ್ಯಂಡ್ ಡಿ’ ನೀತಿ ಜಾರಿ–ಮುಖ್ಯಮಂತ್ರಿ

ಬೆಂಗಳೂರು: ‘ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ (ಯುವಿಸಿಇ) ಆರ್ ಆ್ಯಂಡ್ ಡಿ ನೀತಿಯನ್ನು ಅನುಷ್ಠಾನಕ್ಕೆ ತರುವ ಮುಂಚೂಣಿ ಸಂಸ್ಥೆ ಆಗಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶಿಸಿದರು.

ಉನ್ನತ ಶಿಕ್ಷಣ ಇಲಾಖೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ಯುವಿಸಿಇ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಹಾಗೂ ನವೀಕರಿಸಿರುವ ಕಟ್ಟಡಗಳನ್ನು ಗುರುವಾರ ಉದ್ಘಾಟಿಸಿ, ನೂತನ ಮೆಕ್ಯಾನಿಕಲ್ ವಿಭಾಗದ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

‘ರಾಜ್ಯದ ಏಳು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಟ್ಟಕ್ಕೆ ಮೇಲ್ದರ್ಜೆಗೇರಿಸಲಾಗುತ್ತಿದೆ. ಕಾಲಮಿತಿಯೊಳಗೆ ಇದನ್ನು ಅನುಷ್ಠಾನಕ್ಕೆ ತಂದು ಇಡೀ ದೇಶಕ್ಕೆ ಕರ್ನಾಟಕ ಕೇವಲ ಪ್ರಗತಿಪರ ರಾಜ್ಯ ಮಾತ್ರವಲ್ಲ, ಅತ್ಯಂತ ಕೌಶಲಯುಕ್ತ ಯುವಕರನ್ನು ಒದಗಿಸಬಲ್ಲದು ಎಂದು ನಿರೂಪಿಸಲಾಗುವುದು’ ಎಂದರು.

‘ಪದವಿ ಕಾಲೇಜು: ವಸ್ತ್ರಸಂಹಿತೆ ಕಡ್ಡಾಯ ಆದೇಶ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸಮವಸ್ತ್ರ ಅಥವಾ ವಸ್ತ್ರಸಂಹಿತೆ ಕುರಿತಂತೆ ಯಾವುದೇ ಆದೇಶ ಅಥವಾ ಸುತ್ತೋಲೆ ಹೊರಡಿಸಿಲ್ಲ’ ಎಂದು ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಆಗಿರುವ ಜಂಟಿ ನಿರ್ದೇಶಕರು ಸ್ಪಷ್ಟಪಡಿಸಿದ್ದಾರೆ.

ಕೋಲಾರ ಜಿಲ್ಲೆಯ ಬಂಗಾರಪೇಟೆ ನಿವಾಸಿ ಇಕ್ಬಾಲ್ ಅಹ್ಮದ್ ಎಂಬುವವರು ಮಾಹಿತಿ ಹಕ್ಕಿನಡಿ ಕೇಳಿದ ಮಾಹಿತಿಗೆ ಇಲಾಖೆ ಈ ಉತ್ತರ ನೀಡಿದೆ. ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ವಸ್ತ್ರ ಸಂಹಿತೆ ಕಡ್ಡಾಯವೇ ಅಥವಾ ಅಲ್ಲವೇ ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ಅವರು ಕೇಳಿದ್ದರು.

‘ಕನ್ನಡ ಸಂಸ್ಕೃತಿ ಕಡೆಗಣನೆ ಮಾಡಿರುವ ಪಠ್ಯಪುಸ್ತಕ ಮಕ್ಕಳಿಗೆ ಬೇಡ’

ಬೆಂಗಳೂರು: ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತಗಳ ಪರಿಷ್ಕೃತ ಪಠ್ಯಗಳಲ್ಲಿ ಅಕ್ಕಮಹಾದೇವಿ, ಕನಕ ದಾಸರು, ಪುರಂದರದಾಸರು ಮತ್ತು ಸಂತ ಶಿಶುನಾಳ ಶರೀಫರ ವಿವರಗಳನ್ನು ತೆಗೆದುಹಾಕಿರುವುದು ನಾಡು–ನುಡಿ, ಸಂಸ್ಕೃತಿಗೆ ಮಾಡಿದ ಘೋರ ಅವಮಾನ ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಟೀಕಿಸಿದ್ದಾರೆ.

ಬರಗೂರರ ಸಮಿತಿಯ ಪಠ್ಯ ಪುಸ್ತಕಗಳನ್ನು ಕೂಡಲೇ ಮಕ್ಕಳಿಗೆ ವಿತರಿಸಬೇಕೆಂದು ಅವರು ಸರ್ಕಾರವನ್ನು ಪ್ರಕಟಣೆಯ ಮೂಲಕ ಒತ್ತಾಯಿಸಿದ್ದಾರೆ.

ಅಕ್ಕಮಹಾದೇವಿ, ಬಸವಣ್ಣನವರುವಚನಗಳ ಮೂಲಕ ಜಾಗೃತಿ ಮೂಡಿಸಿದವರು. ಕನಕದಾಸರು, ಪುರಂದರದಾಸರು, ಸಂತ ಶಿಶುನಾಳ ಶರೀಫರ ವಿಚಾರಧಾರೆಗಳನ್ನು ನಮ್ಮ ಮಕ್ಕಳಿಗೆ ತಿಳಿಸುವುದು ಬೇಡವೇ’ ಎಂದು ಪ್ರಶ್ನಿಸಿದ್ದಾರೆ.

ನಮ್ಮ ರಾಜ್ಯದ ಪಠ್ಯಪುಸ್ತಕಗಳಲ್ಲಿಯೂ ನಮ್ಮ ಇತಿಹಾಸ, ಸಂಸ್ಕೃತಿಗಳಿಗಿಂತಲೂ ಉತ್ತರ ಭಾರತದ ಸಂತರು ಮತ್ತು (ಕಾರ್ಕೋಟ, ಅಹೋಮ್ ಇತ್ಯಾದಿ) ಸಂತತಿಗಳಿಗೆ ಇನ್ನಿಲ್ಲದ ಪ್ರಾತಿನಿಧ್ಯ ನೀಡುವುದು ಕನ್ನಡಿಗರ ಸ್ವಾಭಿಮಾನವನ್ನು ಕೆರಳಿಸುತ್ತದೆ. ರೋಹಿತ್ ಚಕ್ರತೀರ್ಥ ಅವರಂತಹ ಮನಃಸ್ಥಿತಿಯವರು ಮಾಡಿರುವ ಇಂತಹ ವಂಚನೆಯನ್ನು ಕನ್ನಡಿಗರು ಎಂದೂ ಸಹಿಸುವುದಿಲ್ಲ ಎಂದು ದೂರಿದ್ದಾರೆ.

ವಾರ್ಡ್ ಮರು ವಿಂಗಡಣೆ: ಕರಡು ಸಲ್ಲಿಕೆ

ಬೆಂಗಳೂರು: ಭಾರೀ ಗೋಪ್ಯತೆ ಕಾಪಾಡಿಕೊಂಡು ಸಿದ್ಧಪಡಿಸಿರುವ ಬಿಬಿಎಂಪಿ ವಾರ್ಡ್ ಮರು ವಿಂಗಡಣೆ ಕರಡು ಕೊನೆಗೂ ಸರ್ಕಾರಕ್ಕೆ ಗುರುವಾರ ಸಲ್ಲಿಕೆಯಾಗಿದೆ.

198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಏರಿಕೆ ಮಾಡಿ ಸಿದ್ಧಪಡಿಸಿರುವ ಕರಡು ವರದಿಯನ್ನು ನಗರಾಭಿವೃದ್ಧಿ ಇಲಾಖೆಗೆ ಬಿಬಿಎಂಪಿ ಅಧಿಕಾರಿಗಳು ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರಿಶೀಲಿಸಿದ ಬಳಿಕ ಸಾರ್ವಜನಿಕ ಆಕ್ಷೇಪಣೆಗೆ ನಗರಾಭಿವೃದ್ಧಿ ಇಲಾಖೆ ಪ್ರಕಟಿಸಲಿದೆ. ಶುಕ್ರವಾರ ರಾತ್ರಿ ಅಥವಾ ಶನಿವಾರ ಸಾರ್ವಜನಿಕರಿಗೆ ಈ ಕರಡು ಲಭ್ಯವಾಗುವ ಸಾಧ್ಯತೆ ಇದೆ.

120ಕ್ಕೂ ಹೆಚ್ಚಿನ ವಾರ್ಡ್‌ಗಳ ಗಡಿ ಬದಲಾಗಿದ್ದು, ಕೆಲವು ವಾರ್ಡ್‌ಗಳು ಹಿಂದಿನ ಸ್ವರೂಪವನ್ನೇ ಕಳೆದುಕೊಂಡಿವೆ ಎಂದು ಮೂಲಗಳು ತಿಳಿಸಿವೆ.

CONNECT ಕ್ಲಾಸಿಫೈಡ್ಸ್

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ! ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ

ಹಸ್ತಶಿಲ್ಪಿ ಸಿಲ್ಕ್ ಇಂಡಿಯಾ® 2022

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ

10 ರಿಂದ 19 ಜೂನ್ 2022 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ

ಕಾಸಿಯಾ ಉದ್ಯೋಗ ಭವನ

17ನೇ ಕ್ರಾಸ್, 1ನೇ ಹಂತ, ಡಿ ಮಾರ್ಟ್ ಮೇಲೆ, ವಿಜಯನಗರ, ಬೆಂಗಳೂರು

ಪ್ರದರ್ಶನಗೊಳ್ಳುವ ಉತ್ಪನ್ನಗಳು : ಬಿಹಾರ್ : ತಸ್ಸರ್ ರೇಷ್ಮೆ ಸೀರೆ, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್, ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೊಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಛತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆ, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು...

Opening Today

Entry Free | All Credit & Debit Cards Accepted | Contact : +91 63641 65152 (Registered with O/o D C (H) Ministry of Textiles, Govt. of India) Organised by : hastashilpi

NEET
30 DAYS CRASH COURSE
STARTING FROM 15-06-2022 (WEDNESDAY)

FEES : Rs. 9,000 /- only

NO FEES FOR 450+ MARKS REPEATERS

LOCATION : VIJAYANAGAR (Near Metro Station)

E-mail : neetexpertindia@gmail.com

Mobile : 9449147652 Whatsapp : 9353915712

BETTER DOCTORS FOR A BETTER TOMORROW®

BISHOP COTTON WOMEN'S CHRISTIAN COLLEGE
(Affiliated to Bengaluru City University)

No.19, 3rd Cross, CSI Compound, Mission Road, Bengaluru – 560 027
Ph: 080-22212933/22129880 PUC: 22100512
Email: principal@bcwcc.edu.in Web: www.bcwcc.edu.in

NAAC RE-ACCREDITED,
Education World Rankings for 2022-23
Ranked No.1 in Karnataka and No.13 in India among India's Non-Autonomous Colleges

ADMISSIONS OPEN FOR 2022-2023

PUC	
ARTS	HEPP, HEPS
SCIENCE	PCMB, PCME, PCMC, PCBH
COMMERCE	MEBA, HEBA, SEBA, CEBA, SMBA

DEGREE	
B.Com., BCA, BBA, BBA Aviation	
B.A.	Optional English, Journalism, Political Science, History, Economics, Home Science, Psychology, Tourism, Sociology
B.Sc.	Home Science, Psychology, Zoology, Nutrition & Dietetics, Mathematics, Physics, Botany, Chemistry, Biotechnology, Computer Science

PG: M.A. English, M.Com., M.Sc. Psychology, M.Sc. Nutrition & Dietetics

Certificate Courses: Basic Tally ERP9, GST & Direct Taxes, MS Office, Capital Markets, Bio-informatics, Latest Course in IT, CA/CS Foundation Courses.

ROUNAQH

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Jayanagar

JAYANAGAR 4TH 'T' Block, Spacious 1580 sft 2 BHK Apartment for Sale, Near Cakewala 9,500/- Sft. Call:9886655869.

Kammanahalli

PRESTIGE NORTH POINT, Kammanahalli, 2 & 2.5 bed apartments available for Resale, for details call: Imran 9900078809

Koramangala

PRESTIGE PINEWOOD, Koramangala, 2 & 3 bedroom apartments available for Resale, for details, call: Karthik: 9900020184

Malleshwaram

2 AND 3 BHK Flat Sale at Malleshwaram Link Road 1 KM from Mantri Mall Metro Station, Ready to Occupy Starts from 1.35 Cr Contact: 9901556699

Uttarahalli

PRESTIGE LAKE RIDGE, Uttarahalli, 2 & 2.5 bed apartments available for Resale & Rent, for details, call: Hassaan: 9008999266

House

Basaveshwaranagar

SALE, INDEPENDENT House, MICO Layout, Mahalakshmipuram, 30X50, Duplex, 3 BHK. Rate: 2.9 Cr negotiable. Clear Titles 'Brokers Excuse' Call: 9845953151, 9845196324

Sites

Devanahalli

PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7022549452

Magadi Road

SITE FOR Sale 30x50 West Face Rashi Residency BMRD Approval Magadi Road Ph: 9740524886/ 9448205697

Vishweshwariah Layout

BDA SITE Sale Vishweshwaraiah Layout 6th Block 40x60 North Face Near BDA Complex Contact Gunuine Buyers 8892901567/ 9341733480

SMV LAYOUT 2nd Block 30X40 North & West Near Kengeri Metro Stations 2km, 5th Block 30X40 East Good Location: 9901156708

REAL ESTATE BUYING

Sites

Hebbal

WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR. Immediate settlement. "Spacelinks" 9845129934.

DH DECCAN HERALD | ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

RENTAL PROPERTIES

Accommodation Available

Flats

PRESTIGE MISTY WATERS, Vista Tower, Hebbal, 3 bed apartments available for rent, for details, call: Affan: 9900085276

JOB OPPORTUNITIES

Drivers

EXPERIENCED DRIVER'S With badge to drive SCHOOL BUSES Contact 'SECRETARY STRACEY MEMORIAL COMPOSITE PU COLLEGE' #52, St.Marks, Road, Bangalore-01 (9480316343)

WANTED DRIVER Office at Bommanahalli (Bangalore) Ph: 9344168305 / 9008755585 Email: starsilks@gmail.com

Engg/ Production Technical

LOOKING FOR Mechanical Engineering qualified Sales Engineer for power tools accessary marketing and sales. Mail your CV to: info@unikaindia.co.in Contact us : 080- 41133553

General

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

EXECUTIVE MALE Required, Transport Office, Doddaballapur, Salary 12000- 15000, Two Wheeler Must, Good Communication: 9900065150

WANTED FOR Reputed Company Graduates Age- 30-70, Bangalore only, Earn 30000- 50000. Contact: 9008305194/ 6364099311.

Marketing & Sales

REQ, TEAMLEADER, Telecaller, & Field executive for Banking Loan collection (salary 20000). Direct recruitment to company Contact:- 9620206756, 9620200756.

Security & Detectives

WANTED
Field Executive's, Admin HR Manager's and Accountant's to work in
Poojyaya Security Services
@ R T Nagar, Bangalore. Contact: 9844006744, 080-23536744. raghu_sgr2@yahoo.co.in

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

Teachers/ Professors

MAX MULLER PUBLIC SCHOOL
Basaveshwaranagar, B-79.
REQUIRED TEACHERS
B,Sc. B.Ed., B.A. B.Ed., Computer, Hindi for Lower Class & P.Ed. Qualified Teachers.
FOR QUERY CONTACT
Ph. 080-23233455
9480319233

WANTED PHYSICAL Education Teacher to handle Primary & High School (Male or Female) for New Carmel English School, Yeshwanthpur, Bangalore. Candidates Contact: 9379191544

WANTED
Wanted Teachers for Grade V to VII for State Board School on Sarjapur Road.
Send your resume to vvrschool2003@gmail.com.
Interested Call:
94801 81149
98452 74215

ACHARYA SRI RAKUM PRIMARY SCHOOL, Devanahalli Taluk, Wanted Montessori Trained TEACHERS Rs. 15000/- with food and accommodation. Contact: Sri Rakum School, 421/i Sri Krishna Temple Road, Indiranagar 1st stage, Bangalore- 560038. Tel: 080 25215253/ 25215705. Walk-in interview 10 am to 12 noon.

WALK-IN-INTERVIEW
VIDYA NIKETAN HIGH SCHOOL
(English Medium)
Dist: Kamareddy, Telangana State
REQUIRES
Resident Teachers to teach English, Mathematics, Physical Science, Biological Science and Social Studies for High School & Middle School.
Salary upto Rs. 40,000/-pm.
Free Boarding & Loding
Walk-in-interview on 08, 09 and 10th June 2022 Between: 10 AM & 5 PM.
Desirous candidates please walk-in with resume, recept passport size photograph and original certificates.
Contact: Mr. Qavi Bahelmi at HOTEL PULIKESHI Gandhi Nagar, Bangalore. Ph.: 063007 22544

PASSIONATE IN Teaching English? Urgent Opening in Schools for Karnataka & Tamilnadu. Fresher / Experienced 18-40 year Old Graduates / Undergraduates to Collaborate with Schools. Salary Between 12K - 18K, W/W-O accommodation. Contact : 9535744166 / Triwayindia@gmail.com.

WANTED B.SC. B.Ed (Physics & Maths) B.P.Ed trained teachers for Primary & High School. Contact Max Muller English High School, No. 173/1, 3rd Main, H.V.R. Layout Magadi Main Road, Bangalore- 79 Ph: 23284559, 23285559, Mail: info@maxmullerhighschool.com

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/-Contact: 9741401834

AUTOMOTIVE

Four Wheelers Selling

Tractors / Heavy Vehicles

TATA (2007) Ashok Leyland(2010) 10W, Cylinder Truck, Running Condition for sale. PH:9591997014

Automobile Services

For Hire

BUS 36 Seater/ WINGER 13 Seater Available For Hire on Monthly Basis in Bangalore: 9880539150

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986

ADMISSIONS STARTED FOR
10th PASS - 3 Yrs Diploma
PUC / ITI PASS - 2 Yrs Diploma

FREE In-plant training to all students
New NEP syllabus with industry interaction to all

CS | IS | EC | EE | Civil | Mech | Auto | CP | FT

5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466

RES-22302

BUSINESS

Business to Business

Business

PURE COLD Pressed Marachekku Cooking Groundnut Oil, Sesame Oil/ Coconut Oil for Door Delivery Contact: 9108814315

Business Offers

Finance

NRI'S INVESTMENT And Finance Available On Low Interest Against Properties, Land &Building,Sites,Flats, Converted& Agriculture Lands Call:7411265189

FINANCE AGAINST Land & Building Properties Industries Schools Hospitals Projects & NRI Funds.7358729820

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATIONAL

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

EXCELLENT INVESTMENT OPPORTUNITY

Looking For Investors **(Preferably MNC's)** with ready funds of **Rs.6 Crs.** for Construction of Industrial Shed / Warehouse - 'Built to Suit ' as per the Client's requirements in 2 Acres of KIADB Industrial land at Dobbespet with the necessary approvals for Construction of Warehouse or Manufacturing Industry.

Facing Plot on 100ft Double Road & 300 Metres from the NH-4.

Mob: 9035963540

RAMAN POLYTECHNIC
12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 080-23488623, 23284817, 80500 66771, 63609 03500
Website: www.ramaneducation.org

♦ Civil ♦ Mechanical ♦ Electrical ♦ Electronics ♦ Computer Science ♦ Automobile

RAMAN P.U. COLLEGE
Science ♦ Commerce | CONTACT: 6360127984

RAMAN I.T.I. COLLEGE
♦ Fitter ♦ Electronic Mechanic ♦ Electrician

CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504

RMN-22302

PERSONAL

Change of Name

I, PRAKASH alias Prakasha .N alias Prakash .N S/o Najundappa aged about 45 Years Residing at Main Road, Bilikere Village, Bilikere Hobli, Hunsur Taluk, Mysore District- 571103. have changed my name to N. PRAKASHA and all the names belongs to One Person only for all Purposes vide affidavit dated 09.06.2022 before notary M.N. Balasubramanya, Mysore District

I, SYED SAMEER ABBAS, residing at G-3, Arphi Apartment, No. 2, Leonard Lane, Richmond Town, Bengaluru- 560025, have changed my name to SYED ZAHEER ABBAS, vide affidavit dated 09.06.2022 before Notary D. Gunashekar, Bangalore. Henceforth I shall be known as SYED ZAHEER ABBAS only.

I, LAL DADLANI, son of Bhagwandas Dadlani, residing at No.21/1 Dadlani Villa Craig Park Layout, M.G. Road, Bangalore- 560001 have changed my name to LALCHAND BHAGWANDAS DADLANI for all future purposes vide affidavit dated 08.06.2022 before Notary L. Gopalakrishna, Bangalore.

I, VATCHALA KUMARI Residing at No.147, T.P.Kuppan Street, BSA Road, Periyar Nagar, BENGALURU- 560045, have changed my name from VERONICA to VATCHALA KUMARI. vide affidavit dated 02-06-2022 before Notary A.R. Muneer Ahmed

I, LAKSHMI MANGALARAM W/o Chagaram Seervi., R/at No.01, 2nd floor, 20th cross, RT Street, Bangalore- 560053 have changed my name to LAKSHMI SEERVI vide affidavit dated: 8/6/2022 Before Notary K.C.Shashikala Bangalore.

KUMARI MINOTI RAY, Wife/o 6497133W HAV, NITYANANDA RAY, Vill- Nayagaon Boitamari Bongaigaon, Assam, changed name from KUMARI MINOTI RAY to MINATI RAY, 08/06/2022, Notary K.V. Mani, Bangalore

I, RUPA LAL DADLANI, Wife of Lalchand Bhagwandas Dadlani, residing at No.21/1 Dadlani Villa, Craig Park Layout, M.G.Road, Bangalore- 560001 have changed my name to RUPA LALCHAND DADLANI for all future purposes vide affidavit dated 08.06.2022 before Notary L. Gopalakrishna, Bangalore.

S SHIVA KUMAR, JC682079P, NB SUB, Vill- Ramanathapuram, Aranmanai (Ramanathapuram), Tamil Nadu, changed Son's name from KAMALESH to KAMALESH S, 08/06/2022, Notary K.V. Mani, Bangalore

I, R.DHANUSH, Residing at No.147, T.P.Kuppan Street, BSA Road, Periyar Nagar, BENGALURU- 560045, have changed my name from JOSEPH RAJ to R.DHANUSH, vide affidavit dated 02-06-2022 before Notary A.R. Muneer Ahmed

I, ARCHANA.R, Residing at No.147, T.P.Kuppan Street, BSA Road, Periyar Nagar, BENGALURU- 560045, have changed my name from MARIA LILLY to ARCHANA.R, vide affidavit dated 02-06-2022 before Notary A.R. Muneer Ahmed

I, T.V Rajeswari W/O, A.S Narasimha Prasad R/o No. 1215, 34th C Cross, 4th T Block, Jayanagar, Bengaluru 560041 have changed my name to Rashmi N Prasad for all purposes.

PUBLIC NOTICE

PUBLIC NOTICE

Before the Central Government Registrar of Companies, Bangalore

In the matter of sub-section (3) of Section 13 of Limited Liability Partnership Act, 2008 and rule 17 of the Limited Liability Partnership Rules, 2009

In the matter of the Limited Liability Partnership Act, 2008, Section 13 (3) AND In the matter of UPSTREET INVESTMENT MANAGERS LLP, having its registered office at No. 289, 15TH MAIN ROAD, SADASHIVA NAGAR, BANGALORE, Bangalore, Karnataka, 560080 - Petitioner

Notice

Notice is hereby given to the General Public that the LLP proposes to make a petition to Registrar of Companies, Bangalore under section 13 (3) of the Limited Liability Partnership Act, 2008 seeking permission to change its Registered office from the state of "Karnataka " to the state of "Telangana". Any person whose interest is likely to be affected by the proposed change of the registered office of the LLP may deliver or cause to be delivered or send by Registered post of his/her objections supported by an affidavit stating the nature of his/ her interest and grounds of opposition supported by an affidavit to the Registrar of Companies, Bangalore, Address -'E' Wing, 2nd Floor, Kendriya Sadana, Kormangala, Bangalore-560034, Karnataka, within 21(twenty one) days from the date of publication of this notice with a copy to the petitioner LLP at its registered office at the address mentioned above.

For and on behalf of
UPSTREET INVESTMENT MANAGERS LLP
Sd/- Vishnu Vardhan Bodapati
(Designated Partner)
E:3 Bollineni homes
Madhapur
Hyderabad : 500081

Date:10/06/2022
Place: Bangalore

41 ಎಂಬಿಬಿಎಸ್ ವಿದ್ಯಾರ್ಥಿಗಳು ಸಲ್ಲಿಸಿದ ರಿಟ್ ಅರ್ಜಿ ಸಂಬಂಧ ಆದೇಶ

'ಹೊಸದಾಗಿ ಪ್ರಾಯೋಗಿಕ ಪರೀಕ್ಷೆ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ವಿವಿಧ ಸಂಯೋಜಿತ ಕಾಲೇಜುಗಳ ಎಂಬಿಬಿಎಸ್ ಪದವಿಯ ಅಂತಿಮ ವರ್ಷದ 41 ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಹಾಗೂ ಕ್ಲಿನಿಕಲ್ ಪರೀಕ್ಷೆಯಲ್ಲಿ ನೀಡಲಾಗಿದ್ದ ಅಂಕಗಳನ್ನು ರದ್ದುಪಡಿಸಿರುವ ಹೈಕೋರ್ಟ್, ಅರ್ಜಿದಾರ ವಿದ್ಯಾರ್ಥಿಗಳಿಗೆ ಮೂರು ವಾರದೊಳಗೆ ಹೊಸದಾಗಿ ಪ್ರಾಯೋಗಿಕ ಪರೀಕ್ಷೆ ನಡೆಸುವಂತೆ ಆದೇಶಿಸಿದೆ.

'ಆರ್‌ಜಿಯುಎಚ್‌ಎಸ್ ನಡೆಸಿರುವ ಪ್ರಾಯೋಗಿಕ ಪರೀಕ್ಷೆಯು ವಿಶ್ವವಿದ್ಯಾಲಯದ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ' ಎಂದು ಆಕ್ಷೇಪಿಸಿ ಜಿಮ್ಸ್‌ನ (ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ) ವಿದ್ಯಾರ್ಥಿ ಬಸವರಾಜ ಇಟಗಿ ಸೇರಿದಂತೆ ವಿವಿಧ ವೈದ್ಯಕೀಯ ಕಾಲೇಜುಗಳ ಒಟ್ಟು 41 ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರಾದ ಪ್ರತೀಕ್ ಚಂದ್ರಮೌಳಿ ಹಾಗೂ ಕೆ.ಎಸ್.ವಿದ್ಯಾಶ್ರೀ, 'ಪ್ರಾಯೋಗಿಕ ಪರೀಕ್ಷೆಗಳನ್ನು ನಿಯಮಾನುಸಾರ ನಡೆಸದೇ ಇರುವ ಕಾರಣ ಅರ್ಜಿದಾರ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ. ಆದ್ದರಿಂದ, ಪ್ರಾಯೋಗಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಅಂಕಗಳನ್ನು ರದ್ದುಪಡಿಸಬೇಕು' ಎಂದು ಕೋರಿದ್ದರು.

ಪ್ರತಿಯಾಗಿ ಆರ್‌ಜಿಯುಎಚ್‌ಎಸ್ ಪರ ವಕೀಲರು, 'ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸದಾಗಿ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುವುದು' ಎಂದು ನ್ಯಾಯಪೀಠಕ್ಕೆ ಮುಚ್ಚಳಿಕೆ ನೀಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಅರ್ಜಿದಾರ ವಿದ್ಯಾರ್ಥಿಗಳು ಕೋರಿರುವ ವಿಷಯಗಳಿಗೆ ಹೊಸ ಪರೀಕ್ಷೆ ನಡೆಸುವಂತೆ ನಿರ್ದೇಶಿಸಿದೆ.

ಪ್ರಕರಣವೇನು?: ಅರ್ಜಿದಾರ ವಿದ್ಯಾರ್ಥಿಗಳಿಗೆ 2022ರ ಫೆಬ್ರುವರಿಯಲ್ಲಿ ಶಸ್ತ್ರಚಿಕಿತ್ಸೆ, ಸ್ತ್ರೀರೋಗ ಶಾಸ್ತ್ರ ಹಾಗೂ ಪ್ರಸೂತಿ, ಮಕ್ಕಳ ವೈದ್ಯಕೀಯ ಮತ್ತು ಜನರಲ್ ಮೆಡಿಸಿನ್ ವಿಷಯಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಸಲಾಗಿತ್ತು. ಆದರೆ, ಅವುಗಳಲ್ಲಿ ಅನುತ್ತೀರ್ಣರಾಗಿದ್ದರು.

ಹೆಣ ರಸ್ತೆಯಲ್ಲಿ ಹಾಕಬೇಕಾ?: ಹೈಕೋರ್ಟ್ ಕಿಡಿ

ಬೆಂಗಳೂರು: 'ಸ್ಮಶಾನಕ್ಕೆ ಜಾಗ ಇಲ್ಲದ ಕಡೆ ಹೆಣಗಳನ್ನು ರಸ್ತೆಯಲ್ಲಿ ಹಾಕಬೇಕಾ' ಎಂದು ರಾಜ್ಯ ಸರ್ಕಾರವನ್ನು ಖಾರವಾಗಿ ಪ್ರಶ್ನಿಸಿರುವ ಹೈಕೋರ್ಟ್, 'ಸ್ಮಶಾನಕ್ಕೆ ಜಾಗ ಒದಗಿಸದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವ ಈ ಸರ್ಕಾರಕ್ಕೆ ನಾಚಿಕೆ ಆಗಬೇಕು. ಸರ್ಕಾರ ಮಾಡುವ ಕೆಲಸವನ್ನು ಕೋರ್ಟ್ ಮಾಡಬೇಕಾಗಿದೆ' ಎಂದು ಕಿಡಿಕಾರಿದೆ.

ಈ ಸಂಬಂಧ ಬೆಂಗಳೂರು ನಿವಾಸಿ ಮಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಕೋರ್ಟ್ ಆದೇಶ ಪಾಲನೆಯ ವಸ್ತುಸ್ಥಿತಿ ವರದಿ ಸಲ್ಲಿಸಲು ಕಾಲಾವಕಾಶ ಬೇಕು' ಎಂದು ಕೋರಿದರು. ಇದಕ್ಕೆ ವ್ಯಗ್ರವಾದ ನ್ಯಾಯಪೀಠ, 'ವಸ್ತುಸ್ಥಿತಿ ವರದಿ ಸಲ್ಲಿಸಲು ಇದೇನು ನಾಪತ್ತೆ ಪ್ರಕರಣವೇ, ಒಳ್ಳೆಯ ಕೆಲಸ ಮಾಡಿದರೆ ಜನ ಮೆಚ್ಚಿ ವೋಟು ಹಾಕುತ್ತಾರೆ. ಕಡೇ ಪಕ್ಷ ಇದೊಂದು ವೋಟು ಗಿಟ್ಟಿಸುವ ಕಾರ್ಯಕ್ರಮ ಎಂದು ಸರ್ಕಾರ ಪರಿಗಣಿಸಬೇಕಿತ್ತು' ಎಂದು ಸರ್ಕಾರವನ್ನು ಕುಟುಕಿತು.

'ನೀವು (ಸರ್ಕಾರ) ಭಂಡರಾದರೆ ನಾವು (ಕೋರ್ಟ್) ಜಗಭಂಡರು. ಕೋರ್ಟ್ ಆದೇಶ ಪಾಲನೆ ಮಾಡುವ ತನಕ ನಿಮ್ಮನ್ನು ಬಿಡುವುದಿಲ್ಲ. ಸ್ಮಶಾನಕ್ಕೆ ಜಾಗ ಇಲ್ಲದ ಗ್ರಾಮ ಮತ್ತು ಪಟ್ಟಣಗಳಿಗೆ ಅಗತ್ಯ ಜಮೀನು ಒದಗಿಸುವ ಸಂಬಂಧ ಕೋರ್ಟ್ ಆದೇಶವನ್ನು 15 ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡದೇ ಹೋದರೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿರುದ್ಧ ನ್ಯಾಯಾಂಗ ನಿಂದನೆ ಆರೋಪ ಹೊರಿಸಿ ಜೈಲಿಗೆ ಕಳಿಸಲಾಗುವುದು' ಎಂದು ನ್ಯಾಯಪೀಠ ಕಠಿಣ ಎಚ್ಚರಿಕೆ ನೀಡಿತು.

'ಸ್ಮಶಾನ ಇಲ್ಲದ ಗ್ರಾಮಗಳಿಗೆ ಆರು ತಿಂಗಳಲ್ಲಿ ಅಗತ್ಯ ಜಮೀನು ಒದಗಿಸುವಂತೆ 2019ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಮೂರು ವರ್ಷವಾದರೂ ಈ ಆದೇಶವನ್ನು ಪಾಲಿಸಿಲ್ಲ' ಎಂದು ಅರ್ಜಿದಾರರು ಈ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದ್ದಾರೆ.

'ಮಂಡ್ಯ ಭವನ' ನಿರ್ಮಾಣಕ್ಕೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ 'ಮಂಡ್ಯ ಭವನ' ನಿರ್ಮಾಣಕ್ಕೆ ಸಹಕಾರ ಕೋರಿದರೆ ನೆರವು ನೀಡಲಾಗುವುದು ಎಂದು ಸಚಿವ ಕೆ.ಸಿ.ನಾರಾಯಣಗೌಡ ಭರವಸೆ ನೀಡಿದರು.

ನಗರದ ಒಕ್ಕಲಿಗರ ಸಂಘದ ಆವರಣದ ಕುವೆಂಪು ಸಭಾಂಗಣದಲ್ಲಿ ಗುರುವಾರ ಮಂಡ್ಯ ಜಿಲ್ಲಾ ಅನಿವಾಸಿಗಳ ಬಳಗದ ಬೆಂಗಳೂರು ಸಂಘದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಗೆ ವಿಶೇಷ ಸ್ಥಾನವಿದೆ. ಉದ್ಯೋಗಕ್ಕೆ ಅನೇಕರು ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಮಂಡ್ಯ ಭವನ ನಿರ್ಮಾಣಕ್ಕೆ ಮುಂದಾದಲ್ಲಿ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಆದಿಚುಂಚನಗಿರಿ ಮಠ ಧಾರ್ಮಿಕ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಮಂಡ್ಯ ಜಿಲ್ಲೆಯ ಅಂದಾಜು 16 ಸಾವಿರ ಮಂದಿ ಮುಂಬೈನಲ್ಲಿ ನೆಲೆಸಿದ್ದು, ಮಠದ ಜತೆಗೂ ಉತ್ತಮ ಸಂಪರ್ಕ ಹೊಂದಿದ್ದಾರೆ ಎಂದು ತಿಳಿಸಿದರು.

ಜಾನಪದ ಲೋಕದ ಅಧ್ಯಕ್ಷ ಟಿ.ತಿಮ್ಮೇಗೌಡ ಮಾತನಾಡಿ, 'ಸಕ್ಕರೆ ನಾಡಿನ ಒಳಿತಿಗಾಗಿ ಇಂತಹ ಸಂಘವೊಂದರ ಅಗತ್ಯವಿತ್ತು. ಜಾತಿ, ಭೇದವಿಲ್ಲದೆ ಎಲ್ಲ ಸಮಾಜದವರನ್ನು ಒಳಗೊಂಡು ಈ ಸಂಘ ಮುನ್ನಡೆಯಬೇಕು' ಎಂದು ಆಶಿಸಿದರು.

ಮಂಡ್ಯ ಜಿಲ್ಲೆಯ ಸಮಗ್ರ ಏಳಿಗೆಗೆ ಸಂಘವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಸಂಘದ ಅಧ್ಯಕ್ಷ ಮುಟ್ಟನಹಳ್ಳಿ ಶಿವರಾಮೇಗೌಡ ಹೇಳಿದರು.

ಆದಿಚುಂಚನಗಿರಿಯ ಪೀಠಾಧ್ಯಕ್ಷ ನಿರ್ಮಲಾನಂದ ಸ್ವಾಮೀಜಿ, ಪ್ರೊ. ಕೃಷ್ಣೇಗೌಡ ಹಾಜರಿದ್ದರು.

ಬೆಂಗಳೂರಿನ ಕುವೆಂಪು ಸಭಾಂಗಣದಲ್ಲಿ ಗುರುವಾರ ಮಂಡ್ಯ ಜಿಲ್ಲಾ ಅನಿವಾಸಿಗಳ ಬಳಗ ಬೆಂಗಳೂರು ಸಂಘವನ್ನು ಸಚಿವ ಕೆ.ಸಿ.ನಾರಾಯಣಗೌಡ ಮತ್ತು ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದ ಸ್ವಾಮೀಜಿ ಉದ್ಘಾಟಿಸಿದರು. ಅಧ್ಯಕ್ಷ ಮುಟ್ಟನಹಳ್ಳಿ ಶಿವರಾಮೇಗೌಡ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು ಬಾ.ಮಾ.ಹರೀಶ್, ಪ್ರೊ.ಕೃಷ್ಣೇಗೌಡ ಮತ್ತು ರಾಮನಗರ ಜಿಲ್ಲೆಯ ಜನಪದಲೋಕದ ಅಧ್ಯಕ್ಷರ ಟಿ.ತಿಮ್ಮೇಗೌಡ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಎಲ್ಲ ಸಮುದಾಯದವರ ಒಳಗೊಂಡು ಸಂಘ ಮುನ್ನಡೆಯಬೇಕು
- ಮಂಡ್ಯದ ಸಮಗ್ರ ಏಳಿಗೆಗೆ ಸಂಘದ ಅಸ್ತಿತ್ವ

ಕೃತಿ ಲೋಕಾರ್ಪಣೆ

ಬೆಂಗಳೂರು: ಡಾ.ಹಂಪ ನಾಗರಾಜಯ್ಯನವರು ಇಂಗ್ಲಿಷ್‌ನಲ್ಲಿ ಬರೆದ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ' (ಕರ್ನಾಟಕ ಅಭಿಜಾತ ಸಾಹಿತ್ಯದ ಇಂದ್ರಚಾಪ) ಎಂಬ ಬೃಹತ್ ಸಂಪುಟ ಶುಕ್ರವಾರ ಲಂಡನ್ ವಿ.ವಿಯಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಸಂಚಾರ ನಿಯಮ ಉಲ್ಲಂಘನೆ: ಒಟ್ಟು ₹10,000 ದಂಡ ವಸೂಲಿ

ಪೊಲೀಸರ ಜತೆ ಲಿಂಬಾವಳಿ ಪುತ್ರಿ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ವೇಗವಾಗಿ ಕಾರು ಚಲಾಯಿಸಿದ್ದನ್ನು ಪ್ರಶ್ನಿಸಿದ ಪೊಲೀಸರ ಜೊತೆಗೇ ಶಾಸಕ ಅರವಿಂದ ಲಿಂಬಾವಳಿ ಅವರ ಪುತ್ರಿ ವಾಗ್ವಾದಕ್ಕೆ ಇಳಿದಿದ್ದು, ನಿಯಮ ಉಲ್ಲಂಘಿಸಿದ್ದಕ್ಕಾಗಿ ಅವರಿಂದ ₹ 10 ಸಾವಿರ ದಂಡ ವಸೂಲಿ ಮಾಡಲಾಗಿದೆ.

'ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಕಡೆಯಿಂದ ರಾಜಭವನ ಕಡೆಗೆ ಗುರುವಾರ ಕಾರಿನಲ್ಲಿ ಹೊರಟಿದ್ದ ಲಿಂಬಾವಳಿ ಪುತ್ರಿ, ಪೊಲೀಸರ ಜೊತೆ ವಾಗ್ವಾದ ನಡೆಸಿದ್ದರು. ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಗೆ ₹ 1,000 ದಂಡ ಹಾಗೂ ಹಳೇ ಪ್ರಕರಣಗಳಿಗೆ ₹9,000 ದಂಡ ಕಟ್ಟಿಸಿಕೊಳ್ಳಲಾಗಿದೆ' ಎಂದು ಸಂಚಾರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಅತಿ ವೇಗದ ಚಾಲನೆಯಿಂದಾಗಿ ಅನುಮಾನ: 'ಅತಿ ವೇಗವಾಗಿ ಹೊರಟಿದ್ದ ಕಾರನ್ನು ನೋಡಿದ್ದ ಕಬ್ಬನ್ ಪಾರ್ಕ್ ಉಪವಿಭಾಗದ ಎಸಿಪಿ, ಅನುಮಾನ ವ್ಯಕ್ತಪಡಿಸಿ ವೈರ್‌ಲೆಸ್‌ನಲ್ಲಿ ಸಂದೇಶ ರವಾನಿಸಿದ್ದರು. ಕಾರು ತಡೆಯುವಂತೆ ಸಿಬ್ಬಂದಿಗೆ ಸೂಚನೆ ನೀಡಿದ್ದರು. ಕ್ಯಾಪಿಟಲ್ ಹೋಟೆಲ್ ಬಳಿ ಕಾರು ಅಡ್ಡಗಟ್ಟಿದ ಕಾನೂನು ಮತ್ತು ಸುವ್ಯವಸ್ಥೆ ಸಿಬ್ಬಂದಿ, ಲಿಂಬಾವಳಿ ಪುತ್ರಿಯನ್ನು ಕಾರಿನಿಂದ ಕೆಳಗೆ ಇಳಿಸಿ ವಿಚಾರಿಸಿದರು.'

ಪೊಲೀಸರ ಜೊತೆ ವಾಗ್ವಾದ ನಡೆಸಿದ್ದ ಅರವಿಂದ ಲಿಂಬಾವಳಿ ಪುತ್ರಿ

'ಪೊಲೀಸರ ಜೊತೆ ಮಾತಿನ ಚಕಮಕಿ ನಡೆಸಿದ ಪುತ್ರಿ, 'ನಾನು ಯಾರು ಗೊತ್ತಾ? ಶಾಸಕ ಅರವಿಂದ ಲಿಂಬಾವಳಿ ಪುತ್ರಿ. ನನ್ನ ಬಳಿ ಚಾಲನಾ ಪರವಾನಗಿ ಪತ್ರ ಸೇರಿದಂತೆ ಎಲ್ಲ ದಾಖಲೆಗಳಿವೆ. ನನ್ನನ್ನು ತಡೆದರೆ ಪರಿಣಾಮ ನೆಟ್ಟಗಿರೊಲ್ಲ' ಎಂದಿದ್ದರು. ಅತಿ ವೇಗವಾಗಿ ಕಾರು ಚಲಾಯಿಸಿದ್ದು ಯಾಕೆಂದು ಪೊಲೀಸರು ಪ್ರಶ್ನಿಸಿದ್ದರು. ಅದಕ್ಕೂ ಲಿಂಬಾವಳಿ ಪುತ್ರಿ ಉತ್ತರಿಸಲಿಲ್ಲ' ಎಂದು ತಿಳಿಸಿದರು.

ದಂಡ ಪಾವತಿಸಿದ ಸ್ನೇಹಿತ: 'ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಸಹ ಸ್ಥಳಕ್ಕೆ ಹೋಗಿದ್ದರು. ಅವರ ಜೊತೆಗೂ ಯುವತಿ ವಾಗ್ವಾದ ನಡೆಸಿದ್ದರು. ಸಮಾಧಾನಪಡಿಸಿದ್ದ ಇನ್‌ಸ್ಪೆಕ್ಟರ್, ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಹಳೇ ಪ್ರಕರಣಗಳನ್ನು ಪರಿಶೀಲಿಸಿದ್ದರು' ಎಂದು ಅಧಿಕಾರಿ ಹೇಳಿದರು.

'₹ 9,000 ದಂಡ ಬಾಕಿ ಇರುವುದು ಗೊತ್ತಾಗಿತ್ತು. ಜೊತೆಗೆ, ಹೊಸ ₹ 1,000 ದಂಡ ಸೇರಿಸಿ ರಶೀದಿಯನ್ನು ಯುವತಿಗೆ ನೀಡಿದ್ದರು. ದಂಡ ಪಾವತಿಸಲು ಒಪ್ಪದೆ ಮತ್ತೆ ವಾಗ್ವಾದ ಮಾಡಿದರು. ಲಿಂಬಾವಳಿ ಪುತ್ರಿ ಜೊತೆಗಿದ್ದ ಯುವಕ ಮಧ್ಯ ಪ್ರವೇಶಿಸಿ, ದಂಡ ಪಾವತಿಸಿದ. ನಂತರವೇ ಯುವತಿಯ ಕಾರನ್ನು ಪೊಲೀಸರು ಬಿಟ್ಟು ಕಳುಹಿಸಿದರು' ಎಂದು ತಿಳಿಸಿದರು.

ಪುತ್ರಿ ವಿರುದ್ಧದ ಆರೋಪದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಅರವಿಂದ ಲಿಂಬಾವಳಿ ಲಭ್ಯರಾಗಲಿಲ್ಲ.

ಚಿತ್ರೀಕರಣಕ್ಕೂ ಅಡ್ಡಿ

'ಮಹದೇವಪುರ ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಪುತ್ರಿ ವರ್ತನೆಯನ್ನು ಸ್ಥಳೀಯರು ಹಾಗೂ ಮಾಧ್ಯಮದವರು ಚಿತ್ರೀಕರಣ ಮಾಡುತ್ತಿದ್ದರು. ಅವರ ವಿರುದ್ಧವೂ ಹರಿಹಾಯ್ದ ಪುತ್ರಿ, 'ನನ್ನ ಚಿತ್ರೀಕರಣ ಏಕೆ ಮಾಡುತ್ತಿದ್ದೀರಿ? ಪರಿಣಾಮ ನೆಟ್ಟಗಿರಲ್ಲ' ಎಂದು ಕ್ಯಾಮೆರಾ ಕಿತ್ತುಕೊಳ್ಳಲು ಯತ್ನಿಸಿದ್ದರು. ಪೊಲೀಸರೇ ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರ: ನಿಯಮ ಸಡಿಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ, ಅನುದಾನಿತ, ಅನುದಾನರಹಿತ ಶಾಲಾ ಕಟ್ಟಡಗಳು ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರ ಕಡ್ಡಾಯವಾಗಿ ಸಲ್ಲಿಸಬೇಕೆಂಬ ನಿಯಮ ಸಡಿಲಿಸದಿರುವುದು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡಲಿದೆ' ಎಂದು ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಅಭಿಪ್ರಾಯಪಟ್ಟಿದೆ.

ಲೋಕೇಶ್

ಈ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆದು ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರ ಸಲ್ಲಿಸಬೇಕೆಂಬ ನಿಯಮದಿಂದ ನೆಲ ಮಹಡಿ ಮತ್ತು ಒಂದೇ ಮಹಡಿಯ ಶಾಲಾ ಕಟ್ಟಡಗಳನ್ನು ಹೊರಗಿಡಬೇಕೆಂಬ ಬೇಡಿಕೆಗೆ ಸರ್ಕಾರ ಸ್ಪಂದಿಸಿಲ್ಲ. ಕನಿಷ್ಠ ಸುರಕ್ಷತೆಯ ಸಲಕರಣೆಗಳ ಜೋಡಣೆ ಹೊಂದಿದ ಶಾಲೆಗಳಿಗೆ ಸ್ಥಳೀಯ ಅಗ್ನಿಶಾಮಕ ನಿರೀಕ್ಷಕರ ಮೂಲಕ ಪಡೆಯುವಂತೆ ಮನವಿ ಸಲ್ಲಿಸಲಾಗಿತ್ತು. ಆದರೆ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯಿಂದಲೇ ಪ್ರಮಾಣಪತ್ರ ಪಡೆಯಬೇಕೆಂಬ ನಿಯಮದಿಂದ ಸಮಸ್ಯೆ ಆಗಲಿದೆ' ಎಂದಿದ್ದಾರೆ.

'ಅಲ್ಲದೆ, ಅಗ್ನಿ ಅವಘಢ ಸುರಕ್ಷತೆ ಪ್ರಮಾಣಪತ್ರಕ್ಕೆ ಪ್ರತಿವರ್ಷ ₹ 20 ಸಾವಿರ ಶುಲ್ಕ ಕಟ್ಟಬೇಕು. ಹೀಗಾಗಿ ಪ್ರತಿವರ್ಷ ಪ್ರಮಾಣಪತ್ರ ಪಡೆಯಬೇಕೆಂಬ ವಿಚಾರದಲ್ಲಿ ವಿನಾಯಿತಿ ಕೇಳಿದ್ದೆವು. ಅಗ್ನಿ ಅವಘಡಸುರಕ್ಷತೆ ಪ್ರಮಾಣಪತ್ರ ಪಡೆಯಲು ಎಲ್ಲ ಶಾಲೆಗಳಲ್ಲಿ 10 ಸಾವಿರ ಲೀಟರ್ ನೀರಿನ ಟ್ಯಾಂಕ್ ಇರಬೇಕೆಂದಿದೆ. ಬಹುತೇಕ ಶಾಲೆಗಳು ನೆಲಮಹಡಿ ಹಾಗೂ ಕೆಂಪು ಹೆಂಚು ಅಥವಾ ಸಿಮೆಂಟ್ ಶೀಟ್ ಕಟ್ಟಡಗಳಾಗಿವೆ. ಅವುಗಳು ಇಷ್ಟು ದೊಡ್ಡ ನೀರಿನ ಟ್ಯಾಂಕ್ ಅಳವಡಿಸಿಕೊಳ್ಳಲು ಸಾಧ್ಯವೇ' ಎಂದೂ ಪ್ರಶ್ನಿಸಿದ್ದಾರೆ.

'ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಅವಧಿ 10 ವರ್ಷ ಎಂದು ಸರ್ಕಾರವೇ ಹೈಕೋರ್ಟ್‌ಗೆ ಮುಚ್ಚಳಿಕೆ ನೀಡಿದೆ. ಆದರೆ, ಈ ಬಗ್ಗೆ ಸರ್ಕಾರದಿಂದ ಯಾವುದೇ ಪ್ರಸ್ತಾವ ಇಲ್ಲ. ಇದರಿಂದಾಗಿ 15 ಸಾವಿರಕ್ಕೂ ಹೆಚ್ಚು ಶಾಲೆಗಳು ನವೀಕರಣಕ್ಕಾಗಿ ಇಲಾಖೆಗೆ ಅಲೆದಾಡಬೇಕಾಗುತ್ತದೆ. ಶಾಲೆಗಳ ನಿವೇಶನಗಳನ್ನು ಶೈಕ್ಷಣಿಕ ಉದ್ದೇಶಕ್ಕೆ ಭೂ ಪರಿವರ್ತನೆ ಕಡ್ಡಾಯಗೊಳಿಸಬೇಕೆಂಬ ನಿಯಮ ಕೂಡಾ ಶಾಲೆಗಳ ಅಸ್ತಿತ್ವಕ್ಕೇ ಸಂಚಕಾರ ತಂದಿದೆ. ಹೀಗಾಗಿ, ಜೂನ್ 5ರಂದು ಹೊರಡಿಸಿದ ಶಿಕ್ಷಣ ಇಲಾಖೆ ಸುತ್ತೋಲೆ ಹಿಂಪಡೆದು, ಎಸ್.ವಿ.ಸಂಕನೂರ ಸಮಿತಿಯ ಶಿಫಾರಸು ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಹೆಜ್ಜೇನು ದಾಳಿ: ಮಾಜಿ ಯೋಧ ಸಾವು

ಶ್ರೀರಾಂಪುರ, ಚಿತ್ರದುರ್ಗ ಜಿಲ್ಲೆ: ಹೋಬಳಿಯ ಕಡವಿಗೆರೆ ಗ್ರಾಮದಲ್ಲಿ ಗುರುವಾರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರ ಮೇಲೆ ಹೆಜ್ಜೇನು ದಾಳಿ ನಡೆಸಿದ್ದು, ಮಾಜಿ ಯೋಧ ಸುರೇಂದ್ರಸಿಂಗ್ (64) ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ.

ಸುರೇಂದ್ರ ಸಿಂಗ್

ಕಡವಿಗೆರೆ ಸಮೀಪದ ತಮ್ಮ ಜಮೀನಿನಲ್ಲಿ ನೀರು ಹಾಯಿಸಲು ಪೈಪ್‌ಗಳನ್ನು ಜೋಡಿಸುತ್ತಿರುವಾಗ ಹೆಜ್ಜೇನು ದಾಳಿ ಮಾಡಿದೆ. ಗಂಭೀರವಾಗಿ ಗಾಯಗೊಂಡ ಸುರೇಂದ್ರ ಸಿಂಗ್ ಅವರನ್ನು ಹೊಸದುರ್ಗ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಮೂವರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹ 1.56 ಕೋಟಿ ಮೌಲ್ಯದ ವಸ್ತು ಜಪ್ತಿ

ಬೆಂಗಳೂರು: ವೈಟ್‌ಫೀಲ್ಡ್ ವಿಭಾಗ ವ್ಯಾಪ್ತಿಯಲ್ಲಿ ನಡೆದಿದ್ದ ಅಪರಾಧ ಪ್ರಕರಣಗಳನ್ನು ಭೇದಿಸಿರುವ ಪೊಲೀಸರು, ₹ 1.56 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

'ಮನೆಗಳಲ್ಲಿ ಕಳ್ಳತನ, ಸರಗಳವು, ದ್ವಿಚಕ್ರ ವಾಹನ ಕಳ್ಳತನ ಸಂಬಂಧ ಪ್ರಕರಣಗಳು ದಾಖಲಾಗಿದ್ದವು. ಆಯಾ ಠಾಣೆ ಪೊಲೀಸರ ತಂಡಗಳು ತನಿಖೆ ನಡೆಸಿ, 22 ಆರೋಪಿಗಳನ್ನು ಬಂಧಿಸಿವೆ. ಅವರಿಂದ ಚಿನ್ನಾಭರಣ, ದ್ವಿಚಕ್ರ ವಾಹನ, ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಗಿರೀಶ್ ಹೇಳಿದರು.

ಉಡುಗೊರೆ ನೀಡಲು ಕಳ್ಳತನ: 'ಚಿನ್ನದ ಸರಗಳವು ಮಾಡುತ್ತಿದ್ದ ಆರೋಪಿಗಳಾದ ಶಕ್ತಿವೇಲ್ (19), ಎನ್.ವಿಜಯ್ (19) ಎಂಬುವವರನ್ನು ಬಂಧಿಸಲಾಗಿದೆ. ಸಲುಗೆಯಿಂದಿದ್ದ ಮಹಿಳೆಯರಿಗೆ ಉಡುಗೊರೆ ನೀಡಲು ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಸ್ತಶಿಲ್ಪಿ ವತಿಯಿಂದ ಸಿಲ್ಕ್ ಇಂಡಿಯಾ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸ್ತಶಿಲ್ಪಿ ವತಿಯಿಂದ 10 ದಿನಗಳ ಸಿಲ್ಕ್ ಇಂಡಿಯಾ ಮೇಳವನ್ನು ವಿಜಯನಗರದ ಕಾಸಿಯ ಉದ್ಯೋಗ ಭವನದ ಡಿ ಮಾರ್ಟ್ ಸ್ಟೋರ್ ಮೇಲೆ ಆಯೋಜಿಸಲಾಗಿದೆ ಎಂದು ನಿರ್ದೇಶಕ ಟಿ.ಅಭಿನಂದ್ ತಿಳಿಸಿದ್ದಾರೆ.

ಜೂ.10ರಿಂದ 19ರವರೆಗೆ 10 ದಿನ ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60ಕ್ಕೂ ಹೆಚ್ಚು ಮಳಿಗೆಗಳಲ್ಲಿ ಆಯಾ ರಾಜ್ಯದ ಸಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಬೆಳಿಗ್ಗೆ 10 ರಿಂದ ರಾತ್ರಿ 8.30ರವರೆಗೂ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಂಟಿಸಿಯಿಂದ 7 ಸಾವಿರ ಗಿಡ ಬೆಳೆಸುವ ಅಭಿಯಾನಕ್ಕೆ ಚಾಲನೆ

ಬೆಂಗಳೂರು: ಅರಣ್ಯ ನಾಶ ಮತ್ತು ಮಣ್ಣಿನ ಸವಕಳಿಯಿಂದ ಹವಾಮಾನ ವೈಪರೀತ್ಯದಂತಹ ಪರಿಸರ ವಿಕೋಪಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಬಿಎಂಟಿಸಿ ಸಂಸ್ಥೆ ಉಪಾಧ್ಯಕ್ಷ ಎಂ.ಆರ್.ವೆಂಕಟೇಶ್ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ಒಂದು ಬಸ್ ಒಂದು ಗಿಡ' ಎಂಬ ಪರಿಕಲ್ಪನೆಯೊಂದಿಗೆ ಬಿಎಂಟಿಸಿ ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಹಾಗೂ ಸಂಸ್ಥೆಯ ಎಲ್ಲಾ ಸ್ಥಳಗಳಲ್ಲಿ ಸುಮಾರು 7000 ಗಿಡಗಳನ್ನು ನೆಟ್ಟು ಬೆಳೆಸುವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎನ್.ಆರ್. ಚೌಕ, ಬೆಂಗಳೂರು–560 002.

ಕರಳು ಬೇನೆ/ಕಾಲರಾ ತಡೆಗೆ ಮುನ್ನೆಚ್ಚರಿಕೆ ಕ್ರಮಗಳು

ಕರಳುಬೇನೆ/ಕಾಲರಾ 1–2 ಪ್ರಕರಣಗಳು ವರ್ಷದಲ್ಲಿ ಸಂಭವಿಸುತ್ತಿದ್ದು ಬೇಸಿಗೆಯಲ್ಲಿ ಹೆಚ್ಚುವ ಸಂಭವವಿರುತ್ತದೆ. ಇತ್ತೀಚಿಗೆ, ಹೆಚ್ಚು ಮಳೆ ಬಂದ ಕಾರಣ, ರಾಜಕಾಲುವೆ ಮತ್ತು ಒಳಚರಂಡಿ ನೀರಿನಿಂದ ಕುಡಿಯುವ ನೀರು ಕಲುಷಿತವಾಗುವ ಸಂಭವವಿರುತ್ತದೆ. ಈ ರೋಗ ಇತರೆ ಪ್ರದೇಶಗಳಿಗೆ ಹರಡದಂತೆ ಸಾರ್ವಜನಿಕರು ಈ ಕೆಳಕಂಡ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ವಿನಂತಿಸಲಾಗಿದೆ.

ಮಾಡಬೇಕಾಗಿರುವುದು

- ಕುದಿಸಿ, ಆರಿಸಿದ ನೀರನ್ನು ಕುಡಿಯುವುದು
- ಸಾರ್ವಜನಿಕ ನೀರಿನ ಕೊಳಾಯಿ ಮತ್ತು ಸ್ಥಳವನ್ನು ಸ್ವಚ್ಛವಾಗಿಡುವುದು
- ತಾಜಾ ಆಹಾರವನ್ನು ಸೇವಿಸಬೇಕು
- ತಾಜಾ ಹಣ್ಣು, ತರಕಾರಿ ಮತ್ತು ಆಹಾರ ಪದಾರ್ಥಗಳನ್ನೇ ಉಪಯೋಗಿಸಬೇಕು
- ಊಟ ಮಾಡುವ ಮುನ್ನ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಸ್ವಚ್ಛಗೊಳಿಸಬೇಕು
- ಶೌಚಾಲಯವನ್ನು ಉಪಯೋಗಿಸುವ ಮುಂಚೆ ಮತ್ತು ನಂತರ ಕೈಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಬೇಕು
- ಸಿದ್ಧಪಡಿಸಿದ ಆಹಾರ ಪದಾರ್ಥಗಳನ್ನು ಕ್ರಿಮಿ-ಕೀಟಗಳು ಕುಳಿತುಕೊಳ್ಳದಂತೆ ಸದಾ ಮುಚ್ಚಳದಿಂದ ಮುಚ್ಚಿಡುವುದು
- ನಿಮ್ಮ ಮನೆ ಮತ್ತು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದು
- 15 ದಿನಗಳಿಗೊಮ್ಮೆ ಕುಡಿಯುವ ನೀರಿನ ತೊಟ್ಟಿಯನ್ನು ಬ್ಲೀಚಿಂಗ್ ಪೌಡರ್‌ನಿಂದ ಸ್ವಚ್ಛಗೊಳಿಸುವುದು.

ಮಾಡದಿರುವುದು

- ಕಲುಷಿತ ಕೊಳಾಯಿ ನೀರನ್ನು ಕುಡಿಯಬಾರದು
- ಪಾದಚಾರಿ ರಸ್ತೆಗಳಲ್ಲಿ, ರಸ್ತೆ ಬದಿಗಳಲ್ಲಿ ಸ್ವಚ್ಛತೆ ಇಲ್ಲದೇ ಮಾರಾಟ ಮಾಡುವ ತಿನಿಸುಗಳು ಹಾಗೂ ತಳ್ಳುಗಾಡಿಗಳಲ್ಲಿ ಮಾರುವ, ಕತ್ತರಿಸಿದ ಹಣ್ಣು ಪದಾರ್ಥಗಳನ್ನು ತಿನ್ನಬಾರದು
- ಧೂಳು, ನೊಣ, ಜಿರಲೆ ಮತ್ತು ಇತರ ಕೀಟಗಳು ಮುತ್ತುವಂತೆ ತೆರೆದಿಟ್ಟಿರುವ ಆಹಾರ ಪದಾರ್ಥಗಳನ್ನು ಸೇವಿಸಬಾರದು
- ಕಸ ಮತ್ತು ಇತರೆ ತ್ಯಾಜ್ಯ ವಸ್ತುಗಳನ್ನು ರಸ್ತೆ ಬದಿ, ಪಾದಚಾರಿ ರಸ್ತೆ, ಮೋರಿಯಲ್ಲಿ ಹಾಕಬಾರದು, ಹಾಕಿದ್ದಲ್ಲಿ ಕ್ರಿಮಿ-ಕೀಟಗಳು ಆಕರ್ಷಿಸಿ ಕರುಳು ಬೇನೆ/ಕಾಲರಾ ಬರುವ ಸಂಭವವಿರುತ್ತದೆ.
- ಕರಳು ಬೇನೆ / ಕಾಲರಾ ಖಾಯಿಲೆ ಒಂದು ಸಾಂಕ್ರಾಮಿಕ ರೋಗವಾಗಿದ್ದು, ಮೇಲ್ಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿದಾಗ ಈ ಖಾಯಿಲೆಗಳನ್ನು ತಡೆಗಟ್ಟಬಹುದು. ವಾಂತಿ, ಬೇಧಿ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

ಆರೋಗ್ಯಾಧಿಕಾರಿ (ಪೂರ್ವ) 080 22975852 | ಆರೋಗ್ಯಾಧಿಕಾರಿ (ದಕ್ಷಿಣ) 080 22975750 | ಆರೋಗ್ಯಾಧಿಕಾರಿ (ಪಶ್ಚಿಮ) 080 22975650
ಆರೋಗ್ಯಾಧಿಕಾರಿ (ಮಹದೇವಪುರ) 080 28512301 | ಆರೋಗ್ಯಾಧಿಕಾರಿ (ಬೊಮ್ಮನಹಳ್ಳಿ) 080 25732447 | ಆರೋಗ್ಯಾಧಿಕಾರಿ (ರಾಜರಾಜೇಶ್ವರಿನಗರ) 080 28600208
ಆರೋಗ್ಯಾಧಿಕಾರಿ (ಯಲಹಂಕ) 080 22975936 | ಆರೋಗ್ಯಾಧಿಕಾರಿ (ದಾಸರಹಳ್ಳಿ) 080 28396833 | ನಿಯಂತ್ರಣ ಕೊಠಡಿ : 080-22660000, 22221188

TOLL FREE No.: 1533

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ"

ರಾಕೇಶ್ ಸಿಂಗ್, ಭಾ.ಆ.ಸೇ., ಆಡಳಿತಗಾರರು, ಬಿಬಿಎಂಪಿ
ತುಷಾರ್ ಗಿರಿ ನಾಥ್, ಭಾ.ಆ.ಸೇ., ಮುಖ್ಯ ಆಯುಕ್ತರು, ಬಿಬಿಎಂಪಿ

TENVIC TO ENSURE VICTORY

TENVIC Sports Education is hiring Sports Coaches
Basketball, Cricket, Table Tennis, Football, Chess, Handball
Locations - Bangalore, Malur, Doddaballapur
Qualifications - BPED / MPED / Any Graduation
Representations at university / district / state levels
Experienced candidates are also welcome
Send your resume to Email: careers@tenvicsports.com
T: 080 26711140 | M: 9686495387 | www.tenvicsports.com

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
आज़ादी का अमृत महोत्सव

1. ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಡಬ್ಲ್ಯು/22–23/03 ದಿನಾಂಕ: 31.05.2022 ಗೆ ತಿದ್ದುಪಡಿ

ಟೆಂಡರ್ ಮುಕ್ತಾಯದ ದಿನಾಂಕವನ್ನು ಈ ಕೆಳಗಿನಂತೆ ಮುಂದೂಡಲಾಗಿದೆ:

ಕ್ರ.ಸಂ.	ಟೆಂಡರ್ ಸಂಖ್ಯೆ	ಹಿಂದಿನ ಕೊನೆಯ ದಿನಾಂಕ&ಸಮಯ	ಪರಿಷ್ಕೃತ ಕೊನೆಯ ದಿನಾಂಕ&ಸಮಯ
1	W.496/RWF/YNK/991	28/06/2022, 11.00 ಗಂಟೆಗೆ	04/07/2022, 11.00 ಗಂಟೆಗೆ

2. ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಡಬ್ಲ್ಯು/22–23/05 ದಿನಾಂಕ: 08.06.2022

ಇ–ಟೆಂಡರ್: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್ ಇವರು ಆನ್‌ಲೈನ್ ವೆಬ್‌ಸೈಟ್ http://www.ireps.gov.in (Works) ಮೂಲಕ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ಸ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಸಂ. / ವಿವರಣೆ	ಅಂದಾಜು ಮೌಲ್ಯ ರೂ. ಗಳಲ್ಲಿ	ಕೊನೆಯ ದಿನಾಂಕ&ಸಮಯ
1	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/993 / ವೆಸ್ಟ್ ಕಾಲೋನಿ ಎಸ್‌ಟಿಪಿಯಿಂದ ರೈಗಾಕಾ ಕಾರ್ಖಾನೆ ಆವರಣದ ಒಳಗಿನ ಪಂಪ್‌ಹೌಸ್‌ಗೆ ಸಂಸ್ಕರಿಸಿದ ನೀರನ್ನು ಪೂರೈಸಲು ಜಿಐ ಪೈಪ್‌ಲೈನ್ ಅನ್ನು ಒದಗಿಸುವುದು	1377340.86	04/07/2022 11.00 ಗಂಟೆಗೆ

ಇ – ಟೆಂಡರ್ ಷರತ್ತುಗಳು 1. ಟೆಂಡರ್‌ದಾರರು ವೆಬ್‌ಸೈಟ್ www.ireps.gov.in ನಲ್ಲಿ ಲಭ್ಯವಿರುವ ವೇಳಾಪಟ್ಟಿ ಪುಟದ ಮೂಲಕ ಬೆಲೆ ನಮೂದಿಸಬೇಕು 2. ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ನೋಡಬಹುದು.

ಉಪ ಮುಖ್ಯ ಇಂಜಿನಿಯರ್

PUBLIC NOTICE

The Public are hereby informed that our Client, Ms. Mini Suri ("**Client**") intends to purchase the land described in the Schedule below ("**Schedule Property**")from Mr. Suresh Bajaj ("**Owner**"). The Owner has represented to our Client that no other person other than the Owner himself has any right, title and/or interest in the Schedule Property.

Any person/s having any right, title, interest or claim in the Schedule Property or any part thereof, in any manner or objecting to such transaction in favour of our Client may, write to the undersigned with requisite documentary evidence within **fifteen (15) days** from the issuance of this public notice, failing which, our Client shall proceed with the above-mentioned transaction, without any reference to such claim and the same, if any, shall be deemed as waived.

Any other person dealing directly or indirectly with regard to the Schedule Property shall be doing so at their own cost, risk and consequences and our Client shall not be responsible for any such acts.

SCHEDULE

All that piece and parcel of the immovable property described herein below situated at **Ammani Bellandur Khane Village, Varthur Hobli, Bangalore East Taluk, Bangalore Urban District:**

BBMP Khata No.	Extent	Boundaries			
		East by:	West by:	North by:	South by:
193/100/2/100/3/71/1/34Ben/225	8000 square feet	Road	Private Property	Road	Property belonging to **Mr. Samir Inamdar**
TOTAL	**8000 square feet**				

Date : June 10, 2022

Sd/- **Vishal Bhat**
Anoma Legal, Bangalore Advocates
First Floor, 695, 9th A Main, Indiranagar, Bangalore -560 038.
Email: vishal.bhat@anomalegal.com / Mob: +91 98455 62134

APS Educational Trust
(A Registered Public Trust)
N. R. Colony, Bengaluru-560 019.
Phone: 080-26602586, Email:apsedutrust@gmail.com

APSET No/336/2022-23 Date: 07-06-2022

INVITING TENDERS

The President, APS Educational Trust, Inviting Tenders from the Registered PWD Civil Contractors and Firms with experience of executed similar works.

Sl. No.	Name of work	Approximate Cost in Rs.	EMD in Rs.	Cost of tender form in Rs.
1.	Proposed Construction of Computer Lab at Second Floor for APS Arts & Science College	Rs. 62,75,045/-	Rs. 1,25,501/-	Rs. 2500/-
2.	Proposed Construction of Entrance Arch Work at Somanahalli Campus Bangalore.	Rs. 36,64,753/-	Rs. 73,295/-	Rs. 2000/-

• **Date of issue of Blank Quotations:** From 13-06-2022 to 20-06-2022. • **Last date for submission of Sealed Quotations:** 22-06-2022 before 4.00 p.m. • Any clarification regarding the same can be obtained from the Trust office during working hours.

Prof. K. P. Narasimha Murthy, President
A. R. Acharya, General Secretary

ಜಿಲ್ಲಾ ಪಂಚಾಯತ್, ಕೋಲಾರ, ಮಧ್ಯಾಹ್ನ ಉಪಹಾರ ಯೋಜನೆ,
ಕಛೇರಿ ದೂ;08152–241477, ಇ–ಮೇಲ್: eokolmms@yahoo.co.in
ಸಂ: ಜಿ.ಪಂ.ಕೋ/ಮ.ಉ.ಯೋ/ಕ.ಖಾ.ವಾಹನ.ಟೆಂಡರ್/2022–23
ದಿನಾಂಕ: 02.06.2022

ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ)

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಶಿಕ್ಷಣಾಧಿಕಾರಿಗಳು, ಮಧ್ಯಾಹ್ನ ಉಪಹಾರ ಯೋಜನೆ, ಜಿಲ್ಲಾ ಪಂಚಾಯತ್, ಕೋಲಾರ ಈ ಕಛೇರಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ವರೆಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಖಾಸಗಿ ವಾಹನದ ಅವಶ್ಯಕತೆ ಇದ್ದು, ವಾಹನ ಪೂರೈಸಲು ನೊಂದಾಯಿತ ಟ್ರಾವೆಲ್ಸ್ ಸಂಸ್ಥೆಗಳಿಂದ, ಇ–ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ 3,60,000/– ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.06.2022 ಸಂಜೆ 4.30 ಗಂಟೆ.** ಹೆಚ್ಚಿನ ವಿವರಗಳಿಗಾಗಿ 08152–241477 ಮತ್ತು +91 6360267404 ನಲ್ಲಿ ಸಂಪರ್ಕಿಸಬಹುದು.

ಸಹಿ/–ಶಿಕ್ಷಣಾಧಿಕಾರಿಗಳು, ಮಧ್ಯಾಹ್ನ ಉಪಹಾರ ಯೋಜನೆ, ಜಿಲ್ಲಾ ಪಂಚಾಯತ್, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 133/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ನಡೆದ ಸಮಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವೇಣುಗೋಪಾಲ್‌ಕೆ.ಆರ್ ಅವರನ್ನು ಅಭಿನಂದಿಸಲಾಯಿತು. ಪ್ರೊ. ವೇಣುಗೋಪಾಲ್‌ಕೆ.ಆರ್‌, ಅವರ ಅಕ್ಕ ರುಕ್ಮಿಣಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಎಂ ಕೊಟ್ರೇಶ್‌, ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ ನಿರ್ದೇಶಕ ಪ್ರೊ.ಎಸ್‌ಸಿ ಶರ್ಮ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಹಿರಿಯ ವಿಜ್ಞಾನಿ ಪ್ರೊ.ಎಲ್‌ಎಂ ಪಟ್ನಾಯಕ್‌, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್ ಮಂಜುನಾಥ್‌, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಜೆ.ಟಿ ದೇವರಾಜು ಮತ್ತು ಅಭಿನಂದನಾ ಸಮಿತಿಯ ಪ್ರೊ.ವೆಂಕಟೇಶ್ ಸಿ.ಡಿ ಇದ್ದರು - ಪ್ರಜಾವಾಣಿ ಚಿತ್ರ

ಪದವೀಧರರು ಪ್ರಜ್ಞಾವಂತರಾಗುವುದು ಮುಖ್ಯ: ಡಾ. ಎನ್‌. ಮಂಜುನಾಥ್

ಬೆಂಗಳೂರು: ಕೇವಲ ಪದವಿಗಳನ್ನು ಪಡೆಯುವುದು ಮುಖ್ಯವಲ್ಲ. ಪದವೀಧರರು ಪ್ರಜ್ಞಾವಂತರಾಗಿ ರೂಪುಗೊಂಡರೆ ಸಮಾಜ ಮತ್ತು ದೇಶಕ್ಕೆ ಹೆಚ್ಚು ಒಳಿತಾಗುತ್ತದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ. ಎನ್. ಮಂಜುನಾಥ್ ಹೇಳಿದರು.

ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ನಡೆದ ಬೆಂಗಳೂರು ವಿಶ್ವ-ವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಅವರ ಅಭಿನಂದನಾ ಸಮಾರಂಭದಲ್ಲಿ 'ಸರಸ್ವತಿ ಪುತ್ರ' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆರೋಗ್ಯಕರ ಮನಃಸ್ಥಿತಿ ಹೊಂದಿರುವವರು ಒಂದು ಸಂಸ್ಥೆಯ ಆಡಳಿತದ ಚುಕ್ಕಾಣಿ ಹಿಡಿದರೆ ಆ ಸಂಸ್ಥೆಯೂ ಆರೋಗ್ಯಕರವಾಗಿ ಮುನ್ನ-ಡೆಯುತ್ತದೆ. ಸಿಬ್ಬಂದಿಯೂ ಉತ್ತಮ ವಾತಾವರಣದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಅಂತಹ ಕೆಲಸವನ್ನು ವೇಣುಗೋಪಾಲ್ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಬ್ರ್ಯಾಂಡ್ ಅನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ (ನ್ಯಾಕ್) ನಿರ್ದೇಶಕ ಪ್ರೊ.ಎಸ್.ಸಿ. ಶರ್ಮ ಮಾತನಾಡಿ, 'ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಶತ್ರುಗಳು ಹೆಚ್ಚಿರುತ್ತಾರೆ. ಅರ್ಹತೆ ಮತ್ತು ಪ್ರಾ-ಮಾಣಿಕತೆಗಳೇ ವೇಣುಗೋಪಾಲ್ ಅವರಿಗೆ ಶತ್ರುಗಳಾದವು. ಐದು ಬಾರಿ ಸೇವೆಯಿಂದ ಅಮಾನತಾದರೂ ಎದೆಗುಂದದೇ ಕೆಲಸ ಮಾಡಿದ್ದರಿಂದ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೇರಲು ಅವರಿಗೆ ಸಾಧ್ಯವಾಯಿತು' ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಐಎನ್‌ಎಸ್‌ಎ ಹಿರಿಯ ವಿಜ್ಞಾನಿ ಪ್ರೊ. ಎಲ್.ಎಂ.ಪಟ್ನಾಯಕ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಎಂ. ಕೊಟ್ರೇಶ್, ಕುಲಸಚಿವ (ಮೌಲ್ಯ ಮಾಪನ) ಪ್ರೊ. ಜೆ.ಟಿ.ದೇರಾಜು ಉಪಸ್ಥಿತರಿದ್ದರು.

ದಾಖಲೆಗಳಿಲ್ಲದೇ ₹2 ಕೋಟಿ ಸಾಗಣೆ

ಒಂದನೇ ಪುಟದಿಂದ

ಬಳಿಕ ಆತನನ್ನು ಮತ್ತು ಹಣವನ್ನು ಕಾರವಾರ ಗ್ರಾಮೀಣ ಠಾಣೆ ಪೊಲೀಸರಿಗೆ ಹಸ್ತಾಂತರಿಸಿದರು. ನೋಟಿನ ಕಂತೆಗಳನ್ನು ಎಣಿಸಿದಾಗ ₹ 2 ಕೋಟಿ ಪತ್ತೆಯಾಗಿದೆ.

ತನಿಖೆಯ ವೇಳೆ ಆತ, ತಾನು ಮುಂಬೈನ ಭರತ್ ಭಾಯ್ ಉರುಫ್ ಪಿಂಟು ಎಂಬುವವರ ಜೊತೆ ಕೆಲಸ ಮಾಡುತ್ತಿದ್ದು, ತಿಂಗಳಿಗೆ ₹ 15 ಸಾವಿರ ಕೊಡುತ್ತಾರೆ. ತಾನು ಸಾಗಿಸುವ ಹಣವನ್ನು ಮಂಗಳೂರಿನ ರಾಜು ಎಂಬುವ ವರಿಗೆ ಕೊಡಬೇಕಿತ್ತು ಎಂದು ತಿಳಿಸಿದ್ದಾಗಿ ರೈಲ್ವೆ ರಕ್ಷಣಾ ಪಡೆಯ ಇನ್‌ಸ್ಪೆಕ್ಟರ್ ವಿಪಿನ್ ಸಿಂಗ್ ರಾಣಾ ತಿಳಿಸಿದ್ದಾರೆ. ಕಾರವಾರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಿಕ್ಸೂಚಿ ವರದಿ ಬಿಡುಗಡೆ ಸಮಾರಂಭದಲ್ಲಿ ಸಚಿವ ಸುನಿಲ್ ಕುಮಾರ್

ಇಂಧನ ಇಲಾಖೆ: ಇ.ವಿ ಬಳಕೆಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಇಂಧನ ಇಲಾಖೆ ಕಚೇರಿಗಳಲ್ಲಿ ಮುಂದಿನ ದಿನಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇವಿ) ಬಳಕೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

ಕರ್ನಾಟಕ ಇವಿ ಜಾಗೃತಿ ಪೋರ್ಟಲ್ ಮತ್ತು ಬೆಂಗಳೂರು ನಗರವನ್ನು ಜಾಗತಿಕ ಇವಿ ವಲಯವನ್ನಾಗಿ ಪರಿವರ್ತಿಸುವ ದಿಕ್ಸೂಚಿ ವರದಿ ಬಿಡುಗಡೆ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. ಈ ಸಂಬಂಧ ಮೂರು ತಿಂಗಳ ಹಿಂದೆಯೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಮುಖ್ಯಮಂ-ತ್ರಿಗಳ ಗಮನಕ್ಕೂ ತರಲಾಗಿದೆ ಎಂದು ಹೇಳಿದರು.

'ವಿದ್ಯುತ್ ಚಾಲಿತ ವಾಹನಗಳ ಬೆಲೆ, ಪೆಟ್ರೋಲ್ ಹಾಗೂ ಡೀಸೆಲ್ ವಾಹನಗಳ ಬೆಲೆಗಿಂತ ದುಬಾರಿ ಇದೆ. ಹೀಗಾಗಿ ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಇನ್ನೂ ಒಪ್ಪಿಗೆ ದೊರೆತಿಲ್ಲ. ವಿದ್ಯುತ್ ಚಾಲಿತ ವಾಹನ ಬಳಸುವುದು ನಮ್ಮ ಇಲಾಖೆಯ ಆದ್ಯತೆಯಾಗಿದ್ದು, ಹಣಕಾಸು ಇಲಾಖೆ ಸಮ್ಮತಿಸಿದರೆ, ಮುಂದಿನ ದಿನಗಳಲ್ಲಿ ಇಂಧನ ಇಲಾಖೆಯ ಎಲ್ಲ ಕಚೇರಿಗಳಲ್ಲೂ ವಿದ್ಯುತ್ ಚಾಲಿತ ವಾಹನಗಳನ್ನೇ ಬಳಸಲಾಗುವುದು' ಎಂದು ಹೇಳಿದರು.

ಇಂಧನ ಸಚಿವ ವಿ.ಸುನಿಲ್ ಕುಮಾರ್ ಇವಿ ಜಾಗೃತಿ ಪೋರ್ಟಲ್ ಮತ್ತು ದಿಕ್ಸೂಚಿ ವರದಿ ಬಿಡುಗಡೆ ಮಾಡಿದರು. ಕೆಪಿಟಿಸಿಎಲ್ ಆಡಳಿತ ನಿರ್ದೇಶಕಿ ಡಾ.ಎನ್‌ ಮಂಜುಳಾ, ಹೆಚ್ಚುವರಿ ಮುಖ್ಯಕಾರ್ಯದರ್ಶಿ ಜಿ.ಕುಮಾರ್ ನಾಯಕ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ.ರಾಜೇಂದ್ರ ಚೋಳನ್, ಭಾರತದ ಬ್ರಿಟಿಷ್ ಹೈಕಮಿಷನರ್ ಅಲೆಕ್ಸ್ ಇಲ್ಲಿಸ್, ಕರ್ನಾಟಕ ಮತ್ತು ಕೇರಳದ ಬ್ರಿಟಿಷ್ ಉಪ ಹೈಕಮಿಷನರ್ ಶೋಟ್ ಬೋಲ್ಟ್ ಇದ್ದರು

ಇದಕ್ಕೂ ಮೊದಲು ಇವಿ ಜಾಗೃತಿ ಪೋರ್ಟಲ್ ಮತ್ತು ದಿಕ್ಸೂಚಿ ವರದಿ ಬಿಡುಗಡೆ ಮಾಡಿ ಮಾತನಾಡಿದ ಸಚಿವರು, 'ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನ ಬಳಕೆಗೆ ಸರ್ಕಾರ ಉತ್ತೇಜನ ನೀಡುತ್ತಿದ್ದು, ಜೂನ್ 23ರಿಂದ ಜೂನ್ 30ರ ವರೆಗೆ ರಾಜ್ಯದಲ್ಲಿ ಇವಿ ಚಾರ್ಜಿಂಗ್ ಸೆಂಟರ್‌ಗಳ ಕುರಿತು ಅಭಿಯಾನ ಹಮ್ಮಿ-ಕೊಳ್ಳಲಾಗಿದೆ' ಎಂದರು.

ರಾಜ್ಯದಲ್ಲಿ 1,000ಕ್ಕೂ ಹೆಚ್ಚು ಇವಿ ಚಾರ್ಜಿಂಗ್ ಸ್ಟೇಷನ್‌ಗಳಿದ್ದು, 3,000 ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು ಸುನಿಲ್ ಕುಮಾರ್ ಹೇಳಿದರು.

ಭಾರತದ ಬ್ರಿಟಿಷ್ ಹೈಕಮಿಷನರ್ ಅಲೆಕ್ಸ್ ಇಲ್ಲಿಸ್ ಮಾತನಾಡಿ, 'ಭಾರತದಲ್ಲಿ ಸುಮಾರು 22 ಕೋಟಿ ಜನರು ನಗರ ಪ್ರದೇಶಕ್ಕೆ ಮುಂದಿನ ದಿನಗಳಲ್ಲಿ ವಲಸೆ ಹೋಗಲಿದ್ದಾರೆ. ಈ ನಿಟ್ಟಿನಲ್ಲಿ ನಗರ ಪ್ರದೇಶಗಳ ಸಮರ್ಥ ಅಭಿವೃದ್ಧಿ ಅತಿ ಮುಖ್ಯ' ಎಂದು ತಿಳಿಸಿದರು.

'ಭಾರತದಲ್ಲಿ ವಿದ್ಯುತ್ ವಾಹನಗಳ ಬಳಕೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರ ಜತೆ ನಾನು ಮಾತನಾಡಿದ್ದೇನೆ. ಅವರು ಈ ಕುರಿತು ಸಕಾರಾತ್ಮಕ ಧೋರಣೆ ಹೊಂದಿದ್ದು, ಕೇಂದ್ರ ಸರ್ಕಾರದ ವತಿಯಿಂದ ಎಲ್ಲ ರೀತಿಯ ಸಹಕಾರದ ಭರವಸೆಯನ್ನು ನೀಡಿದ್ದಾರೆ. ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ಇವಿ ಚಲನಶೀಲತೆ ಬಗ್ಗೆ ಸಹಭಾಗಿತ್ವ ಹೊಂದಲು ಬ್ರಿಟನ್ ಉತ್ಸುಕತೆ ಹೊಂದಿದೆ' ಎಂದು ಅವರು ತಿಳಿಸಿದರು.

ಬೆಸ್ಕಾಂ ಆಡಳಿತ ನಿರ್ದೇಶಕ ಪಿ.ರಾಜೇಂದ್ರ ಚೋಳನ್ ಮಾತನಾಡಿ, 'ಬೆಸ್ಕಾಂ ಚಾರ್ಜಿಂಗ್ ಸ್ಟೇಷನ್‌ಗಳಿಂದ ತಿಂಗಳಿಗೆ 6,000ಕ್ಕೂ ಹೆಚ್ಚು ವಹಿವಾಟು ನಡೆಯುತ್ತಿದೆ. ಸುಮಾರು 30 ಸಾವಿರ ಕಿ.ವ್ಯಾಟ್ ಇಂಧನ ಮಾರಾಟ ಮಾಡಲಾಗುತ್ತಿದೆ. ₹2.5 ಲಕ್ಷ ಆದಾಯ ಗಳಿಸುತ್ತಿದೆ' ಎಂದರು.

ರಾಜ್ಯ ಚುನಾವಣಾ ಆಯೋಗಕ್ಕೆ ನೋಟಿಸ್

ನವದೆಹಲಿ: ಆನೇಕಲ್ ಪುರಸಭೆಯ ಮೂವರು ಸದಸ್ಯರ ಅನರ್ಹತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನೋಟಿಸ್ ನೀಡಿದೆ.

ಹೇಮಲತಾ ಸುರೇಶ್, ಲಲಿತಾ ಲಕ್ಷ್ಮೀನಾರಾ-ಯಣ್ ಮತ್ತು ಕೆ.ಶ್ರೀನಿವಾಸ್ ಅವರು ಪುರಸಭಾ ಸದಸ್ಯರಾಗಿ 2019ರ ಮೇ 30ರಂದು ಆಯ್ಕೆಯಾ-ಗಿದ್ದರು. ಚುನಾವಣಾ ವೆಚ್ಚದ ದಾಖಲೆ ನೀಡಿಲ್ಲ ಎಂಬ ಕಾರಣಕ್ಕೆ ಈ ಮೂವರನ್ನು ಅನರ್ಹಗೊಳಿಸಿ ಚುನಾವಣಾ ಆಯೋಗ 2021ರ ನವೆಂಬರ್ 15ರಂದು ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಅನರ್ಹ ಸದಸ್ಯರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಚುನಾವಣಾ ಆಯೋಗದ ಆದೇಶವನ್ನು ಹೈಕೋರ್ಟ್ 2022ರ ಏಪ್ರಿಲ್ 18ರಂದು ಎತ್ತಿ ಹಿಡಿದಿತ್ತು. ಇದನ್ನು ಪ್ರಶ್ನಿಸಿ ಈ ಮೂವರು ದ್ವಿಸದಸ್ಯರ ಪೀಠದ ಮೊರೆ ಹೋಗಿದ್ದರು. ಅವರ ಅರ್ಜಿಯನ್ನು ಪೀಠ ವಜಾ ಮಾಡಿತ್ತು. ಇದೀಗ, ಅನರ್ಹ ಸದಸ್ಯರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಹೊಸ ಸದಸ್ಯರ ಆಯ್ಕೆಗೆ ಜೂನ್ 19ರಂದು ಮತದಾನ ನಿಗದಿಯಾಗಿದ್ದು, ಇದರಲ್ಲಿ ಮಧ್ಯಪ್ರವೇಶಿ-ಸುವುದಿಲ್ಲ ಎಂದೂ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿ ಎಂ.ಆರ್. ಷಾ ಹಾಗೂ ಅನಿರುದ್ಧ ಬೋಸ್ ಅವರನ್ನು ಒಳಗೊಂಡ ರಜಾ ಕಾಲದ ಪೀಠವು ಗುರುವಾರ ವಿಚಾರಣೆ ನಡೆಸಿ, ಆಯೋಗ ಹಾಗೂ ಇತರರಿಂದ ಪ್ರತಿಕ್ರಿಯೆ ಕೇಳಿದೆ. ಜೂನ್ 15ರಂದು ಮುಂದಿನ ವಿಚಾರಣೆ ನಡೆಸುವುದಾಗಿ ಹೇಳಿದೆ.

ಅನರ್ಹ ಸದಸ್ಯರ ಪರವಾಗಿ ಹಿರಿಯ ವಕೀಲರಾದ ವಿಭಾ ದತ್ತ ಮಖಿಜಾ ವಾದ ಮಂಡಿಸಿ, ಹೈಕೋರ್ಟ್ ಏಪ್ರಿಲ್ 18 ಹಾಗೂ ಮೇ 30ರಂದು ಹೊರಡಿಸಿರುವ ಆದೇಶಗಳ ಸಿಂಧುತ್ವ ಪ್ರಶ್ನಿಸಿದರು. 'ಚುನಾವಣಾ ಆಯೋಗ ನೋಟಿಸ್ ನೀಡಿದ ಎರಡು ದಿನಗಳಲ್ಲೇ ಸದಸ್ಯರು ಚುನಾವಣಾ ವೆಚ್ಚದ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ, ಬೆಂಗಳೂರು ನಗರ ಜಿಲ್ಲಾಧಿ-ಕಾರಿಯವರ ವರದಿಯ ಆಧಾರದಲ್ಲಿ ಚುನಾವಣಾ ಆಯೋಗವು ಸದಸ್ಯರನ್ನು ಅನರ್ಹಗೊಳಿಸಿದೆ' ಎಂದರು.

'ತಂದೆಯ ಪಾಲಕರೇ ಮೊಮ್ಮಗನನ್ನು ಚೆನ್ನಾಗಿ ನೋಡಿಕೊಳ್ಳುವರು'

ನವದೆಹಲಿ: ಕೋವಿಡ್‌ನಿಂದಾಗಿ ಪಾಲಕರನ್ನು ಕಳೆದುಕೊಂಡು ಅನಾಥನಾಗಿರುವ ಬಾಲಕನನ್ನು ಆತನ ತಂದೆಯ ತಂದೆ–ತಾಯಿಗೇ ಒಪ್ಪಿಸುವಂತೆ ಸುಪ್ರೀಂಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

'ಬಾಲಕ ಸದ್ಯ ತನ್ನ ತಾಯಿಯ ಸಂಬಂಧಿ (ಚಿಕ್ಕಮ್ಮ) ಬಳಿ ಇದ್ದಾನೆ. ಚಿಕ್ಕಮ್ಮ ಆ ಬಾಲಕನನ್ನು ಬಹಳ ಪ್ರೀತಿಯಿಂದ ಸಲಹುತ್ತಿರಬಹುದು. ಆದರೆ, ತಂದೆಯ ತಂದೆ–ತಾಯಿಗಳೇ ಮೊಮ್ಮಗನನ್ನು ಚೆನ್ನಾಗಿ ನೋಡಿಕೊಳ್ಳಬಲ್ಲರು' ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಅನಿರುದ್ಧ ಬೋಸ್ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

'ಬಾಲಕ, ರಜಾಕಾಲದಲ್ಲಿ ಅಥವಾ ತನಗೆ ಬಯಸಿದಾಗ ಚಿಕ್ಕಮ್ಮನನ್ನು ಭೇಟಿ ಮಾಡಬಹುದು. ಈ ವ್ಯವಸ್ಥೆ ಆತನ ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಅಡ್ಡಿಯಾಗಬಾರದು' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿತು.

ಕೋವಿಡ್‌ನ ಎರಡನೇ ಅಲೆ ಸಂದರ್ಭದಲ್ಲಿ 6 ವರ್ಷದ ಬಾಲಕನ ತಂದೆ–ತಾಯಿ ಮೃತಪಟ್ಟಿದ್ದರು. ಬಾಲಕನ ಪಾಲನೆ–ಪೋಷಣೆ ವಿಷಯ ಕೋರ್ಟ್ ಮೆಟ್ಟಿಲೇರಿತ್ತು. ಬಾಲಕನನ್ನು ಚಿಕ್ಕಮ್ಮನ ಸುಪರ್ದಿಗೆ ನೀಡುವಂತೆ ಗುಜರಾತ್ ಹೈಕೋರ್ಟ್ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ, ಬಾಲಕನ 71 ವರ್ಷದ ಅಜ್ಜ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸುದ್ದಿ 2 ನಿಮಿಷ

ನಿಂದನೆ: ಪೊಲೀಸರಿಗೆ ದೂರು ನೀಡಿದ ನಟಿ ರಮ್ಯಾ

ಬೆಂಗಳೂರು: ನಟಿ ರಮ್ಯಾ ಅವರನ್ನು ನಿಂದಿಸಿ ವ್ಯಕ್ತಿಯೊ-ಬ್ಬರು ಪೋಸ್ಟ್ ಪ್ರಕಟಿಸಿದ್ದು, ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನಟಿ ರಮ್ಯಾ ಅವರು ಠಾಣೆಗೆ ಬಂದು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಟ್ವಿಟರ್, ಇನ್‌ಸ್ಟಾಗ್ರಾಮ್ ಸೇರಿದಂತೆ ಹಲವು ಸಾಮಾಜಿಕ ಮಾಧ್ಯಮಗಳಲ್ಲಿ ರಮ್ಯಾ ಖಾತೆ ಹೊಂದಿದ್ದಾರೆ. ಇತ್ತೀಚೆಗೆ ವ್ಯಕ್ತಿಯೊಬ್ಬ ರಮ್ಯಾ ಅವರನ್ನು ನಿಂದಿಸಿ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಪ್ರಕಟಿಸಿದ್ದನೆಂದು ಹೇಳಲಾಗುತ್ತಿದೆ. ಇದಕ್ಕೆ ಪುರಾವೆಗಾಗಿ ಪೋಸ್ಟ್‌ನ ಸ್ಕ್ರೀನ್‌ಶಾಟ್ ಇದ್ದು, ಅದನ್ನು ಪರಿಶೀಲಿಸಲಾಗುತ್ತಿದೆ' ಎಂದೂ ಪೊಲೀಸರು ತಿಳಿಸಿದರು.

'ಗುತ್ತಿಗೆ ನಿರ್ಬಂಧ–ವಿವರಣೆ ಅವಶ್ಯ'

ಬೆಂಗಳೂರು: 'ಗುತ್ತಿಗೆ ಒಪ್ಪಂದ ಪ್ರಕ್ರಿಯೆಯಲ್ಲಿ (ಕಾಂಟ್ರ್ಯಾಕ್ಟ್) ಗುತ್ತಿಗೆದಾ-ರರನ್ನು ಭಾಗವಹಿಸದಂತೆ ನಿರ್ಬಂಧಿಸುವ ಮತ್ತು ಅವರನ್ನು ಕಪ್ಪು ಪಟ್ಟಿಗೆ ಸೇರಿಸುವ ಮುನ್ನ ಷೋಕಾಸ್ ನೋಟಿಸ್ ನೀಡಿ ವಿವರಣೆ ಪಡೆದ ನಂತರವೇ ಅಂತಿಮ ಆದೇಶ ಹೊರಡಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮೆಸರ್ಸ್ ಕ್ರೆಸ್ಟ್ ಫೆಸಿಲಿಟಿ ಮ್ಯಾನೇಜ್‌ಮೆಂಟ್ ಕಂಪನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಕಂಪನಿಗೆ ಅವಕಾಶ ಕೊಟ್ಟು ಕೇಟರಿಂಗ್ ಸೇವೆ ಆರಂಭಿಸದ ಬಗ್ಗೆ ವಿವರಣೆ ಪಡೆಯಬೇಕು. ನಂತರ ತನ್ನ ಅಂತಿಮ ಆದೇಶ ಹೊರಡಿಸಬಹುದು' ಎಂದು ಹೇಳಿರುವ ನ್ಯಾಯಪೀಠ, 'ನಿರ್ಬಂಧನಾ ಕ್ರಮ ಸಿವಿಲ್ ವ್ಯಾಜ್ಯಗಳಿಗೆ ದಾರಿ ಮಾಡಿಕೊಡುತ್ತದೆ. ಗುತ್ತಿಗೆದಾರನ ಜೀವನ ಹಕ್ಕು ಚ್ಯುತಿ ಉಂಟು ಮಾಡುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

ಅಂತೆಯೇ, ಅರ್ಜಿದಾರ ಕಂಪನಿಯನ್ನು ಗುತ್ತಿಗೆ ಒಪ್ಪಂದದಿಂದ ನಿರ್ಬಂಧಿಸಿ 2019ರ ಏಪ್ರಿಲ್ 5ರಂದು ನೈರುತ್ಯ ರೈಲ್ವೆ ವಲಯದ ಹಿರಿಯ ವಾಣಿಜ್ಯ ವ್ಯವಸ್ಥಾಪಕರು ಜಾರಿಗೊಳಿಸಿದ್ದ ಪತ್ರವನ್ನು ರದ್ದುಪಡಿಸಿದೆ.

ಎರಡು ದಿನ ಮೊದಲೇ ಸ್ವವಿವಾಹವಾದ ಕ್ಷಮಾ ಬಿಂದು

ಅಹಮದಾಬಾದ್ (ಪಿಟಿಐ): ಸ್ವಯಂ ವಿವಾಹವಾಗುವುದಾಗಿ ಘೋಷಿಸಿ ದೇಶದಲ್ಲಿ ಚರ್ಚೆಗೆ ಗ್ರಾಸವಾಗಿದ್ದ ಗುಜರಾತ್‌ನ ವಡೋದರಾದ 'ದ್ವಿಲಿಂಗಿ' ಮಹಿಳೆ ಕ್ಷಮಾ ಬಿಂದು (24), ಕೆಲ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದಕ್ಕೆ ಎರಡು ದಿನಗಳು ಮುಂಚಿತವಾಗಿಯೇ ಸ್ವವಿವಾಹವಾಗಿದ್ದಾರೆ.

ಜೂನ್ 11ರಂದು ಗುಜರಾತ್‌ನ ಸಾಂಪ್ರದಾಯಿಕ ವಿಧಿ ವಿಧಾನಗಳಂತೆ, ವಡೋದರಾದ ಕಲ್ಯಾಣ ಮಂಟಪದಲ್ಲಿ ಸ್ವವಿವಾಹವಾಗಿ, ಮಧುಚಂದ್ರಕ್ಕೆ ಗೋವಾಕ್ಕೆ ಹೋಗುವುದಾಗಿ ಕ್ಷಮಾ ಹೇಳಿಕೊಂಡಿದ್ದರು. ಸ್ಥಳೀಯ ರಾಜಕಾರಣಿಗಳು ಮತ್ತು ಕೆಲ ಹಿಂದೂ ಸಂಘಟನೆಗಳ ಕಾರ್ಯಕರ್ತರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

'ನಾನು ಮದುವೆಯಾಗಬೇಕಿದ್ದ ದೇವಸ್ಥಾನದಲ್ಲಿ ಕಾಯ್ದಿರಿಸಿದ್ದ ಬುಕಿಂಗ್ ಅನ್ನು ಬಿಜೆಪಿಯ ವಡೋದರಾ ಘಟಕದ ಉಪಾಧ್ಯಕ್ಷೆ ಸುನಿತಾಬೆನ್ ಅವರ ವಿರೋಧದಿಂದಾಗಿ ರದ್ದುಪಡಿಸಿದ್ದರು. ಹೀಗಾಗಿ ವಿವಾದಕ್ಕೆ ಆಸ್ಪದ ನೀಡಬಾರದೆಂದು ಮನೆಯಲ್ಲಿಯೇ ಬುಧವಾರ ಆಯ್ದ ಕೆಲವೇ ಸ್ನೇಹಿತರ ಸಮ್ಮುಖದಲ್ಲಿ ಸ್ವವಿವಾಹವಾದೆ' ಎಂದು ಕ್ಷಮಾ ಹೇಳಿದ್ದಾರೆ.

ಜನಸೇವೆಯನ್ನೇ ಉಸಿರಾಗಿಸಿಕೊಂಡ ಶಾಂತಕೃಷ್ಣಮೂರ್ತಿ

ಸದಾ ಸಮಾಜ ಸೇವೆಯನ್ನೇ ಉಸಿರಾಗಿಸಿಕೊಂಡು ನಿರಂತರವಾಗಿ ಜನ ಸಂಪರ್ಕದ ಮೂಲಕ ರಾಮಮೂರ್ತಿನಗರ ವಾರ್ಡಿನ ನೆಚ್ಚಿನ ನಾಯಕಿಯಾದ ಶಾಂತಕೃಷ್ಣಮೂರ್ತಿ ಬಡವರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಜನರು ತಮ್ಮ ಕಷ್ಟ ಹೇಳಿಕೊಂಡಾಗ ತಕ್ಷಣಕ್ಕೆ ಸ್ಪಂದಿಸುವ ಗುಣ ಹೊಂದಿ, ಸಾರ್ವಜನಿಕರ ಪ್ರತಿಯೊಂದು ಸಮಸ್ಯೆಗೆ ಪರಿಹಾರ ನೀಡುವ ಅಶ್ರಯದಾತೆಯಾಗಿದ್ದಾರೆ.

ರಾಮಮೂರ್ತಿನಗರ ವಾರ್ಡಿನಲ್ಲಿ ಸಮಾಜ ಸೇವೆ ಮಾಡುವ ದೃಷ್ಟಿಯಿಂದ ಹಲವಾರು ಮಹತ್ವಪೂರ್ಣ ಯೋಜನೆಗಳನ್ನು ಹಾಕಿಕೊಂಡು ಮುನ್ನಡೆಯುತ್ತಿದ್ದಾರೆ. ಪರಿಸರ ಜಾಗೃತಿ, ಆರೋಗ್ಯ ಶಿಬಿರ, ಮಹಿಳೆಯರಿಗೆ ಸ್ವಾವಲಂಬಿ ಜೀವನ ನಡೆಸಲು ಟೈಲರಿಂಗ್ ತರಬೇತಿ, ಪೌರಕಾರ್ಮಿಕ ವರ್ಗದ ಮಕ್ಕಳಿಗೆ ನೋಟ್‌ಬುಕ್ ವಿತರಣೆ, ಗುಡಿಸಲು ವಾಸಿಗಳಿಗೆ ನೀರು ಸರಬರಾಜು ಮಾಡುವ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಕೊರೊನಾ ವ್ಯಾಪಿಸಿದ ವೇಳೆಯಲ್ಲಿ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ಬಡಾವಣೆಯಲ್ಲಿ ಸ್ಯಾನಿಟೈಸರ್, ಆಹಾರ ಪೊಟ್ಟಣ, ತಾವೇ ತಯಾರಿಸಿದ ಊಟ ಪೊಟ್ಟಣಗಳನ್ನು ಮನೆಮನೆಗೆ ವಿತರಿಸಿದ್ದು, ಜನಮಾನಸದಲ್ಲಿ ಉಳಿಯುವಂತೆ ಕೆಲಸ ಮಾಡಿದ್ದಾರೆ. ಶಾಂತಕೃಷ್ಣಮೂರ್ತಿ ಅವರ ತಂಡ ಹಗಲು ರಾತ್ರಿಯನ್ನದೇ ಕೊರೊನಾ ಸೋಂಕು ಹರಡಿದ ಕಾಲದಲ್ಲೇಲಿ ಒದಗಿಸಿದ ಹಲವು ಸೇವೆಗಳು ಮಹತ್ವದ್ದಾಗಿವೆ. ಕೊರೊನಾ ವೇಳೆಯಲ್ಲಿ ಶಾಂತಕೃಷ್ಣಮೂರ್ತಿ ಅವರ ಅನನ್ಯ ಸೇವೆಯನ್ನು ಗುರುತಿಸಿ ಕೊರೊನಾ ವಾರಿಯರ್ಸ್ ಪ್ರಶಸ್ತಿ, ಬಿ.ಕ್ಲಿಪ್ ಅಲ್ಯುಮ್ನಿ ಅಸೋಸಿಯೇಶನ್ ನೀಡುವ ಪ್ರತಿಷ್ಠಿತ ಬೆಂಗಳೂರು ಮಹಿಳಾ ಸಾಧಕಿ ಪ್ರಶಸ್ತಿಗಳು ಸಂದವು.

ಶಾಂತಕೃಷ್ಣಮೂರ್ತಿ ಅವರು ಫೌಂಡೇಷನ್ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವ ದೃಷ್ಟಿಯಿಂದ ಬಡವರಿಗೆ ಅನುಕೂಲವಾಗಲೆಂದು ಆರೋಗ್ಯ ಶಿಬಿರವನ್ನು ಹಮ್ಮಿಕೊಂಡಿದ್ದಾರೆ. ಸಮಾಜ ಸೇವಕಿ, ಬಡವರ ಬಂಧು, ಸಕ್ರಿಯ ರಾಜಕಾರಣಿಯಾಗಿರುವ ಶಾಂತಕೃಷ್ಣಮೂರ್ತಿ ಅವರು 10 ಜೂನ್ 1977 ರಂದು ಕೋಲಾರದಲ್ಲಿ ಜನಿಸಿದರು. ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿ ಬಾಲ್ಯದಿಂದಲೂ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

ಶಾಂತಕೃಷ್ಣಮೂರ್ತಿ ಫೌಂಡೇಷನ್ ಕಲ್ಕೆರೆಯ ಎನ್‌ಆರ್‌ಐ ಬಡಾವಣೆಯಲ್ಲಿದ್ದು, ಲಾಭರಹಿತ ಸಂಸ್ಥೆಯಾಗಿ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸುವ ಉದ್ದೇಶದಿಂದ 2016ರಲ್ಲಿ ಸ್ಥಾಪಿತವಾಗಿದೆ. ಶಾಂತಕೃಷ್ಣಮೂರ್ತಿ ಫೌಂಡೇಷನ್ ಮೂಲಕ ಜಾಗೃತಿ ಕಾರ್ಯಕ್ರಮಗಳು, ದೇಣಿಗೆ ಶಿಬಿರಗಳು, ಆರೋಗ್ಯ ಶಿಬಿರ, ಪರೋಪಕಾರಿ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದಾರೆ. ಶಾಂತಕೃಷ್ಣಮೂರ್ತಿ ಅವರ ಪತಿಯೂ ಆಗಿರುವ ಮುಖಂಡ ಕಲ್ಕೆರೆ ಕೃಷ್ಣಮೂರ್ತಿ ಪ್ರತಿಯೊಂದು ಸೇವೆಗೆ ಸಹಕಾರಿಯಾಗಿ ನಿಂತಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರೈತರ ಸಾವಯವ ಕೃಷಿ ಉತ್ಪನ್ನ ಮಾರಾಟ ಮೇಳ...

ಶಾಂತಕೃಷ್ಣಮೂರ್ತಿ ಫೌಂಡೇಷನ್ ಆರೋಗ್ಯಕರ ಮತ್ತು ಸದೃಢ ಸಮಾಜದ ಪರಿಕಲ್ಪನೆಯನ್ನು ಇಟ್ಟುಕೊಂಡು ಕೆ.ಆರ್.ಪುರದಲ್ಲಿ ಪ್ರಥಮ ಬಾರಿಗೆ ಸಾವಯವ ಕೃಷಿ ಉತ್ಪನ್ನಗಳ ಮೇಳವನ್ನು ಹಮ್ಮಿಕೊಂಡು, ಸತತ ಮೂರು ದಿನಗಳ ಕಾಲ ಸಾರ್ವಜ-ನಿಕರಿಗೆ ಮಾಹಿತಿಯನ್ನು ನೀಡಿತ್ತು. 100ಕ್ಕೂ ಹೆಚ್ಚು ಮಳಿಗೆಗಳಲ್ಲಿ ವಿವಿಧ ಸಾವಯವ ತಜ್ಞರು ಪಾಲ್ಗೊಂಡಿದ್ದರು. 10,000ಕ್ಕೂ ಹೆಚ್ಚು ಜನರು ಮೇಳಕ್ಕೆ ಭೇಟಿ ನೀಡಿ ಉತ್ಪನ್ನಗಳ ಬಗ್ಗೆ ತಿಳಿದು-ಕೊಂಡಿದ್ದರು.

ಶಾಂತಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ಸೀಡ್ ಬಾಲ್ ತಯಾರಿಕೆ

ಸಸಿ ನೆಡುವ ಕಾರ್ಯಕ್ರಮ

ಸಸಿ ನೆಡುವುದೆಂದರೆ ನಾಳೆಯ ಮೇಲೆ ನಂಬಿಕೆ ಇಡುವುದು ಎಂಬರ್ಥದಲ್ಲಿ ಪರಿಸರ ಕಾಳಜಿ ಹೊಂದಿರುವ ಶಾಂತಕೃಷ್ಣಮೂರ್ತಿ ಅವರು ಹಲವಾರು ವರ್ಷಗಳಿಂದ ರಾಮಮೂರ್ತಿನಗರ ವಾರ್ಡಿನಲ್ಲಿ ಸಾವಿರಾರು ಗಿಡಗಳನ್ನು ನೆಡುತ್ತಾ ಬಂದಿದ್ದಾರೆ. ಶಾಲಾ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ವಿತರಣೆ ಮಾಡುತ್ತ ಬರುತ್ತಿದ್ದಾರೆ. 'ಸೀಡ್ ಬಾಲ್' (ಬೀಜದುಂಡೆ) ಕಾರ್ಯಕ್ರಮ ಹಮ್ಮಿಕೊಂಡು, ಸಾವಿರಕ್ಕೂ ಹೆಚ್ಚು 'ಸೀಡ್ ಬಾಲ್' ವಿತರಿಸಿ ಅರಣ್ಯ ಪ್ರದೇಶದಲ್ಲಿ ಎಸೆಯಲಾಗಿತ್ತು.

ಜೀವಿತಾ ಅನಾಥ ಆಶ್ರಮದ ಮಕ್ಕಳಿಗೆ ನೋಟ್ ಬುಕ್ ವಿತರಣೆ

ಶಾಂತಕೃಷ್ಣಮೂರ್ತಿ ಅವರು ನಟ ಪುನೀತ್ ರಾಜಕುಮಾರ್ ನಿಧನರಾದಾಗ ಅವರ ಸವಿನೆನಪಿಗಾಗಿ ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಚನ್ನಸಂದ್ರ ಗ್ರಾಮದ ವೃತ್ತದಲ್ಲಿ ಗ್ರಾಮಸ್ಥರೊಂದಿಗೆ ರಾಜ್ಯದಲ್ಲಿ ಪ್ರಥಮ ಬಾರಿಗೆ ಯುವರತ್ನ ಪುನೀತ್ ರಾಜ್‌ಕುಮಾರ್ ವೃತ್ತ ಸ್ಥಾಪಿಸಿ ಜನ ಮನ್ನಣೆ ಪಾತ್ರರಾಗಿದ್ದರು. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಗಾರ್ಡನ್ ಸಿಟಿ ಕಾಲೇಜು ಪಕ್ಕದ ಜೀವಿತಾ ಅನಾಥ ಆಶ್ರಮದ ಮಕ್ಕಳಿಗೆ ನೋಟ್ ಬುಕ್, ಪೆನ್ಸಿಲ್, ಸಿಹಿ ತಿಂಡಿಗಳನ್ನು ಹಂಚಿದ್ದರು.

ನಟ ಪುನೀತ್ ರಾಜ್‌ಕುಮಾರ್ ನೆನಪಿಗಾಗಿ ಕೆ.ಚನ್ನಸಂದ್ರ ವೃತ್ತದ ನಾಮಫಲಕ

ನಿರ್ಮಲ ಮನಸ್ಸಿನ ನಿಷ್ಕಳಂಕ ವ್ಯಕ್ತಿತ್ವದ ಸಮಾಜ ಸೇವಕಿ ಶಾಂತಕೃಷ್ಣಮೂರ್ತಿ ದಂಪತಿ ತನು–ಮನ–ಧನ ಸಹಾಯದ ಮೂಲಕ ಸೇವೆಯನ್ನು ಕೈಗೊಂಡಿದ್ದಾರೆ. ಹಲವು ವರ್ಷಗಳಿಂದ ಈ ದಂಪತಿ ಉದ್ಯೋಗ ಮೇಳ, ಆರೋಗ್ಯ ಮೇಳ, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಹಸ್ತ ನೀಡಲು ಮುಂದಾಗಿರುವುದು ಶ್ಲಾಘನೀಯ.

ಬೈರತಿ ಬಸವರಾಜ.–ನಗರಾಭಿವೃದ್ಧಿ ಸಚಿವ

ಸ್ವಚ್ಛ ಭಾರತ್ ಅಭಿಯಾನ ಸ್ವಚ್ಛ ರಾಷ್ಟ್ರದತ್ತ ಹೆಜ್ಜೆ...

ಗಾಂಧಿ ಜಯಂತಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಜನ್ಮದಿನದ ಅಂಗವಾಗಿ ಅಕ್ಟೋಬರ್ 2ರಂದು ಸ್ವಚ್ಛ ಭಾರತ್ ಅಭಿಯಾನವನ್ನು ನಡೆಸಲಾಯಿತು. ರಾಮಮೂರ್ತಿನಗರ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಹಲವಾರು ಕೆರೆ ಹಾಗೂ ಬಡಾವಣೆಗಳನ್ನು ಅಭಿಯಾನದ ಮೂಲಕ ಸ್ವಚ್ಛಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಶಾಂತಕೃಷ್ಣಮೂರ್ತಿ

ಶಾಂತಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ಕಳೆದ ಏಳೆಂಟು ವರ್ಷಗಳಿಂದ ಸಮಾಜ ಪರ ಕಲ್ಯಾಣದ ಕೆಲಸ ನಡೆಯುತ್ತಿವೆ. ಜಾತಿ ಮತ ಭೇದಭಾವ ಇಲ್ಲದೇ ಸಹಾಯಹಸ್ತ ಚಾಚುತ್ತಾರೆ.

ಶೇಕ್ ಅಬ್ದುಲ್ ಅಜೀಜ್,
ಕೌದೇನಹಳ್ಳಿ ನಿವಾಸಿ, ಅಧ್ಯಕ್ಷರು ಮೆಕ್ಕಾ ಮಸೀದಿ...

ನಗರಾಭಿವೃದ್ಧಿ ಸಚಿವ ಹಾಗೂ ಕೆ.ಆರ್‌ಪುರ ಶಾಸಕ ಬೈರತಿ ಬಸವರಾಜ ಅವರೊಂದಿಗೆ ಶಾಲಾ ಮಕ್ಕಳಿಗೆ ಸ್ಯಾನಿಟೈಸರ್ ವಿತರಿಸುತ್ತಿರುವ ಶಾಂತಕೃಷ್ಣಮೂರ್ತಿ

ಹುಟ್ಟುಹಬ್ಬದ ಪ್ರಯುಕ್ತ ಇಂದು ಉಚಿತ ಆರೋಗ್ಯ ಶಿಬಿರ..

ಕಿದ್ವಾಯ್ ಸಂಸ್ಥೆ, ಸಪ್ತಗಿರಿ ವೈದ್ಯಕೀಯ ವಿದ್ಯಾಲಯ ಹಾಗೂ ಬಿ ಕ್ಲಿಪ್ ಸಂಸ್ಥೆ ಸಹಯೋಗದೊಂದಿಗೆ ಅರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ. ಕ್ಯಾನ್ಸರ್ ಪರೀಕ್ಷೆ, ಹೃದಯ ರೋಗ, ಥೈರಾಯ್ಡ್, ಕಣ್ಣಿನ ತಪಾಸಣೆ, ಚರ್ಮ ರೋಗ, ಇಸಿಜಿ, ಬಿಪಿ ಶುಗರ್, ಕಣ್ಣು ಕಿವಿ ಮೂಗು ಮೂತ್ರಪಿಂಡ ಸಮಸ್ಯೆ ಬಗ್ಗೆ ತಪಾಸಣೆ ನಡೆಯಲಿದೆ.

ನಾಳೆ ಶಾಂತಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರು ಹಲವು ಮಾಹಿತಿ ಒಳಗೊಂಡ ಎಸ್‌ಕೆಎಫ್‌ನ ನೂತನ ವೆಬ್‌ಸೈಟ್ ಲೋಕಾರ್ಪಣೆ ಹಾಗೂ ಹತ್ತನೆ ತರಗತಿಯಲ್ಲಿ ರ್‍ಯಾಂಕ್ ಪಡೆದ ಮುನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಗೌರವ ಧನಸಹಾಯ ಮಾಡುವ ಜೊತೆಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವಿಧಾನಸೌಧ ಆವರಣದಲ್ಲಿರುವ ಗಾಂಧೀಜಿ ಪ್ರತಿಮೆ ಬಳಿ ಕಾಂಗ್ರೆಸ್ ಧರಣಿ

‘ಪಠ್ಯ ಹಿಂಪಡೆಯದಿದ್ದರೆ ಹೋರಾಟ’

ಪರಿಷ್ಕೃತ ಪಠ್ಯ ಹಿಂಪಡೆಯಲು ಒತ್ತಾಯಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಶಾಸಕರು, ಮುಖಂಡರು ವಿಧಾನಸೌಧ ಆವರಣದಲ್ಲಿರುವ ಗಾಂಧೀಜಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿರುವ ಪಠ್ಯವನ್ನು ವಾಪಸು ಪಡೆದು, ಬರಗೂರು ರಾಮಚಂದ್ರಪ್ಪ ಸಮಿತಿ ಪರಿಷ್ಕರಿಸಿದ್ದ ಪಠ್ಯವನ್ನೇ ಮುಂದುವರಿಸಬೇಕು. ಇಲ್ಲದಿದ್ದರೆ ಮುಂದಿನ ಹೋರಾಟದ ರೂಪುರೇಷೆಯನ್ನು ಶೀಘ್ರದಲ್ಲಿ ತೀರ್ಮಾನಿಸುತ್ತೇವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

‘ನಾಡಿನ ದಾರ್ಶನಿಕರು, ಮಹಾನ್ ಚೇತನಗಳಿಗೆ ಅಪಮಾನ ಮಾಡಿ, ಇತಿಹಾಸ ತಿರುಚಿರುವ ಪಠ್ಯಪುಸ್ತಕ ಪರಿಷ್ಕರಣೆ ರದ್ದುಗೊಳಿಸಿ ಹಿಂದಿನ ಪಠ್ಯಕ್ರಮ ಮುಂದುವರಿಸಬೇಕು’ ಎಂದು ಸಿದ್ದರಾಮಯ್ಯ ಆಗ್ರಹಿಸಿದರು. ವಿಧಾನಸೌಧ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಕಾಂಗ್ರೆಸ್ ಗುರುವಾರ ಹಮ್ಮಿಕೊಂಡಿದ್ದ ಧರಣಿ ಸಂದರ್ಭದಲ್ಲಿ ಅವರು ಮಾತನಾಡಿದರು.

‘ಚಕ್ರತೀರ್ಥ ಸಮಿತಿಯನ್ನು ವಿಸರ್ಜಿಸಿದರೂ, ಆ ಸಮಿತಿ ಶಿಫಾರಸು ಮಾಡಿದ ಪಠ್ಯವನ್ನು ಇಟ್ಟುಕೊಂಡಿದೆ. ಸಮಿತಿ ವಜಾ ಆಗಿರುವುದರಿಂದ ಆ ಸಮಿತಿ ಪರಿಷ್ಕರಣೆ ಮಾಡಿದ ಪಠ್ಯವನ್ನು ಮಕ್ಕಳಿಗೆ ಬೋಧನೆ ಮಾಡಬಾರದು. ಪರಿಷ್ಕರಣೆಗೊಂಡ ಪಠ್ಯದಲ್ಲಿ ಇತಿಹಾಸ ತಿರುಚುವ ಕೆಲಸ ಆಗಿದೆ. ಶಿಕ್ಷಣ ಸಚಿವ ನಾಗೇಶ್ ಅವರು ಮೊದಲು ಪರಿಷ್ಕರಣೆಗೊಂಡ ಪಠ್ಯವನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ ಎಂದಿದ್ದರು. ಇದಕ್ಕೆ ಪ್ರತಿರೋಧ ವ್ಯಕ್ತವಾದ ಮೇಲೆ ಕೆಲವು ವಿಚಾರಗಳನ್ನು ಪುನರ್ ಪರಿಶೀಲನೆ ಮಾಡುತ್ತೇವೆ ಎಂದಿದ್ದಾರೆ. ಇದರರ್ಥ ತಾವು ಚರಿತ್ರೆ ತಿರುಚಿರುವುದು ಸತ್ಯ, ಆರ್‌ಎಸ್‌ಎಸ್ ನಿರ್ದೇಶನದಂತೆ ಪಠ್ಯ ರಚನೆ ಮಾಡಿದ್ದಾರೆ ಎಂದು ಒಪ್ಪಿಕೊಂಡಂತೆ’ ಎಂದೂ ಹೇಳಿದರು.

‘ಕೇಸರೀಕರಣಗೊಂಡಿರುವ ಪಠ್ಯವನ್ನು ಮಕ್ಕಳಿಗೆ ತಿಳಿಸಬಾರದು. ಆರ್‌ಎಸ್‌ಎಸ್ ಭಾಷಣವನ್ನು ಮಕ್ಕಳಿಗೆ ತಿಳಿಸಿ, ಅವರ ಮನಸ್ಸನ್ನು ಹಾಳು ಮಾಡುವ ಕೆಲಸ ಮಾಡಬಾರದು ಎಂಬುದು ನಮ್ಮ ನಿಲುವು. ನಾವು ಆರ್‌ಎಸ್‌ಎಸ್ ಮತ್ತು ಕೇಸರೀಕರಣವನ್ನು ವಿರೋಧಿಸುತ್ತೇವೆ. ಬಿಜೆಪಿಯವರು ಮಕ್ಕಳ ಮನಸ್ಸನ್ನು ಹಾಳು ಮಾಡುವ, ಮಕ್ಕಳಿಗೆ ವಿಷ ಉಣಿಸುವ ಕೆಲಸದ ವಿರುದ್ಧ ನಮ್ಮ ಹೋರಾಟ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು–ಡಿಕೆಶಿ

ಬೆಂಗಳೂರು: ‘ಪಠ್ಯ ಪುಸ್ತಕ ಪರಿಷ್ಕರಣೆ ನೆಪದಲ್ಲಿ ಸಮಾಜದ ಶಾಂತಿ ಕೆಡಿಸಿ, ದೇಶ, ವಿದೇಶಗಳಲ್ಲಿ ಕರ್ನಾಟಕದ ಗೌರವ ಹರಾಜು ಹಾಕುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಕ್ಷಣ ರಾಜೀನಾಮೆ ನೀಡಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

‘ಬಸವಣ್ಣನವರಿಂದ ಹಿಡಿದು ಅಂಬೇಡ್ಕರ್‌ವರೆಗೂ, ನಾರಾಯಣ ಗುರುಗಳಿಂದ ಶಿವಕುಮಾರ ಸ್ವಾಮೀಜಿ, ಬಾಲಗಂಗಾಧರ ಸ್ವಾಮಿ, ಮುರುಘಾ ಮಠದ ಸ್ವಾಮಿಗಳು, ಭಗತ್ ಸಿಂಗ್‌ವರೆಗೂ ಯಾರೊಬ್ಬರನ್ನೂ ಬಿಡದೆ ಈ ಸರ್ಕಾರ ಅಪಮಾನಿಸಿದೆ. ಹೊಸ ಪುಸ್ತಕವನ್ನು ಕಸದ ಬುಟ್ಟಿಗೆ ಎಸೆದು, ಹಳೆ ಪುಸ್ತಕವನ್ನು ಮುಂದುವರಿಸಬೇಕು’ ಎಂದರು.

‘ಈ ಸಂಬಂಧ ಪ್ರತಿ ಹಳ್ಳಿಯಲ್ಲೂ ಹೋರಾಟ ಮಾಡುತ್ತೇವೆ’ ಎಂದರು.

ವಾಲ್ಮೀಕಿ ಅಪಮಾನ: ಪಠ್ಯವಾಕ್ಯಕ್ಕೆ ಆಕ್ರೋಶ

ಬೆಂಗಳೂರು: ‘ಮಹಾಕವಿ ವಾಲ್ಮೀಕಿಯವರನ್ನು ‘ದಾರಿಗಳ್ಳನಾಗಿದ್ದ’ ಎಂದು ಅಪಮಾನಿಸಿ ಹಾಗೂ ಸುರಪುರ ದೊರೆಗಳು ಮತ್ತು ಆದಿವಾಸಿ ಸಮುದಾಯದ ಪರಂಪರೆಯನ್ನು ಅಪಮೌಲ್ಯಗೊಳಿಸಿರುವ ಪರಿಷ್ಕೃತ ಶಾಲಾ ಪಠ್ಯಗಳನ್ನು ವಾಪಸು ಪಡೆಯಬೇಕು’ ಎಂದು ಅಗ್ರಹಿಸಿ ಮುಖ್ಯಮಂತ್ರಿಗೆ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಪತ್ರ ಬರೆದಿದ್ದಾರೆ.

‘10ನೇ ತರಗತಿಯ ‘ವೀರಲವ’ ಎಂಬ ಪಾಠದ ‘ಪಠ್ಯಾಧಾರ ಟಿಪ್ಪಣಿ’ಯ ಕಡೆಯ ಪರಿಚಯದಲ್ಲಿ ‘ವಾಲ್ಮೀಕಿ– ಒಬ್ಬ ಬ್ರಹ್ಮರ್ಷಿ. ಪ್ರಚೇತಸನ ಮಗನಾದ ಇವರು ಬ್ರಾಹ್ಮಣನಾಗಿದ್ದ ರಿಂದ ಪ್ರಾಚೇತಸನ ಎಂದು ಹೆಸರು ಇದೆ. ‘ಯೌವನಾವಸ್ಥೆಯಲ್ಲಿ ಬೇಡರ ಸಂಗದ ಸೇರಿ ದಾರಿಗಳ್ಳನಾಗಿದ್ದ’ ಎಂದಿದೆ.

ಬೇಡ ಸಮುದಾಯವನ್ನು ‘ಕಳ್ಳರಾಗಿದ್ದರು’ ಎಂಬುದೆ ವಿಂದಿಸಿ ಇದೀ ಬೇಡ, ಇಡೀ ಸಮುದಾಯಕ್ಕೆ ಅಪಮಾನ ಮಾಡಲಾಗಿದೆ’ ಎಂದರು.

‘6ನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕದ ಭಾಗ-2ರಲ್ಲಿ ಸುರಪುರ ಸಂಸ್ಥಾನದ ಕೊಡುಗೆಗಳನ್ನು ಪರಿಚಯಿಸಿದ್ದ ಪಾಠ ಕೈಬಿಡಲಾಗಿದೆ. 10ನೇ ತರಗತಿಯ ಕನ್ನಡ ಪಠ್ಯದಲ್ಲಿ ‘ಸ್ವಾಮಿ ವಿವೇಕಾನಂದ ಅವರ ಚಿಂತನೆಗಳು’ ಎಂಬ ಶೀರ್ಷಿಕೆಯಡಿ ‘ಸಂಸ್ಕೃತಿಯ ರಕ್ತದಲ್ಲಿ ಹರಿಯಬೇಕು. ... ಆದರೆ, ಅದರಿಂದ ಏನು ಪ್ರಯೋಜನ? ಅವರು ಕಾಡುಜನರಂತೆ ಇರುವವರು. ಅವರಲ್ಲಿ ಸಂಸ್ಕೃತಿ ಇಲ್ಲ’ ಎಂದು ಬರೆಯಲಾಗಿದೆ. ಬುಡಕಟ್ಟು ಸಮುದಾಯಗಳಿಗೆ ‘ಸಂಸ್ಕೃತಿ ಇಲ್ಲ’ ಎಂದು ಅಪಮಾನ ಮಾಡಿರುವುದು ಸಮರ್ಥನೀಯವಲ್ಲ’ ಎಂದರು.

‘ಕೋಮುವಾದದ ಪ್ರಯೋಗ ಶಾಲೆಗೆ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಲಭೂತವಾದವು ಪ್ರಜಾಪ್ರಭುತ್ವವನ್ನು ಅಪ್ರಸ್ತುತಗೊಳಿಸಲು ಹೊರಟಿದ್ದು, ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕರ್ನಾಟಕವನ್ನು ಕೋಮುವಾದದ ಪ್ರಯೋಗ ಶಾಲೆ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಆತಂಕ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿ ಸಂಸ್ಥಾಪಕರಾದ ಪ್ರೊ. ಬಿ.ಕೃಷ್ಣಪ್ಪ ಅವರ 84ನೇ ಜನ್ಮದಿನಾಚರಣೆ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ-(ಅಂಬೇಡ್ಕರ್ ವಾದ) ಆಯೋಜಿಸಿದ್ದ ‘ಸಂವಿಧಾನ ಸಂರಕ್ಷಣಾ ಸಂಕಲ್ಪ ದಿನ’ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಮತ್ತು ಬಿ.ಕೃಷ್ಣಪ್ಪ ಅವರ ಭಾವಚಿತ್ರಗಳಿಗೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಪುಷ್ಪ ನಮನ ಸಲ್ಲಿಸಿದರು. ನಟರಾಜ ಹುಳಿಯಾರ್, ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ದಸಂಸ(ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಇದ್ದರು

‘ಭಯೋತ್ಪಾದನೆ, ಕೋಮುವಾದ, ಭ್ರಷ್ಟಾಚಾರ, ಅಪರಾಧೀಕರಣ, ಸಾಂಸ್ಕೃತಿಕ ದಿವಾಳಿತನ ಎಂಬ ಸವಾಲುಗಳು ದೇಶವನ್ನು ಕಾಡುತ್ತಿವೆ. ಈ ಎಲ್ಲಾ ಸವಾಲುಗಳನ್ನು ಎದುರಿಸಲು ಇರುವ ದಾರಿ ಎಂದರೆ ಅದು ಸಂವಿಧಾನ ಮಾತ್ರ. ಸಂವಿಧಾನವನ್ನು ಜಾರಿಗೆ ತರುವವರಲ್ಲಿ ದೋಷಗಳಿವೆ’ ಎಂದರು.

‘ಸಂವಿಧಾನವನ್ನು ಉಳಿಸಲು ಇಂತಹ ಸಮಾವೇಶಗಳು ಹೆಚ್ಚಾಗಿ ನಡೆಯಬೇಕು. ನಮ್ಮ ಹೋರಾಟಗಳು ಅಷ್ಟಕ್ಕೇ ಸೀಮಿತ ಆಗಬಾರದು. ಮೀಸಲು ಕ್ಷೇತ್ರಗಳಿಂದ ಆಯ್ಕೆಯಾಗಿರುವ ಸಂಸದರು, ಶಾಸಕರು, ದಲಿತರು ಮತ್ತು ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಲು ಒಟ್ಟಾಗುತ್ತಿಲ್ಲ. ಅಂಥವರು ಮೀಸಲು ಕ್ಷೇತ್ರಗಳಿಂದ ಗೆದ್ದು ಪ್ರಯೋಜನವಿಲ್ಲ. ಅವರ ಮನೆಗಳ ಮುಂದೆ ಹೋರಾಟಗಳನ್ನು ನಡೆಸಬೇಕು’ ಎಂದು ಹೇಳಿದರು.

‘ಪಠ್ಯದಲ್ಲಿ ಸಂವಿಧಾನದ ಸಾರ ಸೇರಿಸಬೇಕು’: ‘ಪಠ್ಯಪುಸ್ತಕದಲ್ಲಿ ಜಾತಿಯ ವಿಷಪ್ರಾಶನ ಮಾಡುವ ಬದಲು ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿ ತನಕ ಸಂವಿಧಾನದ ಎಲ್ಲಾ ಪರಿಚ್ಛೇದಗಳ ಸಾರಾಂಶ ಸೇರಿಸುವುದು ಸೂಕ್ತ’ ಎಂದು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ನಟರಾಜ್ ಹುಳಿಯಾರ್ ಹೇಳಿದರು.

3 ಜಿಲ್ಲೆಗಳಲ್ಲಿ 5 ದಿನ ‘ಯೆಲ್ಲೊ ಅಲರ್ಟ್’

ಕಾರವಾರ: ಮುಂಗಾರು ಮಾರುತಗಳು ರಾಜ್ಯದ ಕರಾವಳಿಗೆ ಸಮೀಪಿಸುತ್ತಿದ್ದು, ಜೂನ್ 10ರಿಂದ ಐದು ದಿನ ಮೂರೂ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಈ ಅವಧಿಯಲ್ಲಿ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡದ ವಿವಿಧೆಡೆ ಗುಡುಗು ಸಹಿತ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಆನ್‌ಲೈನ್ ಆಟದಲ್ಲಿ ಜಗಳ: ಬಾಲಕ ಕೊಲೆ

ಪ್ರಜಾವಾಣಿ ವಾರ್ತೆ

ಶಾಮರಾಯ ಪರೀಟ

ಕಲಬುರಗಿ: ಅಫಜಲಪುರ ತಾಲ್ಲೂಕಿನ ಮಾಶ್ಯಾಳ ಗ್ರಾಮದಲ್ಲಿ ಬುಧವಾರ ರಾತ್ರಿ ಮೊಬೈಲ್‌ನಲ್ಲಿ ಆನ್‌ಲೈನ್ ‘ಲುಡೊ’ ಆಡುವಾಗ ಜಗಳ ತಾರಕಕ್ಕೇರಿ ಯುವಕನೊಬ್ಬ ಬಾಲಕನನ್ನು ಚೂರಿಯಿಂದ ಇರಿದು ಕೊಲೆ ಮಾಡಿದ ಘಟನೆ ನಡೆದಿದೆ.

ಶಾಮರಾಯ ಪರೀಟ (16) ಕೊಲೆಯಾದ ಬಾಲಕ. ಸಚಿನ್ ಶಿರಸಾವಳಗಿ (22) ಕೊಲೆ ಆರೋಪಿಯಾಗಿದ್ದು, ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಲುಡೊ ಆಡುವಾಗ ಶಾಮರಾಯ ಮತ್ತು ಸಚಿನ್ ನಡುವೆ ಜಗಳವಾಗಿದೆ. ಶಾಮರಾಯನ ಸಹೋದರ ಇಬ್ಬರನ್ನೂ ಸಮಾಧಾನಪಡಿಸಿ, ಮನೆಗೆ ಕಳುಹಿಸಿದರು. ಆದರೆ, ಇಷ್ಟಕ್ಕೆ ಸಮಾಧಾನಗೊಳ್ಳದ ಸಚಿನ್ ಚಾಕು ತಂದು ಶಾಮರಾಯನ ಎದೆಗೆ ಇರಿದು ಕೊಲೆ ಮಾಡಿದ. ಶಾಮರಾಯನ ಸಹೋದರ ಧರ್ಮರಾಜ ದೂರು ನೀಡಿದ್ದಾರೆ’ ಎಂದು ಅಫಜಲಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಆದೇಶ ಇಲ್ಲದೇ ಪಠ್ಯ ಪರಿಷ್ಕರಣೆ

ಒಂದನೇ ಪುಟದಿಂದ

ಸರ್ಕಾರದ ನಿಯಮಗಳ ಅನುಸಾರ, ವರದಿ ಸಲ್ಲಿಸಿದ ಬಳಿಕ ಪರಿಷ್ಕರಣೆ ಅಗತ್ಯವಿದ್ದಲ್ಲಿ ವಿಷಯ ತಜ್ಞರ ಸಮಿತಿ ರಚಿಸಬೇಕಾಗಿತ್ತು ಅಥವಾ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿಗೆ ಪರಿಷ್ಕರಣೆ ಮಾಡುವ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಬೇಕಿತ್ತು. ಸದರಿ ಆದೇಶದಲ್ಲಿ ನಿಯಮ ಮತ್ತು ಷರತ್ತುಗಳನ್ನು ನೀಡಬೇಕಿತ್ತು. ಆ ಕೆಲಸ ಆಗಿಯೇ ಇಲ್ಲ ಎಂದು ಇಲಾಖೆ ಮೂಲಗಳು ಹೇಳಿವೆ.

ಮೌಖಿಕ ಆದೇಶವೇ ದಾರಿ: ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ ಸಚಿವ ಸಂಪುಟ ರಚನೆಯಾದಾಗ ಬಿ.ಸಿ. ನಾಗೇಶ್ ಶಿಕ್ಷಣ ಸಚಿವರಾದರು. ‘2022ರ ಜನವರಿ 27ರಂದು ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಯಲ್ಲಿ 1ರಿಂದ 10ನೇ ತರಗತಿ ಕನ್ನಡ ಭಾಷೆ ಮತ್ತು 6 ರಿಂದ 10 ನೇ ತರಗತಿಯ ಸಮಾಜ ವಿಜ್ಞಾನ ವಿಷಯದ ಪಠ್ಯಪುಸ್ತಕಗಳನ್ನು ಸಮಿತಿ ಅಧ್ಯಕ್ಷರಾದ ರೋಹಿತ್ ಚಕ್ರತೀರ್ಥ ಹಾಗೂ ಪರಿಶೀಲನಾ ಸಮಿತಿಯವರು (ಪರಿಷ್ಕರಣಾ ಸಮಿತಿಯಲ್ಲ) ಪರಿಷ್ಕರಿಸಿರುತ್ತಾರೆ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

‘ಸಚಿವರು ಸಭೆಯಲ್ಲಿ ಸೂಚಿಸಿದಾಗ, ಮೌಖಿಕ ಸೂಚನೆ ಮೇರೆಗೆ ಪರಿಷ್ಕರಣೆ ಮಾಡಲಾಗದು. ಅದಕ್ಕೆ ಪ್ರತ್ಯೇಕ ಆದೇಶ ಹೊರಡಿಸಬೇಕು ಎಂದು ಅಧಿಕಾರಿಗಳು ಸಲಹೆ ನೀಡಿದರು. ಆಗ, ಘಟನೋತ್ತರ ಅನುಮತಿ ಕೊಡಿಸುವ ಭರವಸೆ ಕೊಡಲಾಗಿತ್ತು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಸಚಿವ ನಾಗೇಶ್ ಹಾಗೂ ಹಿಂದಿನ ಸಚಿವ ಸುರೇಶ್ ಕುಮಾರ್ ಅವರಿಗೆ ಕರೆ ಮಾಡಿದರೆ ಅವರು ಕರೆ ಸ್ವೀಕರಿಸಲಿಲ್ಲ.

‘ಪುಸ್ತಕ ವಿತರಿಸುವ ನೈತಿಕತೆಯೇ ಸರ್ಕಾರಕ್ಕೆ ಇಲ್ಲ’

‘ಪರಿಷ್ಕೃತ ಪಠ್ಯಕ್ಕೆ ಆಕ್ಷೇಪಣೆ ಬಂದಲ್ಲಿ ಉತ್ತರ ನೀಡುವ ಹೊಣೆ ರೋಹಿತ್ ಚಕ್ರತೀರ್ಥ ಅವರದ್ದು ಎಂದು ಸರ್ಕಾರದ ಆದೇಶವೇ ಹೇಳಿರುವಾಗ ಶಾಲಾ ಹಂತದಲ್ಲಿ ವಿತರಿಸುವ ನೈತಿಕತೆಯೇ ಸರ್ಕಾರಕ್ಕೆ ಇಲ್ಲ’ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರು ಪ್ರತಿಪಾದಿಸಿದ್ದಾರೆ.

‘ಪರಿಷ್ಕೃತ ಪಠ್ಯಪುಸ್ತಕಗಳನ್ನು ಮುಖ್ಯಮಂತ್ರಿ ಹಾಗೂ ಸಚಿವರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಪುಸ್ತಕಗಳಲ್ಲಿನ ಪರಿಷ್ಕರಿಸಲಾದ ಅಂಶಗಳ ಬಗ್ಗೆ ಸರ್ಕಾರ ಜವಾಬ್ದಾರಿಯನ್ನೇ ತೆಗೆದುಕೊಳ್ಳದೇ ಇರುವುದು ಘಟನೋತ್ತರ ಆದೇಶದಲ್ಲಿ ಸ್ಪಷ್ಟವಾಗಿದೆ. ಈ ಹೊಣೆಯನ್ನು ಮುಖ್ಯಮಂತ್ರಿಯವರೇ ಹೊರಬೇಕು. ಆದೇಶದಲ್ಲಿ ಹೇಳಿರುವುದು ಸರಿಯಿಲ್ಲ ಎಂದಾದರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಲಿ’ ಎಂದು ಅವರು ಆಗ್ರಹಿಸಿದ್ದಾರೆ.

ಇದೇ 20, 21 ರಾಜ್ಯಕ್ಕೆ ಮೋದಿ ಭೇಟಿ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಇದೇ 20 ಮತ್ತು 21 ರಂದು ರಾಜ್ಯದಲ್ಲಿ 2 ದಿನಗಳ ಪ್ರವಾಸ ಹಮ್ಮಿಕೊಂಡಿದ್ದು, ಈ ಸಂಬಂಧ ತಯಾರಿ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳ ಜತೆ ವಿಡಿಯೋ ಸಂವಾದ ನಡೆಸಿದರು.

ಮೈಸೂರಿನಲ್ಲಿ ವಿಶ್ವ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಭಾಗವಹಿಸಲಿದ್ದಾರೆ.

ಪ್ರಜಾವಾಣಿ ಬೇಕಾಗಿದ್ದಾರೆ

ಉಪಸಂಪಾದಕ/ವರದಿಗಾರ

ಪ್ರಜಾವಾಣಿ ಬಳಗವನ್ನು ಸೇರಬೇಕೆಂಬ ನಿಮ್ಮ ಕನಸು ನನಸಾಗಲು ಇದೊಂದು ಸದವಕಾಶ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಪತ್ರಿಕೋದ್ಯಮ ಮತ್ತು ಬರವಣಿಗೆಯಲ್ಲಿ ಆಸಕ್ತಿ ಇರಬೇಕು. ಪ್ರಚಲಿತ ವಿಷಯ, ಸಾಹಿತ್ಯ, ಕಲೆ, ಸಂಸ್ಕೃತಿ, ವಿಜ್ಞಾನ, ಅರ್ಥಶಾಸ್ತ್ರ, ಕಾನೂನು, ಇತಿಹಾಸ ಮತ್ತು ರಾಜಕೀಯ ವಿಷಯಗಳಲ್ಲಿ ಹೆಚ್ಚಿನ ಜ್ಞಾನ ಇರಬೇಕು. ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಆಸಕ್ತಿ ಇರಬೇಕು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವ ಕೌಶಲವನ್ನು ಹೊಂದಿರಬೇಕು. ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. 30 ವರ್ಷ ಮೀರದ, ಮಾಧ್ಯಮ ಕ್ಷೇತ್ರದಲ್ಲಿ ಎರಡರಿಂದ ಐದು ವರ್ಷ ಅನುಭವ ಇರುವವರು ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸ, ಜನ್ಮ ದಿನಾಂಕ, ವಿದ್ಯಾರ್ಹತೆ ಮತ್ತು ಅನುಭವದ ವಿವರಗಳೊಂದಿಗೆ ಕನ್ನಡದಲ್ಲಿ ಬರೆದ ಅರ್ಜಿಯನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಇ–ಮೇಲ್ ಕೂಡ ಮಾಡಬಹುದು. ಅರ್ಜಿ ಸಲ್ಲಿಸಲು ಜೂನ್ 17 ಕೊನೆಯ ದಿನ. ಲಕೋಟೆ ಮೇಲೆ ಹುದ್ದೆಯ ಹೆಸರು ಬರೆಯಬೇಕು.

ವಿ.ಸೂ: ದೇಶದ ಯಾವುದೇ ಸ್ಥಳದಲ್ಲಿ ಕೆಲಸ ಮಾಡಲು ಸಿದ್ಧ ಇರುವವರು ಮಾತ್ರ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬೇಕು.

ಇ–ಮೇಲ್ ವಿಳಾಸ: **careers@prajavani.co.in**

ಅಂಚೆ ವಿಳಾಸ: ಮ್ಯಾನೇಜರ್ (ನೇಮಕಾತಿ)
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ನಂ 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು - 560001

Azadi Ka Amrit Mahotsav | Directorate General of Training

Government of India
Directorate General of Training
Ministry of Skill Development & Entrepreneurship

ADMISSION NOTICE -2022-23

Admission to course under **Craft Instructor Training Scheme (CITS)** at National Skill Training Institutes (NSTIs) and Institute for Training of Trainers (IT oTs) for the academic session 2022-23 will be made through **All India Common Entrance Test (AICET)** which is sheduled to be held on **17-07-2022.** Applications are invited for Computer Based Test (online) on **www.nimionlineadmission.in** from the eligible candidates w.e.f. from **06-06-2022 to 25-06-2022** to appear in the entrance test at various centers across the country. For more details: **www.nimionlineadmission.in**

GOVERNMENT OF KARNATAKA
ZILLA PANCHAYATH CHIKMAGALUR
THE EXECUTIVE ENGINEER, RURAL DRINKING WATER SUPPLY & SANITATION DIVISION, CHIKMAGALUR
Phone No. : 08262 - 295795, Email: eerwsckm@gmail.com

CORRIGENDUM

No/EE/RDWS&S/2/E-Tender/2022-23 **Dated:30-05-2022**

Vide this office Tender notification No. No/EE/RDWS&S/2/E-Tender/ 2022-23/178/Dated: 30-05-2022 for the work **“Drinking Water Supply Facilities to 172 Rural Habitations of Tarikere Taluk and Urban Population of Ajjampura Town in Chikkamagalur District, Karnataka through Design, Build, Operate and Transfer (DBOT) mode under Jal Jeevan Mission RWSSD/2022-23/WS/WORK_INDENT40888”** The period of execution **“30 months for execution and 60 months of O & M after successful completion of Scheme” to be read as “ 11 months for execution and 60 months of O & M after successful completion of Scheme”.** Other conditions remains same. More details can be had from the office of the under signed and also through our webiste www.eproc.karnataka.gov.in by clicking the List of Tenders which will be link all department works list.

Sd/- Executive Engineer, RDWS&S, Divn, Chikmagalur

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.
ದೂರವಾಣಿ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2022–23/ 1356 ದಿ: 4.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಜಿಲ್ಲೆಯ 01 ಟೆಂಡರ ಕಾಮಗಾರಿಗಾಗಿ ಪ್ರಧಾನ ಕಾಮಗಾರಿ ಅಣೆಕಟ್ಟು ಪಿಕಪ್ ಯೋಜನೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 88.75 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 13–06–2022 ರಿಂದ ದಿನಾಂಕ: 22–06–2022 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 24–06–2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 27–06–2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು “ಇ–ಪ್ರಕ್ಯೂರ್‌ಮೆಂಟ್” ವೆಬ್‌ಸೈಟ್ http://eproc.karnataka.gov.in/e-portal/index.seam ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ವಾ.ಸಾ.ಇ./ಕೊಪ್ಪಳ/140/2022–23/ದೇಶಪಾಂಡೆ ಪಬ್ಲಿಸಿಟಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ

Ref. VTU/BGM/SAP/CW1/T-604/2022-23/1384 dtd.08-06-2022

ಅಲ್ಪಾವಧಿ ಟೆಂಡರ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು:Tender for Establishment of Center for Logistics & Innovation of Future & Factories (CLIFF) under Kalyana Karnataka Regional Development Board (KKRDB) funds at VTU Regional Centre, Kalaburgi. ಟೆಂಡರಿಗಿಟ್ಟ ಮೊತ್ತ: ರೂ.9,89,00,000/– ಮುಂಗಡ ಠೇವಣಿ:ರೂ.9,89,000/–, ಪ್ರಿಬಿಡ್ ಮಿಟಿಂಗ ದಿನಾಂಕ.13–06–20 22 ರ 4.00 ಗಂಟೆಗೆ, ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:18–06–2022 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ: 20–06–2022 ರ 4.00 ಘಂಟೆಗೆ. ಹೆಚ್ಚಿನ ವಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.

DIPR/BGM/RO-NO-324/MCA/2022-23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್
ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ
ಉಪನಿರ್ದೇಶಕರ ಕಛೇರಿ, ಪೃಥ್ವಿ ಮ್ಯಾನ್ಸನ್, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ. ದೂರವಾಣಿ: 08182–249241 ಇ–ಮೇಲ್: dswsmg@gmail.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಂ: ಉನಿ/ಸಕಇಶಿ/ವಿಘಯೋಅ/ವಿವ–34/2022–23 ದಿನಾಂಕ: 09.06.2022

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ಶಿವಮೊಗ್ಗ ಜಿಲ್ಲೆಯ ವಸತಿ ಶಾಲೆಗಳಿಗೆ, ಒಂದು ಮಾದರಿ ವಸತಿ ಶಾಲೆ/ಕಾಲೇಜಿಗೆ ಒದಗಿಸಬೇಕಾದ ವಿವಿಧ ಮೂಲಭೂತ ಸಾಮಗ್ರಿಗಳ ಪೈಕಿ ಅತಿ ಅವಶ್ಯವಿರುವ 17 ಮೂಲಭೂತ ಸಾಮಗ್ರಿಗಳನ್ನು ಖರೀದಿಸಲು ಆಸಕ್ತಿಯುಳ್ಳ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ದಿನಾಂಕ: 23–06–2022 ರ ಸಂಜೆ: 5.30 ಗಂಟೆಯೊಳಗಾಗಿ ಟೆಂಡರ್ ಅರ್ಜಿಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಪೃಥ್ವಿ ಮ್ಯಾನ್ಸನ್, ವಿನೋಬನಗರ, ಶಿವಮೊಗ್ಗ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ. ಕಛೇರಿ ದೂರವಾಣಿ ಸಂಖ್ಯೆ: 08182–249241.

ಸಹಿ/–
ಉಪನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ ಜಿಲ್ಲೆ

ವಾ.ಸಾ.ಸಂ.ಇ./ಶಿ/ನಂ.50–06/ಝೇಂಕಾರ್/2022–23

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ –577006

ಸಂಖ್ಯೆ: ಡಿ.ಎಸ್.ಸಿ.ಎಲ್/ಕಾ.ಅ–2/ಸಿ.ಆರ್–04/2018–19/438 ದಿನಾಂಕ: 08–06–2022

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ರ (ತಿದ್ದುಪಡಿ) ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ಗಳ ಅನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ: 08192–222383 ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಹಾಯಕ ದೂರವಾಣಿ. ಸಂಖ್ಯೆ: 080–23010900, 080–23010901, 080–38013000 ರಿಂದ ಮಾಹಿತಿ ಪಡೆಯಬಹುದು. (ರೂ. ಲಕ್ಷಗಳಲ್ಲಿ)

ಇ–ಪ್ರೊಕ್ಯೂರ್‌ಮೆಂಟ್ ಉಲ್ಲೇಖ:–(1) **UDD/2022-23/OW/WORK_INDENT1643 Call-2** ಟೆಂಡರ್‌ಗಿಟ್ಟ ಮೊತ್ತ:– 116.30 ಮುಂಗಡ ಠೇವಣಿ ಮೊತ್ತ:– 2.00 ಟೆಂಡರ್ ನಮೂನೆ:– KW-4 ಕಾಮಗಾರಿ ಪೂರ್ಣ ಗೊಳಿಸಬೇಕಾದ ಅವಧಿ:– 04 ತಿಂಗಳು (1) **DSCL/CR-68/2021-22/Call-3** ಟೆಂಡರ್‌ಗಿಟ್ಟ ಮೊತ್ತ:– 50.00 ಮುಂಗಡ ಠೇವಣಿ ಮೊತ್ತ:– 1.00 ಟೆಂಡರ್ ನಮೂನೆ EOI ಕಾಮಗಾರಿ ಪೂರ್ಣ ಗೊಳಿಸಬೇಕಾದ ಅವಧಿ:–06 ತಿಂಗಳು ಸೂಚನೆ : ಈ ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ ಹಾಗು ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 08–06–2022 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. (1) ಪ್ರಿ ಬಿಡ್ ಮೀಟಿಂಗ್ ದಿನಾಂಕ: 14–06–2022 ಸಮಯ : 12:00 (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ॥ & ವೇಳೆ: 16–06–2022 ಸಮಯ : 17:30 (3) ಟೆಂಡರ್ ಸಲ್ಲಿಸುವ ಅಂತಿಮ ದಿ : 23–06–2022 ಸಮಯ : 17.00 (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 24–06–2022 ಸಮಯ : 17:15 (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 27–06–2022 ಸಮಯ : 11:30

ಸಹಿ/– ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್. ದಾವಣಗೆರೆ

ಸಹಿ/– ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕಾರ್ಯನಿರ್ವಹಣಾಧಿಕಾರಿಗಳು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್,

ವಾಸಾಇ/ದಾವಣಗೆರೆ/200/ಎಂಸಿಎ/2022–23

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105
ಪೋ.ನಂ 08472–278634 Email:eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2022–23/479 ದಿನಾಂಕ : 08–06–2022

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : ಆಳಂದ ತಾಲೂಕಿನ–01 (Indent No 27849 call-2), 2) ಟೆಂಡರಿಗಿಟ್ಟ ಮೊತ್ತ : **ಕನಿಷ್ಠ : 56,48,857/–, ಗರಿಷ್ಠ 56,48,857/–,** 3) ಲೆಕ್ಕ ಶಿರ್ಷಿಕೆ : JJM 2020-21, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **10–06–2022 ರಿಂದ 22–06–2022,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **22–06–2022 ಸಾಯಂಕಾಲ 4:00 ಗಂಟೆವರೆಗೆ,** 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: **23–06–2022 ಸಾಯಂಕಾಲ 4.01 ಗಂಟೆಗೆವೆರೆಗೆ,** 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ: **27–06–2022 ಬೆ. 11.00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/246/ಎಂ.ಸಿ.&ಎ/2022–23

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2022–23 ದಿನಾಂಕ : 08–06–2022

ಅಲ್ಪಾವಧಿ ಇ–ಟೆಂಡರ ಅಧಿಸೂಚನೆ

ಉಲ್ಲೇಖ : ಜಾಹೀರಾತು ನಂ : 1156 ದಿನಾಂಕ : 17–03–2022
ಜಾಹೀರಾತು ನಂ : 1227 ದಿನಾಂಕ : 31–03–2022
ಜಾಹೀರಾತು ನಂ : 65 ದಿನಾಂಕ : 12–04–2022
ಜಾಹೀರಾತು ನಂ : 872 ದಿನಾಂಕ : 12–01–2022

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸನ್ 2021–22, 2022–23ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ, ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD/HDMC/ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
(1) ಇಂಡೆಂಟ್ ನಂ– 131691 ರೂ. **2.65** ಲಕ್ಷ (2) ಇಂಡೆಂಟ್ ನಂ– 132199 ರೂ. **21.20** ಲಕ್ಷ

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
(3) ಇಂಡೆಂಟ್ ನಂ– 132201 ರೂ. **12.35** ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.
(4) ಇಂಡೆಂಟ್ ನಂ– 132198 ರೂ. **36.40** ಲಕ್ಷ (5) ಇಂಡೆಂಟ್ ನಂ– 132615 ರೂ. **49.00** ಲಕ್ಷ (6) ಇಂಡೆಂಟ್ ನಂ– 132639 ರೂ. **32.00** ಲಕ್ಷ (7) ಇಂಡೆಂಟ್ ನಂ– 132636 ರೂ. **10.00** ಲಕ್ಷ

ಮರು ಕರೆ ಕಾಮಗಾರಿಗಳು
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.
(8) ಇಂಡೆಂಟ್ ನಂ– 120834 ರೂ. **85.00** ಲಕ್ಷ (4ನೇ ಕರೆ) (9) ಇಂಡೆಂಟ್ ನಂ– 122344 ರೂ. **65.00** ಲಕ್ಷ (2ನೇ ಕರೆ) (10) ಇಂಡೆಂಟ್ ನಂ– 130307 ರೂ. **85.00** ಲಕ್ಷ (2ನೇ ಕರೆ) (11) ಇಂಡೆಂಟ್ ನಂ– 121451 ರೂ. **70.00** ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ : **0836:2213834** ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ **http:/www.eproc.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ : **10–06–2022** ಪಡೆಯಬಹುದಾಗಿದೆ.

ಕ್ರಮ ಸಂಖ್ಯೆ 01, 05 ರಿಂದ 11ರ ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17–06–2022** ರಂದು ಸಾಯಂಕಾಲ 4.00 ಘಂಟೆಯವರೆಗೆ
ಕ್ರಮ ಸಂಖ್ಯೆ 01, 05 ರಿಂದ 11 ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **18–06–2022** ಸಾಯಂಕಾಲ 4.30 ಘಂಟೆಯ ನಂತರ.
ಕ್ರಮ ಸಂಖ್ಯೆ 8 ರಿಂದ 11 ಆರ್ಥಿಕ ಬಿಡ್ ತೆರೆಯುವ ದಿನಾಂಕ : **22–06–2022** ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.
ಕ್ರಮ ಸಂಖ್ಯೆ 02 ರಿಂದ 04 ರ ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **24–06–2022** ರಂದು ಸಾಯಂಕಾಲ 4.00 ಘಂಟೆಯವರೆಗೆ
ಕ್ರಮ ಸಂಖ್ಯೆ 02 ರಿಂದ 04 ರ ರ ಕಾಮಗಾರಿಗಳ ಬಿಡ್ ತೆರೆಯುವ ದಿನಾಂಕ : **27–06–2022** ಸಾಯಂಕಾಲ 4.30 ಘಂಟೆಯ ನಂತರ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ

ವಾಸಾಸಂಇ/ಧಾ/ಎಂಸಿಎ/215/2022–23

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ - 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ
ದೂ.: (08537) 275041, ಫ್ಯಾಕ್ಸ್: (08537) 275054
CIN No. U85110KA1947SGC001321

ಸಂಖ್ಯೆ: ಹಚಿಗ/ಮಾಸ/ಇಎಸ್‌ಟಿ/ನೇನೇಪ್ರತಿದ್ದುಪಡಿ/10(ಅ)/2022–23 ದಿನಾಂಕ: 09.06.2022

ತಿದ್ದುಪಡಿ ಉದ್ಯೋಗ ಪ್ರಕಟಣೆ

ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಖಾಲಿ ಇದ್ದ ಮ್ಯಾನೇಜ್‌ಮೆಂಟ್ ಟ್ರೇನಿ, ಜಿ–8 ದರ್ಜೆ ಹಾಗೂ ಜಿ–5 ದರ್ಜೆಯಲ್ಲಿನ ವಿವಿಧ ಹುದ್ದೆಗಳ ನೇಮಕಾತಿಗಾಗಿ ದಿನಾಂಕ: 02.06.2022 & 03.06.2022 ಗಳಂದು ಪ್ರಜಾವಾಣಿ ಹಾಗೂ ವಿಜಯವಾಣಿ ಕನ್ನಡ ದಿನಪತ್ರಿಕೆಗಳಲ್ಲಿ ಹಾಗೂ 04.06.2022ರಂದು ಟೈಮ್ಸ್ ಆಫ್ ಇಂಡಿಯಾ & ದಿ ಹಿಂದು ಆಂಗ್ಲ ದಿನಪತ್ರಿಕೆಗಳಲ್ಲಿ ಸ್ಥಳೀಯ /ಸ್ಥಳಿಯೇತರ ವೃಂದದ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ, ಹೆಚ್ಚಿನ ವಿವರಗಳಿಗೆ ಕಂಪನಿಯ ವೆಬ್‌ಸೈಟ್ ನಲ್ಲಿ ವಿವರ ಪಡೆಯಲು ತಿಳಿಸಲಾಗಿತ್ತು.

ಈ ಮೇಲೆ ಅಧಿಸೂಚನೆಯಲ್ಲಿ ತಿಳಿಸಿದ ನೇಮಕಾತಿಯ ಹುದ್ದೆಗಳನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ನೇಮಕಾತಿಯ ಬಗ್ಗೆ ಮುಂದಿನ ಪ್ರಕಟಣೆಯಲ್ಲಿ ಹಾಗೂ ಕಂಪನಿಯ ವೆಬ್‌ಸೈಟ್‌ನಲ್ಲಿ **https://huttigold.karnataka.gov.in** ಮಾಹಿತಿ ತಿಳಿಸಲಾಗುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 06/2022–23 ದಿನಾಂಕ : 07.06.2022

ಅಲ್ಪಾವಧಿ ಟೆಂಡರ್ ಪ್ರಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಲೋಕೋಪಯೋಗಿ ಇಲಾಖೆ ವಿಭಾಗಕ್ಕೆ ಒಳಪಡುವ ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಇ–ಪ್ರೋಕ್ ಹಾಗೂ ಮ್ಯಾನುವಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document- KW-1, 2, 3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.1.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 450.00 ಲಕ್ಷಗಳು ಆಗಿರುತ್ತವೆ.

1.ಕ್ರಮ ಸಂಖ್ಯೆ 1 ರಿಂದ 6 ರವರೆಗಿನ ಕಾಮಗಾರಿಗಳು ಮ್ಯಾನುವಲ್ ಆಗಿದ್ದು ಅರ್ಹ ಗುತ್ತಿಗೆದಾರರು ದಿನಾಂಕ 16.06.2022 ಹಾಗೂ 17.06.2022 ನಿಗದಿತ ಶುಲ್ಕ ಪಾವತಿಸಿ ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಬೇಕು. ದಿನಾಂಕ:20.06.2022 ರಂದು ಖಾಲಿ ಟೆಂಡರ್ ಫಾರಂ ಪಡೆದು ದಿನಾಂಕ 21.06.2022 ರಂದು ಸಂಜೆ 4.00 ರವರೆಗೆ ಭರ್ತಿ ಮಾಡಿದ ಟೆಂಡರ್ ಗಳನ್ನು ಸಲ್ಲಿಸಬೇಕು. ಸದರಿ ಟೆಂಡರ್‌ಗಳನ್ನು ಸಾಧ್ಯವಾದಲ್ಲಿ ದಿನಾಂಕ:22.06.2022 ರಂದು ಸಂಜೆ 4.15 ಗಂಟೆಯ ನಂತರ ತೆರೆಯಲಾಗುವುದು.

2. ಕ್ರಮ ಸಂಖ್ಯೆ 7 ರಿಂದ 26 ರ ವರೆಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:19.07.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ:20.07.2022 ರಂದು ಸಂಜೆ 4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ವಿಧಾನ ಪರಿಷತ್: ದಕ್ಷಿಣ ಪದವೀಧರರ ಕ್ಷೇತ್ರಕ್ಕಾಗಿ ಚತುಷ್ಕೋನ ಹೋರಾಟ

3 ಪಕ್ಷಗಳಿಗೆ ‘ಚಳವಳಿ’ಗಳ ಸವಾಲು

• ಎಂ. ಮಹೇಶ

ಮೈಸೂರು: ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳನ್ನು ಒಳಗೊಂಡ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯು ‘ಹೊಸ ಪ್ರಯೋಗ’ದ ಕಾರಣದಿಂದಾಗಿ ಗಮನ ಸೆಳೆದಿದೆ. ಮೂರು ಪ್ರಮುಖ ಪಕ್ಷಗಳ ಎದುರು ರೈತ–ದಲಿತ ಚಳವಳಿಗಳ ಮುಖಂಡರು ಸ್ವತಂತ್ರ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಫಸಲು ತೆಗೆಯಲು ಮುಂದಾಗಿದ್ದಾರೆ.

ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ವಿರುದ್ಧ ರಾಜ್ಯ ರೈತ ಸಂಘ, ಸ್ವರಾಜ್ ಇಂಡಿಯಾ ಸೇರಿದಂತೆ ವಿವಿಧ 18 ಪ್ರಗತಿಪರ ಸಂಘಟನೆಗಳು ಒಗ್ಗೂಡಿ ಅಭ್ಯರ್ಥಿಯನ್ನು ಹಾಕಿವೆ. ಪ್ರತಿಯಾಗಿ ಪ್ರಗತಿಪರ ಸಂಘಟನೆಗಳು ಒಕ್ಕೂಟದ ರೀತಿ ಕೈಜೋಡಿಸಿವೆ. ಅಭ್ಯರ್ಥಿಗಳು ಪಕ್ಷದ ವರ್ಚಸ್ಸಿನ ಜೊತೆಗೆ ವೈಯಕ್ತಿಕ ವರ್ಚಸ್ಸನ್ನೂ ಪಣಕ್ಕಿಟ್ಟಿದ್ದಾರೆ.

ಜೆಡಿಎಸ್‌ನಿಂದ ಎಚ್.ಕೆ.ರಾಮು, ಬಿಜೆಪಿಯಿಂದ ಮೈ.ವಿ. ರವಿಶಂಕರ್, ಕಾಂಗ್ರೆಸ್‌ನಿಂದ ಮಧು ಜಿ.ಮಾದೇಗೌಡ, ಚಳವಳಿಗಳ ಬೆಂಬಲಿತ ಅಭ್ಯರ್ಥಿ ಪ್ರಸನ್ನ ಎನ್. ಗೌಡ ಸೇರಿದಂತೆ 19 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 13ರಂದು ನಡೆಯಲಿರುವ ಚುನಾವಣೆಯಲ್ಲಿ ಮೇಲ್ನೋಟಕ್ಕೆ ಚತುಷ್ಕೋನ ಹಣಾಹಣಿ ಕಂಡುಬಂದಿದೆ.

‘ಭದ್ರ ನೆಲೆಯ ಕ್ಷೇತ್ರ’ ಉಳಿಸಿಕೊಳ್ಳಲು ಜೆಡಿಎಸ್ ಶ್ರಮಿಸುತ್ತಿದ್ದರೆ, ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ರಣತಂತ್ರ ರೂಪಿಸಿದೆ. ಖಾತೆ ತೆರೆಯಲು ಕಾಂಗ್ರೆಸ್ ಎಂದಿನಂತೆ ಹರಸಾಹಸಪಡುತ್ತಿದೆ. ರೈತ–ದಲಿತ–ಪ್ರಗತಿಪರ ಚಳವಳಿಗಳ ನಾಯಕರ ಬೆಂಬಲದಿಂದ ಪ್ರಸನ್ನ ಪೈಪೋಟಿ ಕೊಡುತ್ತಿದ್ದಾರೆ.

ಎಲ್ಲ ವ್ಯವಸ್ಥಿತ: ಕಳೆದ ಬಾರಿ ಎರಡನೇ ಸ್ಥಾನ ಗಳಿಸಿದ್ದ ರವಿಶಂಕರ್ ಪರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಘಟಾನುಘಟಿ ನಾಯಕರು ಪ್ರಚಾರ ನಡೆಸಿದ್ದಾರೆ. ತಳಮಟ್ಟದಿಂದ ಪ್ರಚಾರ ನಡೆಸಿ, ಮತದಾರರನ್ನು ‘ವ್ಯವಸ್ಥಿತವಾಗಿ’ ತಲುಪುತ್ತಿದ್ದಾರೆ.

ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ ಅವರು ಮಂಡ್ಯ ಜಿಲ್ಲೆಯ ಪ್ರಭಾವಿ ರೈತ ಹೋರಾಟಗಾರರಾಗಿದ್ದ ದಿವಂಗತ ಜಿ.ಮಾದೇಗೌಡ ಅವರ ಪುತ್ರ ಎನ್ನುವುದು ಪ್ಲಸ್ ಪಾಯಿಂಟ್. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೂ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿದ್ದಾರೆ. ಇಲ್ಲೂ ಪ್ರಚಾರದ ಅಬ್ಬರ ಜೋರಾಗಿದೆ. ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಬಹಿರಂಗವಾಗಿ ಬೆಂಬಲ ಘೋಷಿಸಿರುವುದು ಕಾಂಗ್ರೆಸ್ ಪಾಳೆಯದಲ್ಲಿ ಹುಮ್ಮಸ್ಸು ಹೆಚ್ಚಿಸಿದೆ.

ಬಿಜೆಪಿ ತೊರೆದು ಪಕ್ಷೇತರ ಅಭ್ಯರ್ಥಿಯಾಗಿರುವ ಪ್ರಸನ್ನ ಅವರನ್ನು ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಚಿಂತಕ ದೇವನೂರ ಮಹಾದೇವ, ದಸಂಸ ಮುಖಂಡ ಗುರುಪ್ರಸಾದ್ ಕೆರಗೋಡು ಸೇರಿ ಸಮಾನ ಮನಸ್ಕ ಮುಖಂಡರು, ಹೋರಾಟಗಾರರು ಬೆಂಬಲಿಸಿದ್ದಾರೆ. ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ನಾಡಿಮಿಡಿತ ಅರಿಯಲೆಂದೇ ಪ್ರಯೋಗ ನಡೆದಿದೆ.

ಕ್ಷೇತ್ರದಲ್ಲಿ ಜನಸಂಘ, ಬಿಜೆಪಿ ಮತ್ತು ಜೆಡಿಎಸ್ ಮಾತ್ರವೇ ಗೆದ್ದಿವೆ. ಕಾಂಗ್ರೆಸ್ ಖಾತೆ ತೆರೆದಿಲ್ಲ.

ಮುಖ್ಯಾಂಶಗಳು

- ಹಿಂದೆ ಬಿಜೆಪಿ, ಜೆಡಿಎಸ್ ಗೆದ್ದಿವೆ
- ಕಾಂಗ್ರೆಸ್ ಒಮ್ಮೆಯೂ ಜಯಿಸಿಲ್ಲ
- ಕಣದಲ್ಲಿ 19 ಅಭ್ಯರ್ಥಿಗಳು



ಮೈ.ವಿ. ರವಿಶಂಕರ್ ಎಚ್.ಕೆ. ರಾಮು



ಮಧು ಮಾದೇಗೌಡ ಪ್ರಸನ್ನ ಎನ್.ಗೌಡ

ಕಣದಲ್ಲಿ ಯಾರ್‍ಯಾರು?

ಮೈ.ವಿ. ರವಿಶಂಕರ್ (ಬಿಜೆಪಿ), ಮಧು ಜಿ.ಮಾದೇಗೌಡ (ಕಾಂಗ್ರೆಸ್), ಎಚ್.ಕೆ.ರಾಮು (ಜೆಡಿಎಸ್), ರಫತ್ ಉಲ್ಲಾ ಖಾನ್ (ಎಸ್‌ಡಿಪಿಐ), ವಾಟಾಳ್ ನಾಗರಾಜ್ (ಕನ್ನಡ ಚಳವಳಿ ವಾಟಾಳ್ ಪಕ್ಷ) ಮತ್ತು ಎನ್.ವೀರಭದ್ರಸ್ವಾಮಿ (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ), ಡಾ.ಬಿ.ಎಚ್. ಚನ್ನಕೇಶವಮೂರ್ತಿ, ಡಾ.ಜೆ. ಅರುಣ್‌ಕುಮಾರ್, ಸಿ.ಕಾವ್ಯಶ್ರೀ, ಪುಟ್ಟಸ್ವಾಮಿ, ಎನ್. ಪ್ರಸನ್ನ ಗೌಡ, ಕೆ.ಪಿ. ಪ್ರಸನ್ನಕುಮಾರ್, ಎಂ.ಮಹೇಶ್, ಡಾ.ಜೆ.ಸಿ. ರವೀಂದ್ರ, ಎಸ್.ರಾಮು, ಎನ್. ರಾಜೇಂದ್ರಸಿಂಗ್ ಬಾಬು, ಎನ್.ಎಸ್. ವಿನಯ್, ಎಚ್.ಎಲ್. ವೆಂಕಟೇಶ ಮತ್ತು ಎಚ್.ಪಿ. ಸುಜಾತಾ (ಪಕ್ಷೇತರರು).

2016 ಚುನಾವಣೆ ಫಲಿತಾಂಶ

(ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಪಡೆದ ಪ್ರಮುಖರು)

17,161 ಕೆ.ಟಿ. ಶ್ರೀಕಂಠೇಗೌಡ (ಜೆಡಿಎಸ್)

16,853 ಮೈ.ವಿ. ರವಿಶಂಕರ್ (ಬಿಜೆಪಿ)

8,245 ಎಚ್.ಎನ್. ರವೀಂದ್ರ (ಕಾಂಗ್ರೆಸ್)

ಮತದಾರರು

ಜಿಲ್ಲೆ	ಪುರುಷ	ಮಹಿಳೆ	ಇತರೆ	ಒಟ್ಟು
ಹಾಸನ	13,269	9,817	2	23,038
ಮಂಡ್ಯ	24,824	19,534	12	44,370
ಮೈಸೂರು	31,687	22,347	5	54,039
ಚಾಮರಾಜನಗರ	7,561	4,063	2	11,626
ಒಟ್ಟು	77,291	55,761	21	1,33,073

(ಮಾಹಿತಿ: ಚುನಾವಣಾಧಿಕಾರಿ ಕಚೇರಿ)

ಈವರೆಗೆ ಗೆದ್ದವರು

ವರ್ಷ	ಅಭ್ಯರ್ಥಿ	ಪಕ್ಷ
1992	ಬಿ.ಆರ್. ಕೃಷ್ಣಮೂರ್ತಿ	ಬಿಜೆಪಿ
1997ರ ಉಪ ಚುನಾವಣೆ	ಗೋ.ಮಧುಸೂದನ್	ಬಿಜೆಪಿ
1998	ಗೋ.ಮಧುಸೂದನ	ಬಿಜೆಪಿ
2004	ಕೆ.ಟಿ. ಶ್ರೀಕಂಠೇಗೌಡ	ಜೆಡಿಎಸ್
2020	ಗೋ.ಮಧುಸೂದನ	ಬಿಜೆಪಿ
2016	ಕೆ.ಟಿ. ಶ್ರೀಕಂಠೇಗೌಡ	ಜೆಡಿಎಸ್

‘ಒಳಗಿನ ಶತ್ರು’ಗಳೇ ಜೆಡಿಎಸ್‌ಗೆ ಮುಳ್ಳು

ನಾಲ್ಕೂ ಜಿಲ್ಲೆಗಳ ಶಿಕ್ಷಕರ ಕ್ಷೇತ್ರ ಪ್ರತಿನಿಧಿಸುತ್ತಿರುವ ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿರುವುದು ಪಕ್ಷಕ್ಕೆ ಆಘಾತ ತಂದೊಡ್ಡಿದೆ. ಟಿಕೆಟ್ ನಿರೀಕ್ಷಿಸಿದ್ದ ಮುಖಂಡ ಕೀಲಾರ ಜಯರಾಂ ಕೂಡ ಅಸಹಕಾರ ನೀಡಿದ್ದರಿಂದ, ಒಳಗಿನ ಶತ್ರುಗಳೇ ಮುಳ್ಳಾಗಿ ಪರಿಣಮಿಸಿದ್ದಾರೆ. ಹಾಲಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಬದಲಿಗೆ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಚ್.ಕೆ. ರಾಮು ಅವರಿಗೆ ಮಣೆ ಹಾಕಿರುವುದು ಇದಕ್ಕೆ ಕಾರಣ. ಸರ್ಕಾರಿ ನೌಕರರೊಂದಿಗೆ ಅವರ ಒಡನಾಟ ಹಾಗೂ ಕ್ಷೇತ್ರದಲ್ಲಿ ಪಕ್ಷದ ‘ಭದ್ರ ನೆಲೆ’ಯೂ ನೆರವಾಗಲಿದೆ ಎಂಬ ಲೆಕ್ಕಾಚಾರ ವರಿಷ್ಠರದ್ದು.

ಸೀಳುನಾಯಿಗಳಂತೆ ಮುಗಿ ಬೀಳ್ತಾರೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ನಾನೊಬ್ಬ ಮಾತನಾಡಿದರೆ, ಆ ಕಡೆಯಿಂದ 25 ಜನ ಸೀಳು ನಾಯಿಗಳಂತೆ ನನ್ನ ಮೇಲೆ ಮುಗಿ ಬೀಳುತ್ತಾರೆ. ಆದರೆ, ನಮ್ಮ ಪಕ್ಷದ ಯಾರೊಬ್ಬರೂ ನನ್ನ ರಕ್ಷಣೆಗೆ ಬರುವುದಿಲ್ಲ’ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಈಚೆಗೆ ನೀಡಿರುವ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ಗುರುವಾರ ವೈರಲ್ ಆಗಿದೆ.

ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ತಮ್ಮ ನಿವಾಸದಲ್ಲಿ ನಡೆದ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ವೈರಿಗಳನ್ನು ಸೀಳುನಾಯಿಗೆ ಹೋಲಿಸಿದ್ದಾರೆ. ತಮ್ಮ ಬಗ್ಗೆ ಮಾತನಾಡಿದಾಗ ಪಕ್ಷದವರು ರಕ್ಷಣೆಗೆ ಬಾರದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಇಲ್ಲಿ ಪ್ರತಿಕ್ರಿಯಿಸಿದ ಶಾಸಕ ಕೃಷ್ಣ ಭೈರೇಗೌಡ, ‘ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಪಕ್ಷದ ಯಾರೇ ಮುಖಂಡರ ವಿರುದ್ಧ ಮಾತನಾಡಿದಾಗಲೂ ನಾವು ಪ್ರತಿಕ್ರಿಯಿಸಿದ್ದೇವೆ. ಕೆಲವೊಮ್ಮೆ ಉತ್ಸಾಹದಿಂದ ಮಾತನಾಡಿದ್ದೇವೆ. ಕೆಲವೊಮ್ಮೆ ಎಚ್ಚರ ತಪ್ಪಿರಲೂಬಹುದು. ಅದೇನು ಉದ್ದೇಶಪೂರ್ವಕವಲ್ಲ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ನಮ್ಮೆಲ್ಲ ನಾಯಕರ ಪರವಾಗಿದ್ದೇವೆ. ನಮಗೆಲ್ಲರಿಗೂ ಬದ್ಧತೆ ಇದೆ. ಮುಗಿಬೀಳುವುದು ಆ ಪಕ್ಷದವರ ಕೆಲಸ. ನಮ್ಮ ಕೆಲಸ ನಾವು ಮಾಡುತ್ತಿದ್ದೇವೆ’ ಎಂದು ಹೇಳಿದರು.

‘ಸಿದ್ದರಾಮಯ್ಯ ಅವರೊಂದಿಗೆ ನಾವಿದ್ದೇವೆ’ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ತಿಳಿಸಿದರು. ಸಿದ್ದರಾಮಯ್ಯ ಅವರ ‘ಸೀಳು ನಾಯಿ’ ಹೇಳಿಕೆಗೆ ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



‘ಅಡ್ಡ’ ಮತದಾನ ಯಾರಿಗೆ ಹಿತ?

ಒಂದನೇ ಪುಟದಿಂದ

ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡು, ಎಚ್.ಡಿ.ಕುಮಾರಸ್ವಾಮಿ ಜತೆಗೆ ಮುನಿಸಿಕೊಂಡಿರುವ ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಅವರು ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಅವರಿಗೆ ಮತ ನೀಡುವುದಾಗಿ ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ‘ಪ್ರಜಾವಾಣಿ’ಗೆ ಸ್ಪಷ್ಟನೆ ನೀಡಿದ ಅವರು, ‘ಜೆಡಿಎಸ್‌ನಿಂದ ಶಾಸಕನಾಗಿ ಆಯ್ಕೆ ಆಗಿದ್ದೇನೆ. ಕುಪೇಂದ್ರ ರೆಡ್ಡಿ ಅವರು ಮತ ಕೇಳಿದ್ದಾರೆ. ಹಾಗಾಗಿ ಅವರಿಗೆ ಮತ ನೀಡುತ್ತೇನೆ’ ಎಂದು ಹೇಳಿದರು.

ತುಮಕೂರು ಗ್ರಾಮಾಂತರ ಕ್ಷೇತ್ರದ ಜೆಡಿಎಸ್ ಶಾಸಕ ಡಿ.ಸಿ.ಗೌರಿಶಂಕರ್, ಕುಟುಂಬ ಸಮೇತರಾಗಿ ದುಬೈ ಪ್ರವಾಸಕ್ಕೆ ತೆರಳಿದ್ದಾರೆ. ಕುಪೇಂದ್ರ ರೆಡ್ಡಿ ಪ್ರಯತ್ನದ ಫಲವಾಗಿ ಗೌರಿಶಂಕರ್ ಪ್ರವಾಸ ಮೊಟಕುಗೊಳಿಸಿ, ಶುಕ್ರವಾರ ಮತ ಚಲಾಯಿಸಲು ಬರಲಿದ್ದಾರೆ.

ಈ ಕುರಿತು ದುಬೈನಿಂದ ‘ಪ್ರಜಾವಾಣಿ’ ಜತೆ ಮಾತನಾಡಿದ ಗೌರಿಶಂಕರ್, ‘ಚುನಾವಣೆ ದಿನಾಂಕ ಪ್ರಕಟವಾಗುವ ಮೊದಲೇ ಪ್ರವಾಸ ನಿಗದಿಯಾಗಿತ್ತು. ಹಾಗಾಗಿ ದುಬೈಗೆ ಬಂದಿದ್ದೇನೆ. ಗುರುವಾರ ರಾತ್ರಿ ಬೆಂಗಳೂರಿಗೆ ವಾಪಸಾಗುತ್ತಿದ್ದು, ಶುಕ್ರವಾರ ಎಚ್.ಡಿ.ಕುಮಾರಸ್ವಾಮಿ ಜತೆಯಲ್ಲೇ ಮತ ಹಾಕುತ್ತೇನೆ’ ಎಂದು ತಿಳಿಸಿದರು.

ಕಾಂಗ್ರೆಸ್ ಮತ್ತು ಜೆಡಿಎಸ್ ಪರಸ್ಪರ ಕೈಜೋಡಿಸಿದರೆ ತಮ್ಮ ಒಬ್ಬ ಅಭ್ಯರ್ಥಿಯನ್ನು ಸುಲಭವಾಗಿ ಗೆಲ್ಲಿಸಿಕೊಳ್ಳಲು ಸಾಧ್ಯವಿದೆ. ಆದರೆ, ಕಾಂಗ್ರೆಸ್‌ನ ಸಿದ್ದರಾಮಯ್ಯ ಮತ್ತು ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಇದನ್ನು ‘ಪ್ರತಿಷ್ಠೆ’ಯ ವಿಷಯವಾಗಿಸಿಕೊಂಡು ಕೊನೆ ಹಂತದಲ್ಲೂ ಪರಸ್ಪರ ವಾಗ್ದಾಳಿ ನಡೆಸಿದ್ದಾರೆ.

ಮತದಾನ

ಸ್ಥಳ: **ವಿಧಾನಸೌಧ** | ಸಮಯ: **ಬೆಳಿಗ್ಗೆ 9 ರಿಂದ ಸಂಜೆ 4** | ಮತ ಎಣಿಕೆ: **ಸಂಜೆ 5**

ವಿಧಾನಸಭೆ ಬಲಾಬಲ	
ಬಿಜೆಪಿ	120
ಕಾಂಗ್ರೆಸ್	69
ಜೆಡಿಎಸ್	32
ಬಿಎಸ್‌ಪಿ	1
ಪಕ್ಷೇತರರು	2
ಒಟ್ಟು ಶಾಸಕರು	224

ಕಣದಲ್ಲಿರುವ ಅಭ್ಯರ್ಥಿಗಳು

- ನಿರ್ಮಲಾ ಸೀತಾರಾಮನ್ (ಬಿಜೆಪಿ)
- ಜಗ್ಗೇಶ್ (ಬಿಜೆಪಿ)
- ಲಹರ್ ಸಿಂಗ್ ಸಿರೋಯಾ (ಬಿಜೆಪಿ)
- ಜೈರಾಂ ರಮೇಶ್ (ಕಾಂಗ್ರೆಸ್)
- ಮನ್ಸೂರ್ ಖಾನ್ (ಕಾಂಗ್ರೆಸ್)
- ಕುಪೇಂದ್ರ ರೆಡ್ಡಿ (ಜೆಡಿಎಸ್)

ನಾಚಿಕೆ ಆಗಲ್ವಾ: ಎಚ್‌ಡಿಕೆ ಆಕ್ರೋಶ

‘ಕಾಂಗ್ರೆಸ್‌ಗೆ ಮತ ಹಾಕುವಂತೆ ನಮ್ಮ ಪಕ್ಷದ ಶಾಸಕರಿಗೆ ಪತ್ರ ಬರೆದಿರುವ ಸಿದ್ದರಾಮಯ್ಯ ಅವರಿಗೆ ನಾಚಿಕೆ ಆಗಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

‘ನಮ್ಮ ಪಕ್ಷದ ಶಾಸಕರಿಗೆ ಅವರು ಹೇಗೆ ಪತ್ರ ಬರೆಯುತ್ತಾರೆ? ಒಂದು ಕಡೆ ಜೆಡಿಎಸ್ ಪಕ್ಷ ಬಿಜೆಪಿಯ ಬಿ–ಟೀಂ ಎಂದು ಟೀಕೆ ಮಾಡುತ್ತಾರೆ. ಇನ್ನೊಂದು ಕಡೆ ನಮ್ಮದೇ ಶಾಸಕರಿಗೆ ಪತ್ರ ಬರೆದು ಮತ ಕೇಳುತ್ತಾರೆ’ ಎಂದರು.

‘ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿಸಿದರೂ ಕಾಂಗ್ರೆಸ್ ಗೆಲ್ಲಲು ಸಾಧ್ಯವೇ ಇಲ್ಲ. ನಮಗೆ ಅಡ್ಡ ಮತದಾನದ ಆತಂಕವೂ ಇಲ್ಲ, ಭಯವೂ ಇಲ್ಲ. ಸಿದ್ದರಾಮಯ್ಯ ಅವರು ನನ್ನ ಒಂದು ಕಣ್ಣು ಹೋದರೂ ಪರವಾಗಿಲ್ಲ, ಜೆಡಿಎಸ್‌ನ ಎರಡೂ ಕಣ್ಣು ಹೋಗಲಿ ಎನ್ನುವಂತೆ ವರ್ತಿಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

ಜೆಡಿಎಸ್ ಶಾಸಕರಿಗೆ ಸಿದ್ದರಾಮಯ್ಯ ಪತ್ರ

‘ಆತ್ಮಸಾಕ್ಷಿಗೆ ದನಿಯಾಗಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ’ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಜೆಡಿಎಸ್ ಶಾಸಕರಿಗೆ ಪತ್ರ ಬರೆದಿದ್ದಾರೆ.

‘ಮನ್ಸೂರು ಅಲಿ ಖಾನ್ ಅವರ ಗೆಲುವು ಯಾವುದೇ ಒಂದು ಪಕ್ಷದ ಗೆಲುವಾಗದೇ ಜಾತ್ಯತೀತ ಸಿದ್ಧಾಂತದ ಮೇಲೆ ನಂಬಿಕೆ ಇಟ್ಟಿರುವ ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳ ಪಕ್ಷಗಳೆರಡರ ಸೈದ್ಧಾಂತಿಕ ಗೆಲುವಾಗುತ್ತದೆ. ಪ್ರಜಾಪ್ರತಿನಿಧಿಗಳಾದ ನಾವೆಲ್ಲರೂ ನಮ್ಮ ಪ್ರಭುಗಳಾದ ಪ್ರಜೆಗಳ ಆತ್ಮಸಾಕ್ಷಿಗೆ ದನಿಯಾಗಬೇಕಾಗಿರುವುದು ಕರ್ತವ್ಯ. ಈ ಆತ್ಮಸಾಕ್ಷಿಯ ಮತವನ್ನು ಜಾತ್ಯತೀತತೆಗೆ ಬದ್ಧವಾಗಿರುವ ನಮ್ಮ ಪಕ್ಷದ ಮನ್ಸೂರ್ ಖಾನ್ ಅವರಿಗೆ ಮತ ಚಲಾಯಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಜುಲೈ 18ರಂದು ರಾಷ್ಟ್ರಪತಿ ಚುನಾವಣೆ

ಒಂದನೇ ಪುಟದಿಂದ

ಉದಾಹರಣೆಗೆ, ಕರ್ನಾಟಕದ ಶಾಸಕರು 131 ಮತ ಮೌಲ್ಯ ಹೊಂದಿದ್ದರೆ, ಉತ್ತರ ಪ್ರದೇಶದ ಶಾಸಕರ ಮತ ಮೌಲ್ಯ 208 ಆಗಿರಲಿದೆ. ಸಿಕ್ಕಿಂನ ಶಾಸಕರ ಮತ ಮೌಲ್ಯ 7 ಆಗಿರಲಿದೆ. ಕೋವಿಡ್ ಮಾರ್ಗಸೂಚಿಗಳ ಅನ್ವಯವೇ ಚುನಾವಣಾ ಪ್ರಕ್ರಿಯೆ ನಡೆಸಲಾಗುವುದು ಎಂದು ರಾಜೀವ್ ಕುಮಾರ್ ತಿಳಿಸಿದರು.

ಸಾಮಾನ್ಯವಾಗಿ ಸಂಸದರು ಪಾರ್ಲಿಮೆಂಟ್‌ನಲ್ಲಿ ಹಾಗೂ ಶಾಸಕರು ವಿಧಾನಸಭೆಗಳಲ್ಲಿ ಮತ ಚಲಾಯಿಸಲಿದ್ದಾರೆ.

ಜೂನ್ 15; ಚುನಾವಣೆ ಅಧಿಸೂಚನೆ	
ಜೂನ್ 29	ನಾಮಪತ್ರ ಸಲ್ಲಿಕೆಗೆ ಅಂತಿಮ ದಿನ
ಜೂನ್ 30	ನಾಮಪತ್ರ ಪರಿಶೀಲನೆ
ಜುಲೈ 2	ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನ
ಜುಲೈ 18	ಮತದಾನ
ಜುಲೈ 21	ಮತ ಎಣಿಕೆ

ಮತದಾರರು ಯಾರು

776 ಸಂಸದರು ಹಾಗೂ ರಾಜ್ಯಸಭಾ ಸದಸ್ಯರು

4,033 ಮತ ಚಲಾಯಿಸುವ ಶಾಸಕರ ಸಂಖ್ಯೆ

4,809 ಒಟ್ಟು ಮತದಾರರು

ಮತಗಳ ಮೌಲ್ಯ

5,43,200 ಸಂಸದರು

5,43,231 ಶಾಸಕರು

10,86,431* ಒಟ್ಟು ಮತಗಳು

₹15 ಸಾವಿರ ಅಭ್ಯರ್ಥಿ ಪಾವತಿಸಬೇಕಾದ ಭದ್ರತಾ ಠೇವಣಿ

(ಅಭ್ಯರ್ಥಿ ಒಟ್ಟು ಮತದ ಆರನೇ ಒಂದರಷ್ಟು ಮತ ಪಡೆಯಬೇಕು. ಇಲ್ಲದಿದ್ದರೆ ಅವರು ಠೇವಣಿ ಕಳೆದುಕೊಳ್ಳಲಿದ್ದಾರೆ)

ಪಿಎಸ್‌ಐ ಅಕ್ರಮ: ಮೊದಲ ರ‍್ಯಾಂಕ್ ಪಡೆದಿದ್ದ ಕುಶಾಲ್ ಕುಮಾರ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಮತ್ತಷ್ಟು ಚುರುಕುಗೊಳಿಸಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮೊದಲ ರ‍್ಯಾಂಕ್ ಪಡೆದಿದ್ದ ಅಭ್ಯರ್ಥಿ ಕುಶಾಲ್‌ಕುಮಾರ್ ಜೆ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕುಶಾಲ್ ಕುಮಾರ್

‘ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಜುಟ್ಟನಹಳ್ಳಿಯ ಕುಶಾಲ್‌ಕುಮಾರ್, ಒಎಂಆರ್ ಪ್ರತಿ ತಿದ್ದಿಸಿ ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಹಾಗೂ ಇತರೆ ಪುರಾವೆ ಆಧರಿಸಿ ಕುಶಾಲ್‌ಕುಮಾರ್‌ನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಎಂಜಿನಿಯರಿಂಗ್ ಪದವೀಧರ ಕುಶಾಲ್, ಹಲಸೂರು ಗೇಟ್ ಠಾಣೆ ವ್ಯಾಪ್ತಿಯ ಕೇಂದ್ರವೊಂದರಲ್ಲಿ ಪರೀಕ್ಷೆ ಬರೆದಿದ್ದ. ಆತನ ಆಪ್ತರೊಬ್ಬರು, ಪೊಲೀಸ್ ನೇಮಕಾತಿ ವಿಭಾಗದ ನೌಕರರ ಜೊತೆ ಮಾತುಕತೆ ನಡೆಸಿ ಒಎಂಆರ್ ಪ್ರತಿ ತಿದ್ದಲು ಒಪ್ಪಿಸಿದ್ದರು. ಅದಕ್ಕಾಗಿ ₹ 80 ಲಕ್ಷ ನೀಡಿರುವ ಮಾಹಿತಿಯೂ ಇದೆ, ಈ ಬಗ್ಗೆ ಅಭ್ಯರ್ಥಿಯಿಂದ ಮಾಹಿತಿ ಕಲೆಹಾಕಬೇಕಿದೆ’ ಎಂದೂ ತಿಳಿಸಿವೆ.

‘ಪತ್ರಿಕೆ–1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 30.5 ಅಂಕ ಹಾಗೂ ಪತ್ರಿಕೆ–2ರಲ್ಲಿ (ಸಾಮಾನ್ಯ ಅಧ್ಯಯನ) 137.25 ಅಂಕ ಪಡೆದಿದ್ದ. ಒಟ್ಟು 167.75 ಅಂಕಗಳೊಂದಿಗೆ ಮೊದಲ ರ‍್ಯಾಂಕ್ ಪಡೆದಿದ್ದ. ಪತ್ರಿಕೆ–1ರಲ್ಲೂ ಆರೋಪಿ ಅಕ್ರಮ ಎಸಗಿರುವ ಅನುಮಾನವಿದೆ’ ಎಂದೂ ಹೇಳಿವೆ.

‘ಜೆಡಿಎಸ್ ಮುಖಂಡನ ಮಗ’

‘ಅಭ್ಯರ್ಥಿ ಕುಶಾಲ್‌ಕುಮಾರ್, ಜೆಡಿಎಸ್ ಮುಖಂಡ ಜುಟ್ಟನಹಳ್ಳಿ ಜಯರಾಮಯ್ಯ ಅವರ ಪುತ್ರ. ಪ್ರಕರಣದಲ್ಲಿ ತಂದೆ ಪಾತ್ರದ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ರಾಜಧಾನಿಯಲ್ಲಿ ನಾಲ್ಕು ವರ್ಷ ವಾಸವಿದ್ದ ಶಂಕಿತ ಉಗ್ರ

ಒಂದನೇ ಪುಟದಿಂದ

‘ಬೆಂಗಳೂರಿನಲ್ಲೇ ಕುಳಿತು ಜಮ್ಮು–ಕಾಶ್ಮೀರದಲ್ಲಿ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುತ್ತಿದ್ದ. ವೇಷ ಬದಲಿಸಿಕೊಂಡು ತನ್ನೂರಿಗೆ ಆಗಾಗ ಹೋಗಿ ಬರುತ್ತಿದ್ದ. ನಾಲ್ಕು ವರ್ಷಗಳ ಅವಧಿಯಲ್ಲಿ 10 ಬಾರಿ ಹೋಗಿ ಬಂದಿರುವ ಮಾಹಿತಿ ಇದೆ. ಯಾವೆಲ್ಲ ಅಪರಾಧದಲ್ಲಿ ತೊಡಗಿದ್ದನೆಂಬುದು ಇನ್ನಷ್ಟೇ ತಿಳಿಯಬೇಕಿದೆ’ ಎಂದೂ ತಿಳಿಸಿವೆ.

ಯಶವಂತಪುರ ಮಾರುಕಟ್ಟೆಯಲ್ಲಿ ಕೆಲಸ: ‘ಜಮ್ಮು–ಕಾಶ್ಮೀರದಿಂದ ದೆಹಲಿ ಮಾರ್ಗವಾಗಿ 2018ರಲ್ಲಿ ಬೆಂಗಳೂರಿಗೆ ಬಂದಿದ್ದ ತಾಲಿಬ್, ಯಶವಂತಪುರ ರೈಲು ನಿಲ್ದಾಣದಲ್ಲಿ ಇಳಿದಿದ್ದ. ಅಲ್ಲಿಂದ ಮಾರುಕಟ್ಟೆಗೆ ಹೋಗಿ, ಕೆಲದಿನ ರಸ್ತೆ ಹಾಗೂ ಮಳಿಗೆ ಬಳಿಯೇ ಮಲಗಿದ್ದ’ ಎಂದು ಮೂಲಗಳು ತಿಳಿಸಿವೆ.

‘ಮಾರುಕಟ್ಟೆಯಲ್ಲಿ ಗೂಡ್ಸ್ ವಾಹನದ ಚಾಲಕರೊಬ್ಬರ ಪರಿಚಯವಾಗಿತ್ತು. ತಾನೊಬ್ಬ ಅನಾಥನೆಂದು ತಾಲಿಬ್ ಹೇಳಿದ್ದ. ಗೂಡ್ಸ್ ವಾಹನದಲ್ಲಿ ಕೂಲಿ ಕೆಲಸ ಮಾಡಲೆಂದು ಆ ಚಾಲಕ ನೇಮಿಸಿಕೊಂಡಿದ್ದ. ಅಂದಿನಿಂದ ನಾಲ್ಕು ವರ್ಷ ಆತನ ಜೊತೆಯಲ್ಲೇ ತಾಲಿಬ್ ಸುತ್ತಾಡುತ್ತಿದ್ದ’ ಎಂದೂ ಹೇಳಿವೆ.

ವಾಹನ ಚಾಲನೆಯಲ್ಲೂ ಪರಿಣತಿ: ‘ಮಾರುಕಟ್ಟೆ ಸರಕು ಹಾಗೂ ಇತರೆ ವಸ್ತುಗಳನ್ನು ಗೂಡ್ಸ್ ವಾಹನದಲ್ಲಿ ಸಾಗಿಸಲಾಗುತ್ತಿತ್ತು. ಲೋಡಿಂಗ್, ಅನ್‌–ಲೋಡಿಂಗ್ ಕೆಲಸವನ್ನು ತಾಲಿಬ್ ಮಾಡುತ್ತಿದ್ದ. ಮಾರುಕಟ್ಟೆಯಲ್ಲಿ ಅಥವಾ ವಾಹನದಲ್ಲೇ ರಾತ್ರಿ ಮಲಗುತ್ತಿದ್ದ. ಚಾಲಕನಿಗೆ ಹುಷಾರಿಲ್ಲದ ವೇಳೆಯಲ್ಲಿ ಚಾಲನೆ ಸಹ ಮಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತನಗೆ ಚಾಲನೆ ಬರುವುದಿಲ್ಲವೆಂದು ತಾಲಿಬ್ ಆರಂಭದಲ್ಲಿ ಹೇಳಿದ್ದ. ಆತನ ಚಾಲನೆ ಶೈಲಿ ನೋಡಿ ಚಕಿತನಾಗಿದ್ದ ಚಾಲಕ, ‘ಚಾಲನೆ ಹೇಗೆ ಕಲಿತೆ’ ಎಂದು ಪ್ರಶ್ನಿಸಿದ್ದರು. ತಮ್ಮನ್ನು ನೋಡಿ ಕಲಿತಿರುವುದಾಗಿ ಹೇಳಿ ಸುಮ್ಮನಾಗಿಸಿದ್ದ. ಆದರೆ, ತಾಲಿಬ್ ವಿಶೇಷ ತರಬೇತಿ ಪಡೆದ ವ್ಯಕ್ತಿ ಎಂಬ ಅನುಮಾನ ಅಂದೇ ಚಾಲಕನಿಗೆ ಬಂದಿತ್ತು. ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ತಾಲಿಬ್ ಬಂಧನವಾಗುತ್ತಿದ್ದಂತೆ ಚಾಲಕನನ್ನು ವಿಚಾರಣೆ ನಡೆಸಿದಾಗ ಈ ವಿಷಯ ಗೊತ್ತಾಗಿದೆ’ ಎಂದಿವೆ.

ಪತ್ನಿಗೆ ಮತದಾರರ ಗುರುತಿನ ಚೀಟಿ

‘2020ರಲ್ಲಿ ಜಮ್ಮುವಿಗೆ ಹೋಗಿದ್ದ ತಾಲಿಬ್, ಪತ್ನಿ ಹಾಗೂ ಮೂವರು ಮಕ್ಕಳನ್ನು ಕರೆದುಕೊಂಡು ಬೆಂಗಳೂರಿಗೆ ಬಂದಿದ್ದ. ಮೆಜೆಸ್ಟಿಕ್ ರೈಲು ನಿಲ್ದಾಣದಲ್ಲಿ ಕೂಲಿ ಕೆಲಸ ಮಾಡಲಾರಂಭಿಸಿದ್ದ. ತನ್ನೊಂದಿಗೆ ಕೆಲಸ ಮಾಡುತ್ತಿದ್ದ ವ್ಯಕ್ತಿ ಮೂಲಕ ಮಸೀದಿ ಮುಖ್ಯಸ್ಥ ಅನ್ವರ್ ಪರಿಚಯ ಮಾಡಿಕೊಂಡಿದ್ದ. ಮಸೀದಿ ಪಕ್ಕ ಮನೆ ಪಡೆದು, ಕುಟುಂಬದ ಜೊತೆ ವಾಸವಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪತ್ನಿ ಹೆಸರಿನಲ್ಲೇ ನಕಲಿ ದಾಖಲೆ ಸೃಷ್ಟಿಸಿದ್ದ ತಾಲಿಬ್, ಆಧಾರ್ ಹಾಗೂ ಚುನಾವಣಾ ಗುರುತಿನ ಚೀಟಿ ಮಾಡಿಸಿದ್ದ. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಗುರುತಿನ ಚೀಟಿ ಆತನ ಮನೆಯಲ್ಲಿ ಸಿಕ್ಕಿದೆ. ಅದನ್ನು ಮಾಡಿಸಿಕೊಟ್ಟವರು ಯಾರು ಎಂಬುದನ್ನು ಪತ್ತೆ ಮಾಡುತ್ತಿದ್ದೇವೆ’ ಎಂದೂ ತಿಳಿಸಿವೆ.

ಜಮ್ಮು–ಕಾಶ್ಮೀರಕ್ಕೆ ವಿಶೇಷ ತಂಡ

‘ನಾಲ್ಕು ವರ್ಷ ಬೆಂಗಳೂರಿನಲ್ಲಿ ವಾಸವಿದ್ದ ತಾಲಿಬ್, ಹಲವರನ್ನು ಭೇಟಿಯಾಗಿರುವ ಮಾಹಿತಿ ಇದೆ. ಈ ಬಗ್ಗೆ ತನಿಖೆ ನಡೆಸುತ್ತಿರುವ ವಿಶೇಷ ತಂಡ ಜಮ್ಮು–ಕಾಶ್ಮೀರಕ್ಕೆ ಹೋಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜಮ್ಮು–ಕಾಶ್ಮೀರ ಪೊಲೀಸರ ತಂಡವೂ ಬೆಂಗಳೂರಿಗೆ ಬಂದು ತನಿಖೆ ಮಾಡುತ್ತಿದೆ. ಅವರ ಜೊತೆಯಲ್ಲೇ ರಾಜ್ಯದ ಗುಪ್ತದಳ, ಐಎಸ್‌ಡಿ, ಎಟಿಎಸ್ ತಂಡಗಳು ಮಾಹಿತಿ ಹಂಚಿಕೊಳ್ಳುತ್ತಿವೆ’ ಎಂದೂ ತಿಳಿಸಿವೆ.

ಕೋವಿಡ್: 7000 ದಾಟಿದ ಪ್ರಕರಣ

ನವದೆಹಲಿ: ದೇಶದಾದ್ಯಂತ ಗುರುವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆ ಅವಧಿಯಲ್ಲಿ ಹೊಸದಾಗಿ 7,240 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ ಎಂಟು ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕೋವಿಡ್‌ನಿಂದ ಮೃತಪಟ್ಟ ಎಂಟು ಮಂದಿ ಪೈಕಿ ಆರು ಜನರು ಕೇರಳದವರು, ದೆಹಲಿ ಮತ್ತು ಛತ್ತೀಸಗಡದ ತಲಾ ಒಬ್ಬರು ಅಸುನೀಗಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಕೋವಿಡ್ ಪ್ರಕರಣಗಳ ಏಕದಿನ ಏರಿಕೆಯು 99 ದಿನಗಳ ನಂತರ 7,000ಕ್ಕಿಂತ ಹೆಚ್ಚು ದಾಖಲಾಗಿದೆ. ಇದು ದೈನಂದಿನ ಪ್ರಕರಣಗಳಲ್ಲಿ ಸುಮಾರು ಶೇ 39ರಷ್ಟು ಜಿಗಿತವನ್ನು ದಾಖಲಿಸಿದೆ. ದೈನಂದಿನ ಪಾಸಿಟಿವಿಟಿ ದರವು 111 ದಿನಗಳ ಬಳಿಕ ಶೇ 2.13 ದಾಟಿದೆ ಎಂದು ಸಚಿವಾಲಯ ಹೇಳಿದೆ. ದೇಶದಲ್ಲಿ ಮಾರ್ಚ್ 1ರಂದು ಒಟ್ಟು 7,554 ಕೋವಿಡ್ ಪ್ರಕರಣಗಳು ವರದಿಯಾಗಿದ್ದವು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡುವವರು, ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.finc@printersmysore.co.in**ಗೆ ಮೇಲ್ ಮುಖಾಂತರ ಕಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಶೈಕ್ಷಣಿಕ ನೆರವು - ಪ್ರತಿಕ್ರಿಯೆ

ಶುಲ್ಕ ಪಾವತಿಸಿದೆ

‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿ ವೇತನದಿಂದ ನನ್ನ ಶಿಕ್ಷಣಕ್ಕೆ ಅನುಕೂಲವಾಗಿದೆ. ಪ್ರಥಮ ವರ್ಷ ಪಿಯುಸಿ ಶುಲ್ಕವನ್ನು ಆ ಹಣದಲ್ಲಿ ಪಾವತಿಸಿದ್ದೇನೆ. ವೈದ್ಯೆ ಆಗಬೇಕು ಎಂಬ ಉದ್ದೇಶದಿಂದ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಕಷ್ಟದ ಸಮಯದಲ್ಲಿ ನೆರವಾದ ಪತ್ರಿಕೆಗೆ ಧನ್ಯವಾದಗಳು.

ಸಿಂಚನಾ ಎಸ್. ಕೊಳ್ಳೇಗಾಲ,
ಚಾಮರಾಜನಗರ ಜಿಲ್ಲೆ

ಪಠ್ಯಪುಸ್ತಕ ಖರೀದಿಗೆ ನೆರವಾಯಿತು

‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿವೇತನವನ್ನು ಪ್ರಥಮ ಪಿಯು ಪಠ್ಯಪುಸ್ತಕ ಖರೀದಿಸಲು ಹಾಗೂ ಕಾಲೇಜು ಶುಲ್ಕಕ್ಕೆ ಬಳಸಿಕೊಂಡೆ. ಕಷ್ಟಕಾಲದಲ್ಲಿ ಇದು ನೆರವಾಯಿತು. ನಮ್ಮಂತಹ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ‘ಪ್ರಜಾವಾಣಿ’ ಪತ್ರಿಕೆ ನೀಡುತ್ತಿರುವ ಸಹಾಯಧನ ತುಂಬಾ ಪ್ರಯೋಜನಕಾರಿ. ಪತ್ರಿಕಾ ಬಳಗಕ್ಕೆ ಧನ್ಯವಾದ ಹಾಗೂ ಕೃತಜ್ಞತೆಗಳು.

ಆದಿತ್ಯ ಜೆ.ಎನ್.,
ಕಲ್ಮನೆ ಗ್ರಾಮ, ತೀರ್ಥಹಳ್ಳಿ ತಾಲ್ಲೂಕು

ಆಗ ಬಯಲುಸೀಮೆಯಲ್ಲಿ ಸಂಚಲನ; ಈಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆ

ಆ ಕ್ರಾಂತಿಕಾರಿ ಮದುವೆಗೆ 50 ವರ್ಷ

• ಎಂ. ಮಹೇಶ

ಮೈಸೂರು: ಸಂಪ್ರದಾಯಗಳ ಕಟ್ಟುಪಾಡುಗಳನ್ನು ಮೀರಿ, ಮೂಢನಂಬಿಕೆ ಧಿಕ್ಕರಿಸಿ ಮತ್ತು ದಲಿತರೊಬ್ಬರ ಪೌರೋಹಿತ್ಯದಲ್ಲಿ ಸರಳವಾಗಿ ಮದುವೆಯಾದ ಇಲ್ಲಿನ ರಾಮಕೃಷ್ಣನಗರ ಕೆ. ಬ್ಲಾಕ್‌ನ ಈ ದಂಪತಿ, ವೈವಾಹಿಕ ಜೀವನದ 50ನೇ ವಸಂತದ ಸಂಭ್ರಮದಲ್ಲಿದ್ದಾರೆ.

ಐದು ದಶಕಗಳ ಹಿಂದೆ ಅವರಿಟ್ಟ ಆದರ್ಶದ ಹೆಜ್ಜೆಯ ಬಗ್ಗೆ ಈಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗುತ್ತಿದೆ. ಪ್ರಗತಿಪರರು, ಯುವಜನರು ‘ಆ’ ಮದುವೆಯ ಚಿತ್ರಗಳನ್ನು ಹಂಚಿಕೊಂಡು ಮೆಚ್ಚುಗೆಯ ಪೋಸ್ಟ್‌ಗಳನ್ನು ಹಾಕಿದ್ದಾರೆ. ಆ ದಂಪತಿಯೇ ಕೆಂಪಮ್ಮ–ಲೋಹಿಯಾವಾದಿಯೂ ಆಗಿರುವ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ. ಅನಗತ್ಯ ಆಚರಣೆಗಳಿಂದ ವಿಮೋಚನೆ ಬಯಸಿ ಆ ಕಾಲದಲ್ಲೇ ಹೊಸ ಪ್ರಯೋಗದಿಂದ ಗಮನ ಸೆಳೆದವರು. ಅವರು ಹಚ್ಚಿದ್ದ ವೈಚಾರಿಕತೆಯ ಹಣತೆ ಸಾವಿರಾರು ಯುವಕ–ಯುವತಿಯರಿಗೆ ದಾರಿದೀಪವಾಯಿತು.

ಕೆಂಪಮ್ಮ–ಕಾಳೇಗೌಡ ದಂಪತಿಗೆ ಕೆ.ಎಚ್. ರಂಗನಾಥ್ ವಿವಾಹ ಸಂಹಿತೆ ಬೋಧಿಸಿದ ಸಂದರ್ಭ (ಸಂಗ್ರಹ ಚಿತ್ರ)

ಈ ದಂಪತಿಯು ತಮ್ಮಿಬ್ಬರು ಪುತ್ರರು ಮತ್ತು ಪುತ್ರಿಯ ಮದುವೆಯನ್ನೂ ಸರಳ ಮತ್ತು ಜಾತಿಯ ಸಂಕೋಲೆಯಿಂದ ಹೊರತಂದು ನೆರವೇರಿಸಿದ್ದಾರೆ. ಆ ಮದುವೆಗಳೆಲ್ಲವನ್ನೂ ಮನೆಯಲ್ಲೇ ಮಾಡಿರುವುದು ವಿಶೇಷ.

‘ಮೌಢ್ಯ, ಆಡಂಬರದ ಮದುವೆಗೆ ಸಾಲ ಮಾಡುವುದು ಮೊದಲಾದ ಭಾರತೀಯ ಸುಡು ವಾಸ್ತವಗಳು ಗೊತ್ತಾಗಿತ್ತು. ಉಪನ್ಯಾಸಕನಾಗಿದ್ದ ನನಗೆ, ನಗರದ ಬದಲಿಗೆ ಹಳ್ಳಿಯಲ್ಲೇ ಕ್ರಾಂತಿ ಮಾಡಬೇಕು ಎನ್ನುವ ಹಂಬಲವಿತ್ತು. ಪೌರೋಹಿತ್ಯ ವಹಿಸಿಕೊಳ್ಳಲು ಒಪ್ಪಿದ್ದ ದಲಿತ ಅಧ್ಯಾಪಕ ಮಿತ್ರ ಸಿಂಗ್ರಯ್ಯ ಅವರನ್ನು ಕೆಲವರು ಹೆದರಿಸಿದ್ದರು. ನನ್ನನ್ನೂ ನಿಂದಿಸಿದ್ದರು. ಇದರಿಂದ ಅವರು ಹಿಂದೆ ಸರಿದರು. ಆಗ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಎಚ್. ರಂಗನಾಥ್ ಅವರೇ ಪೌರೋಹಿತ್ಯ ವಹಿಸಿದರು. ಚನ್ನಪಟ್ಟಣ ತಾಲ್ಲೂಕಿನ ನಮ್ಮೂರು ನಾಗವಾರದಲ್ಲಿ ನಡೆದ ‘ಮೂಢಸಂಪ್ರದಾಯ ವಿರೋಧಿ ಸಮ್ಮೇಳನ’ದಲ್ಲಿ ಮದುವೆಯಾದೆವು. ಯಾವ ಮುಹೂರ್ತವನ್ನೂ ನೋಡಲಿಲ್ಲ’ ಎಂದು ಮೆಲುಕು ಹಾಕಿದರು.

‘ದುಂದು ವೆಚ್ಚಕ್ಕೆ ಬದಲಾಗಿ ಜನೋಪಯೋಗಿ ಕಾರ್ಯಕ್ಕೆ ಹಣ ಕೊಡಬೇಕೆಂಬ ಧ್ಯೇಯ ಅನುಸರಿಸಿ ನಾಗವಾರದಲ್ಲಿ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ₹ 500 ನೀಡಿದೆವು. ಮದುವೆ ನಂತರ ದೇವಸ್ಥಾನಕ್ಕೆ ಹೋಗಲಿಲ್ಲ’ ಎಂದರು.

50ರ ನೆನಪಿನ ಕಾರ್ಯಕ್ರಮ ನಾಳೆ

ಕೆಂಪಮ್ಮ ಅಬ್ಬೂರು–ಕಾಳೇಗೌಡ ನಾಗವಾರ ಸರಳ ಮದುವೆ ಐವರತ್ತ ನೆನಪಿನ ಅಂಗವಾಗಿ ಜೂನ್ 11ರಂದು ಬೆಳಿಗ್ಗೆ 10.30ಕ್ಕೆ ರಾಮನಗರದ ಜಾನಪದ ಲೋಕದಲ್ಲಿ ‘ಸರಳ ಮದುವೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ’ ಒಂದು ಅವಲೋಕನ ಕಾರ್ಯಕ್ರಮ ಆಯೋಜಿಸಲಾಗಿದೆ.

ಸುನೀಲ್ ರಾವ್

‘ನಿರ್ಗಮನವಲ್ಲ ಆಗಮನ!

ಬಾಲನಟನಾಗಿ ಪುಟ್ಟ ಪುಟ್ಟ ಹೆಜ್ಜೆ ಇಟ್ಟು, ಅಮ್ಮನೊಂದಿಗೆ ಹಾಡುತ್ತಾ, ವೇದಿಕೆಗಳಲ್ಲಿ ಗಮನ ಸೆಳೆದು ಇದೀಗ 22ನೇ ಚಿತ್ರ ‘ತುರ್ತು ನಿರ್ಗಮನ’ದ ಬಾಗಿಲಿನಲ್ಲಿ ಮತ್ತೆ ತ್ವರಿತ ಆಗಮನದ ತವಕದಲ್ಲಿದ್ದಾರೆ ‘ಎಕ್ಸ್‌ಕ್ಯೂಸ್ ಮಿ’ ಖ್ಯಾತಿಯ ಸುನೀಲ್ ರಾವ್. ಸುನೀಲ್ ಅವರಿಗೆ ಕಲೆ ರಕ್ತಗತವಾಗಿಯೇ ಒಲಿದು ಬಂದಿದೆ. ಪ್ರಾಮಾಣಿಕ ಪ್ರಯತ್ನವೇ ಎಲ್ಲ ದಾರಿ ತೋರುತ್ತದೆ ಎಂದು ವಿನಯಪೂರ್ವಕವಾಗಿ ನುಡಿಯುತ್ತಾರೆ.

ಶರತ್ ಹೆಗ್ಡೆ

• ಕಲೆಯನ್ನೇ ನೆಚ್ಚಿಕೊಳ್ಳಲು ಕಾರಣವೇನು?

ಹೌದು, ಕಲೆಯನ್ನೇ ನೆಚ್ಚಿಕೊಳ್ಳುತ್ತೇನೆ ಎಂದೂ ಊಹಿಸಿರಲಿಲ್ಲ. ಪಿಯುಸಿಯಲ್ಲಿದ್ದಾಗ ವಿಜ್ಞಾನ ಆಯ್ಕೆ ಮಾಡಿಕೊಂಡು ಎರಡು ತಿಂಗಳಲ್ಲೇ ಕಲಾ ವಿಭಾಗಕ್ಕೆ ವಾಪಸಾದೆ. ನಮ್ಮ ಕುಟುಂಬ ಕಲಾ ಹಿನ್ನೆಲೆಯದ್ದಾದ್ದರಿಂದ ಅವರೂ ಬೆಂಬಲಿಸಿದರು. ನಟನೆಯನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ ಎಂದುಕೊಂಡಿರಲಿಲ್ಲ. ಆದರೆ ನನಗಿಂತಲೂ ನನ್ನ ಅಪ್ಪ – ಅಮ್ಮನಿಗೆ ವಿಶ್ವಾಸವಿತ್ತು. ಹಾಗಾಗಿ ಅವರು ಅಂದುಕೊಂಡಂತೆ ಆಗಿದೆ. ಪದವಿ ಓದುತ್ತಿದ್ದಾಗಲೇ ಧಾರಾವಾಹಿಗಳಲ್ಲಿ ಅವಕಾಶ ಬಂದಿತು.

ಸಂಗೀತಗಾರನಾಗಬೇಕು ಎಂಬ ಆಸೆ ಇತ್ತು. ಅಮ್ಮನ ಆಸೆಯೂ ಅದೇ ಇತ್ತು. ಕಲಿಯಲಿಕ್ಕಾಗಲಿಲ್ಲ. ಅಲ್ಪಮಟ್ಟಿಗೆ ಗಿಟಾರ್, ಡ್ರಮ್, ಕೀಬೋರ್ಡ್ ನುಡಿಸುತ್ತೇನೆ ಅಷ್ಟೇ. ಈಗ ಇಲ್ಲಿವರೆಗೆ ಬಂದಿದ್ದೇನೆ. ಎಲ್ಲವೂ ಸ್ವಯಂ ಕಲಿಕೆ.

• 22 ಚಿತ್ರಗಳು, ಹಲವು ಧಾರಾವಾಹಿ, ವೆಬ್ ಸಿರೀಸ್ ಪ್ರಯಾಣವನ್ನೊಮ್ಮೆ ಅವಲೋಕಿಸಿದರೆ?

ಸಾಕಷ್ಟು ಏರಿಳಿತ ಕಂಡಿದ್ದೇನೆ. ಆದರೆ, ಯಶಸ್ಸು ಅಥವಾ ಸೋಲಿನಲ್ಲಿ ಇಡೀ ತಂಡ ಅಥವಾ ಯಾರಾದರೊಬ್ಬರು ಕಾರಣರಾಗಿರುತ್ತಾರೆ. ಹಾಗೆಂದು ಕುಗ್ಗುವುದಲ್ಲ. ಯಶಸ್ಸು ಆದಾಗ ಇಡೀ ತಂಡ ಸಂಭ್ರಮಿಸುವುದಿಲ್ಲವೇ. ಹಾಗೆಯೇ ಇದೂ ಕೂಡಾ. ಯಾರನ್ನೂ ದೂಷಿಸುವುದು ಆಗಬಾರದು. ಆದರೆ, ನನಗೆ ಕೊಟ್ಟ ಕೆಲಸದಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡಿದ್ದೇನೆಯೇ ಎಂಬುದನ್ನು ನೋಡಬೇಕು. ಅಲ್ಲಿ ಪ್ರಾಮಾಣಿಕನಾಗಿದ್ದೇನೆ. ಬದ್ಧತೆ ತೋರಿದ್ದೇನೆ ಎಂದು ಇದ್ದರೆ ಸಾಕು. ಸೋಲು– ಗೆಲುವಿಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಮಾಡಿರುವ ಕೆಲಸಗಳಲ್ಲಿ ತಕ್ಕಮಟ್ಟಿಗೆ ಯಶಸ್ಸು ಕಂಡಿದ್ದೇನೆ. ಆ ಮಟ್ಟಕ್ಕೆ ನನಗೊಂದು ಸಾರ್ಥಕತೆ ಇದೆ.

• ಬದುಕಿನಲ್ಲಿ ಅಮ್ಮನ ಪ್ರಭಾವ ಎಷ್ಟು ಇದೆ?

ಅಮ್ಮನ (ಬಿ.ಕೆ. ಸುಮಿತ್ರಾ) ಹಾಗೆ ಸಂಗೀತ ಕಲಿಯಲಾಗಲಿಲ್ಲ. ಆದರೆ, ನೋಡುತ್ತಾ, ಕೇಳುತ್ತಾ ಹಾಡಿದೆ. ಅಮ್ಮನ ಗುಣಗಳನ್ನು ಕಲಿತಿದ್ದೇನೆ. ನಾನು ಚಿಕ್ಕವನಾಗಿದ್ದಾಗಲೇ ಅವರು ಅದೆಷ್ಟೋ ಖ್ಯಾತಿ ಹೊಂದಿದ್ದವರು. ಆದರೆ, ಯಾವತ್ತೂ ಮೆರೆಯಲಿಲ್ಲ, ಬಾಗಿದರು. ಹಾಗಾಗಿ ಈ ಸರಳತೆ, ವಿನಯ ಕಲಿತೆ. ಅಮ್ಮ, ಅಪ್ಪ, ಅಕ್ಕ ಸುತ್ತಮುತ್ತಲಿದ್ದವರೆಲ್ಲರ ಜೊತೆ ಬಾಳುವಾಗ ಒಂದಲ್ಲಾ ಒಂದು ವಿಷಯ ನಮ್ಮ ಮೇಲೆ ಪ್ರಭಾವ ಬೀರಿಯೇ ಇರುತ್ತದೆ. ಹಾಗಾಗಿ ಪ್ರಭಾವ ಅನ್ನುವುದಕ್ಕಿಂತ ಕಲಿತದ್ದೇ ಹೆಚ್ಚು.

• ಹೆಚ್ಚು ಸ್ಫೂರ್ತಿ ನೀಡಿದ ಸಿನಿಗುರುಗಳು?

ನನ್ನನ್ನು ಬಾಲನಟನಾಗಿ ಗುರುತಿಸಿದ ಬಿ.ಸಿ. ಗೌರಿಶಂಕರ್ ಒಬ್ಬ ಒಳ್ಳೆಯ ತಂತ್ರಜ್ಞರೂ ಹೌದು. ಅಲ್ಲಿಂದ ನಟನೆ ಆರಂಭವಾಯಿತು.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಾಲ್ಕನೇ ವಯಸ್ಸಿಗೆ ಹಾಡುತ್ತಿದ್ದೆ. ಮುಂದೆ ನಟನೆ ಆಯಿತು. ಅನಂತನಾಗ್ ಅವರು ಒಂದು ವಿಶ್ವವಿದ್ಯಾಲಯದಂತೆ. ಅಂಬರೀಷ್ ಅವರ ಜೊತೆಗೆ ಕೆಲಸ ಮಾಡುವುದೇ ಬೇರೆ, ಸಾಹಿತಿ ಆರ್.ಎನ್. ಜಯಗೋಪಾಲ್, ಭಾರ್ಗವ, ಬಿ. ಸುರೇಶ, ಟಿ.ಎನ್. ಸೀತಾರಾಂ, ಎಸ್. ನಾರಾಯಣ್, ಪ್ರೇಮ್, ಪ್ರಕಾಶ್ ರಾಜ್, ಓಂ ಪ್ರಕಾಶ್ ರಾವ್, ದಿನೇಶ್ ಬಾಬು... ಹೀಗೆ ಹಲವಾರು ಮಂದಿ ಇದ್ದಾರೆ. ಕೆಲವರಿಂದ ಭಾಷಾ ಶುದ್ಧಿ, ನಟನೆ, ಕೆಲಸದ ವೈಖರಿ ಹೀಗೆ ಒಂದೊಂದು ವಿಚಾರ ಕಲಿತಿದ್ದೇನೆ. ಅವರು ಯಾರೂ ಕೂಡಾ ಹೀಗೇ ಎಂದು ಹೇಳಿಕೊಡಲಿಲ್ಲ. ಬದಲಾಗಿ ಕೆಲಸ ಮಾಡಿಸುತ್ತಲೇ ಕಲಿಸಿದವರು. ಇದೆಲ್ಲಾ ನನ್ನ ಬೆಳವಣಿಗೆಗೆ ಸಹಾಯ ಮಾಡಿದೆ.

• ಏನಿದು ತುರ್ತು ನಿರ್ಗಮನ?

ಈ ಚಿತ್ರ ಹೈ ಫೈ ಫ್ಯಾಂಟಸಿ ಡ್ರಾಮಾ. ನಿಜ ಜೀವನದಲ್ಲಿ ಮ್ಯಾಜಿಕ್‌ನಂಥ ವಿಷಯ ಸಿಕ್ಕಾಗ ಹೇಗಿರಬಹುದು ಎಂಬುದನ್ನು ಹೇಳಿದ್ದೇವೆ. ಹೊಸ ಪ್ರಯತ್ನ ಇದು. ಕನ್ನಡ ಚಿತ್ರರಂಗದಲ್ಲಿ ಹೊಸ ಮೈಲಿಗಲ್ಲಾಗಬಹುದು ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಸೋಂಬೇರಿ ಹುಡುಗನೊಬ್ಬನಿಗೆ ಬದುಕಿನ ಕಷ್ಟದಲ್ಲಿ ಎರಡನೇ ಅವಕಾಶ ಸಿಕ್ಕಾಗ ಅವನು ಏನು ಮಾಡುತ್ತಾನೆ ಎಂಬುದನ್ನು ಹೇಳಿದ್ದೇನೆ. ಈ ಚಿತ್ರದಲ್ಲಿ ಕೆಲಸ ಮಾಡಿದ ಹೆಮ್ಮೆ ಇದೆ. ಒಳ್ಳೆಯ ನಿರ್ದೇಶಕರು (ಹೇಮಂತ್ ಕುಮಾರ್) ಒಂದು ಭಿನ್ನವಾದ ಕಥೆ ಹೇಳಿದ್ದಾರೆ. ಒಳ್ಳೆಯ ತಂತ್ರಜ್ಞಾನ ಬಳಸಿದ್ದೇವೆ. ಇದು ಕನ್ನಡ ಚಿತ್ರರಂಗಕ್ಕೆ ಬಳುವಳಿ ಆಗಲಿದೆ ಎಂಬ ವಿಶ್ವಾಸವಿದೆ. ಈ ವಿಭಿನ್ನ ಪ್ರಯತ್ನವನ್ನು ಪ್ರೇಕ್ಷಕರು ಖಂಡಿತವಾಗಿ ಮೆಚ್ಚುತ್ತಾರೆ.

• ಬೇರೆ ಭಾಷೆಗಳತ್ತ ಆಸಕ್ತಿ?

ಮೊದಲು ಇರಲಿಲ್ಲ. ಈಗ ಅಲ್ಲಿಯೂ ಪ್ರಯತ್ನ ಮಾಡಬೇಕು ಎಂಬ ಮನಸ್ಸಿದೆ. ಕೆಲವು ಅವಕಾಶಗಳೇನೋ ಇವೆ. ಮುಂದೆ ನೋಡೋಣ. ❖

ತ್ರಿವಿಕ್ರಮ
ವಿಕ್ರಂ, ಆಕಾಂಕ್ಷಾ ಶರ್ಮಾ

‘ತ್ರಿವಿಕ್ರಮ’ನ ಯಾತ್ರೆಗೆ ಸಿದ್ಧತೆ

ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಅವರ ದ್ವಿತೀಯ ಪುತ್ರ ವಿಕ್ರಮ್ ನಟನೆಯ ಚೊಚ್ಚಲ ಸಿನಿಮಾ ‘ತ್ರಿವಿಕ್ರಮ’ ಚಿತ್ರೀಕರಣ ಮುಗಿದಿದೆ. ಇತ್ತೀಚೆಗೆ ಹಾಡಿನ ಚಿತ್ರೀಕರಣ ನಡೆಸಿರುವ ‘ತ್ರಿವಿಕ್ರಮ’ ತಂಡ, ಬಳಿಕ ಕುಂಬಳಕಾಯಿ ಒಡೆದಿದೆ. ಜೂನ್ 24ರಂದು ರಾಜ್ಯಾದ್ಯಂತ ಚಿತ್ರ ಪ್ರದರ್ಶನಗೊಳ್ಳಲಿದೆ.

ಯೋಗರಾಜ್ ಭಟ್ ಅವರ ಸಾಹಿತ್ಯದ ‘ಶಕುಂತಲಾ ಶೇಕ್ ಎ ಬಾಡಿ ಪ್ಲೀಸ್…’ ಎಂಬ ಹಾಡಿನ ಚಿತ್ರೀಕರಣ ಮೋಹನ್ ಬಿ. ಕೆರೆ ಸ್ಟುಡಿಯೋದ ಸೆಟ್‌ನಲ್ಲಿ ಇತ್ತೀಚೆಗೆ ನಡೆಯಿತು. ಅರ್ಜುನ್ ಜನ್ಯ ಸಂಗೀತವಿರುವ ಈ ಹಾಡಿಗೆ ಭೂಷಣ್ ನೃತ್ಯ ನಿರ್ದೇಶನ ಮಾಡಿದ್ದಾರೆ. ವಿಕ್ರಮ್ ಹಾಗೂ ಆಕಾಂಕ್ಷಾ ಶರ್ಮಾ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಸುಮಾರು ನೂರು ದಿನಗಳ ಕಾಲ ಶೂಟಿಂಗ್ ನಡೆದಿದೆ.

‘ರೋಸ್’, ‘ಮಾಸ್ ಲೀಡರ್’ ಸಿನಿಮಾಗಳಿಗೆ ಆ್ಯಕ್ಷನ್ ಕಟ್ ಹೇಳಿರುವ ಸಹನಾ ಮೂರ್ತಿ ‘ತ್ರಿವಿಕ್ರಮ’ನಿಗೆ ನಿರ್ದೇಶನ ಮಾಡಿದ್ದಾರೆ. ಸೋಮಣ್ಣ ಟಾಕೀಸ್ ಬ್ಯಾನರ್ ಅಡಿಯಲ್ಲಿ ತಯಾರಾಗಿರುವ ಈ ಚಿತ್ರಕ್ಕೆ ರಾಮ್ಕೋ ಸೋಮಣ್ಣ ಬಂಡವಾಳ ಹೂಡಿದ್ದಾರೆ. ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಈಗಾಗಲೇ ಬಿಡುಗಡೆಯಾಗಿರುವ ‘ಪ್ಲೀಸ್ ಮಮ್ಮಿ’ ಟ್ರೆಂಡಿಂಗ್‌'ನಲ್ಲಿದೆ. ಡಾ.ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯದ ಈ ಹಾಡನ್ನು ವಿಜಯಪ್ರಕಾಶ್ ಹಾಡಿದ್ದಾರೆ.

ತುಳಸಿ, ಸುಚೇಂದ್ರ ಪ್ರಸಾದ್, ಸಾಧುಕೋಕಿಲ, ರೋಹಿತ್ ರಾಯ್, ಜಯಪ್ರಕಾಶ್, ಶಿವಮಣಿ, ಆದಿ ಲೋಕೇಶ್, ನಾಗೇಂದ್ರ ಶಾ, ಚಿಕ್ಕಣ್ಣ ಮೊದಲಾದವರು ತಾರಾಗಣದಲ್ಲಿದ್ದಾರೆ. ಸಂತೋಷ್ ರೈ ಪಾತಾಜೆ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ಕೆ.ಎಂ.ಪ್ರಕಾಶ್ ಸಂಕಲನವಿದೆ. ❖

ಮೂರು ಕಥೆಗಳ ಗುಚ್ಛ ‘ಈಗ’

ಎನ್.ಎಸ್.ಶಂಕರ್

ನಟ ರಮೇಶ್ ಅರವಿಂದ್ ನಟನೆಯ ‘ಉಲ್ಟಾ ಪಲ್ಟಾ’ ಎಂಬ ಹಿಟ್ ಸಿನಿಮಾದ ನಿರ್ದೇಶಕ ಎನ್.ಎಸ್.ಶಂಕರ್ ಅವರ ಹೊಸ ಸಿನಿಮಾ ‘ಈಗ’ ಸೋಮವಾರ(ಜೂನ್ 13) ಸೆಟ್ಟೇರಲಿದೆ.

ಬದಲಾದ ಸಿನಿಮಾ ಮಾರುಕಟ್ಟೆಯ ಅರ್ಥವ್ಯವಸ್ಥೆಯನ್ನರಿತು ತಮ್ಮ ‘ಸಿನಿಮಾ ಕೆಫೆ’ ಮೂಲಕ ಹೊಸ ಯೋಜನೆಯೊಂದನ್ನು ಶಂಕರ್ ಅವರು ಕೈಗೆತ್ತಿಕೊಂಡಿದ್ದಾರೆ. ಜನರೇ ಬಂಡವಾಳ ಹೂಡಿ ‘ಈಗ’ ಸಿನಿಮಾ ನಿರ್ಮಾಣ ಮಾಡುತ್ತಿರುವುದು ವಿಶೇಷ. ಕನಿಷ್ಠ ₹1 ಲಕ್ಷದಿಂದ ಗರಿಷ್ಠ ₹5 ಲಕ್ಷದವರೆಗೆ ಹೂಡಿಕೆ ಮಾಡಿ ಜನರೇ ಈ ಸಿನಿಮಾ ನಿರ್ಮಾಪಕರಾಗುತ್ತಿದ್ದಾರೆ. ಈ ಹಿಂದೆ ಚಂದನವನದಲ್ಲಿ ಮೂಡಿಬಂದಿದ್ದ ‘ಕಥಾಸಂಗಮ’ದಂತೆಯೇ ‘ಈಗ’ ಕೂಡಾ ಮೂರು ಕಥೆಗಳ ಗುಚ್ಛ. ಈ ಸಿನಿಮಾ, ಪಿ.ಲಂಕೇಶ್ ಅವರ ‘ಮುಟ್ಟಿಸಿಕೊಂಡವನು’, ಪ್ರತಿಭಾ ನಂದಕುಮಾರ್ ಅವರ ‘ಅರುಂಧತಿ’ ಹಾಗೂ ಪಿ.ಮಹಮ್ಮದ್ ಅವರ ‘ಡಿಸೆಂಬರ್ 6’ ಕಥೆಗಳ ಸಂಗಮ.

‘ಈ ಕಾಲದ ತಳಮಳಗಳ ಎದೆ ಬಗೆದು ನೋಡುವ ಈ ಮೂರು ಅದ್ವಿತೀಯ ಕತೆಗಳ ಗೊಂಚಲು ‘ಈಗ’ ಸಿನಿಮಾ’ ಎನ್ನುತ್ತಾರೆ ಶಂಕರ್. ‘ಪ್ರಸ್ತುತ ಇರುವ ವಿಷಯಗಳ ಮೂಲಕ ಈ ಮೂರು ಕಥೆಗಳು ಒಂದಕ್ಕೊಂದು ಜೋಡಣೆಯಾಗುತ್ತವೆ. ಸಿನಿಮಾಗಳ ಬಜೆಟ್ ₹75 ಲಕ್ಷ ಎಂದು ಊಹಿಸಿದ್ದೇವೆ. ಈಗಾಗಲೇ ಹಲವರು ಹೂಡಿಕೆ ಮಾಡಿದ್ದು, ಇನ್ನೂ ಹಲವರು ಆಸಕ್ತಿ ತೋರುತ್ತಿದ್ದಾರೆ’ ಎಂದರು. ❖

ಸೆಪ್ಟೆಂಬರ್ 13
ಜೈ ಜಗದೀಶ್, ದೀಪಾ, ಶ್ರೇಯಾ ರಿದಿಬನ್

ದಾದಿಯರ ಕಥೆ ‘ಸೆಪ್ಟೆಂಬರ್ 13’

ಕೋವಿಡ್ ದುರಿತದ ಕಾಲದಲ್ಲಿ ದಾದಿಯರ ಸೇವೆ, ತ್ಯಾಗ ಬಿಂಬಿಸುವ ಚಿತ್ರ ‘ಸೆಪ್ಟೆಂಬರ್ 13’ ಬಿಡುಗಡೆಯ ಹೊಸ್ತಿಲಲ್ಲಿದೆ. ವಿಧಾನ ಪರಿಷತ್ ಸದಸ್ಯರಾಗಿದ್ದ ಐವಾನ್ ನಿಗ್ಲಿ ಅವರು ತಮ್ಮ ರೂಬಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಿಸಿದ್ದಾರೆ. ಅವರ ಬಳಗದ 11 ಮಂದಿ ಈ ಚಿತ್ರ ನಿರ್ಮಾಣಕ್ಕೆ ಕೈ ಜೋಡಿಸಿದ್ದಾರೆ.

‘ನಾನೂ ಬದುಕಿ ಬೆಳೆದದ್ದು ದಾದಿಯರಿಂದಲೇ. ಹಾಗಾಗಿ ಆ ಸಮುದಾಯದ ಬಗ್ಗೆ ತುಂಬಾ ಪ್ರೀತಿ ಗೌರವ ಇದೆ. ಇದೇ ವೇಳೆ ಫ್ಲಾರೆನ್ಸ್ ನೈಟಿಂಗೇಲ್ ಅವರ ಬಗ್ಗೆ ಅಧ್ಯಯನ ಮಾಡುತ್ತಾ ಹೋದೆ. ಆಗ ದಾದಿಯರ ಸೇವಾ ಕ್ಷೇತ್ರದ ಅರಿವು ಇನ್ನಷ್ಟು ವಿಸ್ತಾರವಾಯಿತು. ದಾದಿಯರಿಗಾಗಿ ಬೆಂಗಳೂರಿನ ಆಂಗ್ಲೋ ಇಂಡಿಯನ್ ಯುನಿಟಿ ಸೆಂಟರ್ ಮತ್ತು ಕರ್ನಾಟಕ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸ್ಥಾಪಿಸಿದ್ದೇನೆ. ಈಗ ಅವರ ಗೌರವಾರ್ಥ ಈ ಚಿತ್ರ ನಿರ್ಮಿಸುತ್ತಿದ್ದೇನೆ’ ಎಂದರು ಐವನ್ ನಿಗ್ಲಿ.

‘ಚಿತ್ರಕ್ಕೆ ಡಾ.ರಾಜ ಬಾಲಕೃಷ್ಣ ಅವರ ನಿರ್ದೇಶನವಿದೆ. ಕಥೆಯೂ ನಿಗ್ಲಿ ಅವರದ್ದೇ. ಶ್ರೇಯಾ ರಿಧಿಬನ್, ಚಿಂತನ್ ರಾವ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ಜೈಜಗದೀಶ್, ವಿನಯಾ ಪ್ರಸಾದ್ ಅವರೂ ತಾರಾಗಣದಲ್ಲಿದ್ದಾರೆ. ಸುಮಾರು 100 ದಾದಿಯರು ಒಂದು ಹಾಡಿನಲ್ಲಿ ನೃತ್ಯ ಮಾಡಿದ್ದಾರೆ. ಜೂನ್ ಕೊನೆಯ ವಾರದಲ್ಲಿ ಈ ಚಿತ್ರ ಬಿಡುಗಡೆ ಆಗಲಿದೆ’ ಎಂದು ನಿಗ್ಲಿ ಹೇಳಿದರು. ❖

ಇದು ಕಾಮಿಡಿ ಗ್ಯಾಂಗ್ಸ್ ಉತ್ಸವ

‘ಕಾಮಿಡಿ ಗ್ಯಾಂಗ್ಸ್ ಉತ್ಸವ’ದ ಝಲಕ್

ಕಿರುತೆರೆ

ಕಿರುತೆರೆ ಹಿರಿತೆರೆಯ ಎಲ್ಲ ತಾರೆಯರನ್ನು ಮತ್ತೊಮ್ಮೆ ಒಟ್ಟು ಮಾಡಿದೆ ಕಾಮಿಡಿ ಗ್ಯಾಂಗ್ಸ್ ಉತ್ಸವ. ಜೂನ್ 12ರಂದು ಸ್ಟಾರ್ ಸುವರ್ಣ ವಾಹಿನಿಯಲ್ಲಿ ಸಂಜೆ 7ರಿಂದ ರಾತ್ರಿ 10 ಗಂಟೆಯವರೆಗೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ.

ರಿಷಭ್ ಶೆಟ್ಟಿ, ಮಾನ್ವಿತಾ ಕಾಮತ್, ಖುಷಿ, ನಿಶ್ವಿಕಾ ನಾಯ್ಡು ಸೇರಿದಂತೆ ಹಲವಾರು ತಾರೆಯರು ಈ ಉತ್ಸವದಲ್ಲಿದ್ದಾರೆ. ನಿರೂಪಕ ಶಿವರಾಜ್ ಕೆ.ಆರ್. ಪೇಟೆ, ತೀರ್ಪುಗಾರರಾದ ಮುಖ್ಯಮಂತ್ರಿ ಚಂದ್ರು, ಶ್ರುತಿ ಹರಿಹರನ್ ಮತ್ತು ಕುರಿ ಪ್ರತಾಪ್ ಅವರ ಅನುಕರಣೆ ಮಾಡುವ ಪ್ರಹಸನ ಪ್ರೇಕ್ಷಕರಿಗೆ ಮನೋರಂಜನೆ ನೀಡಲಿದೆ ಎಂದಿದೆ ವಾಹಿನಿ.

ಗಾಯಕರಾದ ಹರ್ಷ ಮತ್ತು ಅಂಕಿತಾ ಕುಂದು ಅವರ ಗಾಯನವಿದೆ. ಒಟ್ಟಾರೆ 3 ಗಂಟೆಗಳ ಕಾಲ ನಗು, ಹಾಡು, ನೃತ್ಯದ ನಿರಂತರ ಮನರಂಜನೆ ಕಿರುತೆರೆ ವೀಕ್ಷಕರಿಗಾಗಿ ಸಿದ್ಧವಾಗಿದೆ ಎಂದಿದೆ ವಾಹಿನಿಯ ತಂಡ. ❖

ಸಿನಿ ಸಂಕ್ಷಿಪ್ತ

‘ನೈಟ್ ಕರ್ಫ್ಯೂ’ ನಲ್ಲಿ ಮತ್ತೆ ತೆರೆಗೆ ಬಂದ ಮಾಲಾಶ್ರೀ

2017ರಲ್ಲಿ ತೆರೆಕಂಡ ‘ಉಪ್ಪು ಹುಳಿ ಖಾರ’ ಸಿನಿಮಾ ಬಳಿಕ ನಟ ಮಾಲಾಶ್ರೀ ಅವರು ಸಿನಿಮಾಗಳಿಂದ ಕೊಂಚ ಬಿಡುವು ಪಡೆದುಕೊಂಡಿದ್ದರು. 2021ರಲ್ಲಿ ಪತಿ, ನಿರ್ದೇಶಕ ರಾಮು ಅವರ ಅಕಾಲಿಕ ನಿಧನ ಮಾಲಾಶ್ರೀಯವರನ್ನು ಆಘಾತಕ್ಕೆ ದೂಡಿತ್ತು.

ಮಾಲಾಶ್ರೀ

ಹೀಗಾಗಿ ಬಣ್ಣದ ಲೋಕದಿಂದ ಕೆಲ ಸಮಯ ದೂರ ಉಳಿದಿದ್ದ ಅವರು ಮತ್ತೆ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಅವರ ನಟನೆಯ ‘ನೈಟ್ ಕರ್ಫ್ಯೂ’ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ರಿಲೀಸ್‌ಗೆ ಚಿತ್ರತಂಡ ಸಿದ್ಧತೆ ನಡೆಸಿದೆ.

ಈ ಹಿಂದೆ ‘ಪುಟಾಣಿ ಸಫಾರಿ’ ಸಿನಿಮಾ ನಿರ್ದೇಶನ ಮಾಡಿದ್ದ ರವೀಂದ್ರ ವಂಶಿ ಈ ಚಿತ್ರಕ್ಕೆ ಕಥೆ ಬರೆದು, ನಿರ್ದೇಶನ ಮಾಡಿದ್ದಾರೆ. ಸಿನಿಮಾದ ಬಗ್ಗೆ ಮಾಹಿತಿ ಹಂಚಿಕೊಳ್ಳಲು ಚಿತ್ರತಂಡ ಇತ್ತೀಚೆಗೆ ಸುದ್ದಿಗೋಷ್ಠಿ ಆಯೋಜಿಸಿತ್ತು.

ಮಾಲಾಶ್ರೀ ಮಾತನಾಡಿ, ‘ಈ ಸಿನಿಮಾದ ಕಥೆಯಲ್ಲಿ ಹೊಸತನವಿದೆ. ನಾನು ಇದರಲ್ಲಿ ಡಾಕ್ಟರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಡಾಕ್ಟರ್ ಪಾತ್ರ ಮಾಡಿದ ಎರಡನೇ ಸಿನಿಮಾವಿದು’ ಎಂದರು. ‘ಹಲವು ಕಾರಣಕ್ಕೆ ಈ ಸಿನಿಮಾ ನನಗೆ ವಿಶೇಷ. ಮಾಲಾಶ್ರೀ ಅವರ ಜೊತೆ ಕೆಲಸ ಮಾಡುತ್ತಿರುವುದು ಖುಷಿ ಕೊಟ್ಟಿದೆ. ಇದೊಂದು ಕ್ರೈಮ್ ಥ್ರಿಲ್ಲರ್. ಕೊರೊನಾ ಕಾಲಘಟ್ಟದಲ್ಲಿ ನಡೆಯುವ ಕಥೆ ಇದಾಗಿದೆ. ನಾನೂ ಕೂಡ ಈ ಸಿನಿಮಾದಲ್ಲಿ ಡಾಕ್ಟರ್ ಪಾತ್ರ ಮಾಡಿದ್ದೇನೆ’ ಎಂದರು ನಟಿ ರಂಜನಿ ರಾಘವನ್.

ಇದೊಂದು ಆಕ್ಷನ್ ಥ್ರಿಲ್ಲರ್ ಚಿತ್ರವಾಗಿದ್ದು ಮೆಡಿಕಲ್ ಮಾಫಿಯಾ ಕುರಿತಾದ ಕಥೆ ಒಳಗೊಂಡಿದ್ದು, ಪ್ರಮೋದ್ ಶೆಟ್ಟಿ, ಬಲರಾಜ್ವಾಡಿ, ವರ್ಧನ್, ಅಶ್ವಿನ್, ರಂಗಾಯಣ ರಘು, ಸಾಧು ಕೋಕಿಲ, ಮಂಜು ಪಾವಗಡ ಸೇರಿದಂತೆ ಹಲವು ಕಲಾವಿದರು ಸಿನಿಮಾದಲ್ಲಿದ್ದಾರೆ. ಸ್ವರ್ಣಗಂಗಾ ಫಿಲಂಸ್ ಬ್ಯಾನರ್ ಅಡಿಯಲ್ಲಿ ಬಿ.ಎಸ್ ಚಂದ್ರಶೇಖರ್ ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ಈ ಚಿತ್ರಕ್ಕೆ ಪ್ರಮೋದ್ ಭಾರತೀಯ ಛಾಯಾಗ್ರಹಣ, ಜಾಗ್ವಾರ್ ಸಣ್ಣಪ್ಪ ಸಾಹಸ ನಿರ್ದೇಶನವಿದೆ. ❖

ಏಳು ಭಾಷೆಗಳಲ್ಲಿ ‘ಕಬ್ಜ’ ಡಬ್ಬಿಂಗ್



ಕಬ್ಜ
ಉಪೇಂದ್ರ

ರಿಯಲ್ ಸ್ಟಾರ್ ಉಪೇಂದ್ರ ಹಾಗೂ ಕಿಚ್ಚ ಸುದೀಪ್ ಅಭಿನಯದ ಬಹು ನಿರೀಕ್ಷಿತ ‘ಕಬ್ಜ’ ಚಿತ್ರದ ಡಬ್ಬಿಂಗ್ ಆರಂಭವಾಗಿದೆ. ಏಕಕಾಲದಲ್ಲಿ ಏಳು ಭಾಷೆಗಳಲ್ಲಿ ಡಬ್ಬಿಂಗ್ ನಡೆಯುತ್ತಿದೆ.

ಚಿತ್ರದ ಒಂದು ಹಾಡಿನ ಚಿತ್ರೀಕರಣ ಬಾಕಿ ಇದೆ. 1940ರ ಕಾಲಘಟ್ಟದ ಕಥೆ ಈ ಚಿತ್ರದ್ದು. ಬಹುಭಾಷಾ ತಾರೆಗಳನ್ನು ಸೇರಿಸಿಕೊಂಡು ಚಿತ್ರ ನಿರ್ಮಾಣವಾಗಿದೆ. ಆರ್.ಚಂದ್ರು ಅವರು ಈ ಚಿತ್ರದ ನಿರ್ದೇಶಕರು.

ಈ ಚಿತ್ರದ ಮೋಷನ್ ಪೋಸ್ಟರ್, ಮೇಕಿಂಗ್ ಚಿತ್ರಗಳು ಈಗಾಗಲೇ ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯವಾಗಿವೆ. ಟೀಸರ್ ಬಿಡುಗಡೆ ಮಾಡುವ ಸಿದ್ಧತೆಯಲ್ಲಿದೆ ಚಿತ್ರತಂಡ. ಕನ್ನಡ ಚಿತ್ರರಂಗಕ್ಕೆ ಹೊಸದೊಂದು ಭರವಸೆ ನೀಡಲಿದೆ ಈ ಚಿತ್ರ ಎಂಬ ವಿಶ್ವಾಸ ನಿರ್ಮಾಣ ತಂಡದ್ದು. ❖



ಸುಭಾಷಿತ
ಬೆಳೆದರೆ ಬಾಳು, ಬೆಳೆಯದಿದ್ದರೆ ಹಾಳು.
-ಜಿ.ಪಿ.ರಾಜರತ್ನಂ

ಭಾರತ ಮಹಿಳಾ ಕ್ರಿಕೆಟ್‌ಗೆ ಮೆರುಗು ತಂದ ಮಿಥಾಲಿ

ಮಹಿಳೆಯರ ಕ್ರಿಕೆಟ್ ರಂಗದಲ್ಲಿ ಹಲವು ಪ್ರಥಮಗಳ ಒಡತಿಯಾಗಿರುವ ಮಿಥಾಲಿ ರಾಜ್ ತಮ್ಮ ವೃತ್ತಿಜೀವನಕ್ಕೆ ವಿದಾಯ ಹೇಳಿದ್ದಾರೆ. ಅವರ 23 ವರ್ಷಗಳ ಪಯಣವು ಭಾರತದ ಮಹಿಳಾ ಕ್ರಿಕೆಟ್ ಪಾಲಿಗೆ ಒಂದು ಮಹತ್ವದ ಕಾಲಘಟ್ಟವೇ ಸರಿ. ಈ ಅವಧಿಯಲ್ಲಿ ಮಿಥಾಲಿ ಅವರ ಜೊತೆಜೊತೆಗೆ ಭಾರತದ ಮಹಿಳಾ ಕ್ರಿಕೆಟ್ ಕೂಡ ಗಣನೀಯವಾಗಿ ಬೆಳೆದುನಿಂತಿದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತ ತಂಡದ ಬ್ಯಾಟರ್ ಮತ್ತು ನಾಯಕಿಯಾಗಿ ಮಾಡಿದ ಸಾಧನೆಗಳು ಹಲವು. ಅದರಲ್ಲಿ ವಿಶ್ವದಾಖಲೆಗಳೂ ಸೇರಿವೆ. ಇದೀಗ ಅವರ ಸ್ಥಾನವನ್ನು ತುಂಬುವವರು ಯಾರು ಎಂಬ ಪ್ರಶ್ನೆ ಮೂಡಿದೆ. ಸದ್ಯ ಮಿಂಚುತ್ತಿರುವ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಶೆಫಾಲಿ ವರ್ಮಾ, ತಾನಿಯಾ ಭಾಟಿಯಾ ಅವರಿಗೆ ಮಿಥಾಲಿ ಅವರ ಸಾಧನೆಯನ್ನು ಸರಿಗಟ್ಟುವ ಅವಕಾಶ ಖಂಡಿತವಾಗಿಯೂ ಇದೆ. ಆದರೆ ಈ ಎಲ್ಲ ಪ್ರತಿಭಾನ್ವಿತೆಯರು ಕ್ರಿಕೆಟ್ ಅಂಗಳಕ್ಕೆ ಬರಲು ಮಿಥಾಲಿ ಸಾಧನೆಯೇ ಪ್ರೇರಣೆ ಎಂಬುದರಲ್ಲಿ ಅನುಮಾನವೇ ಇಲ್ಲ. ಈಗಿನ ಮಹಿಳಾ ಕ್ರಿಕೆಟ್ ರಂಗಕ್ಕೂ ಎರಡು ದಶಕಗಳ ಹಿಂದಿನದಕ್ಕೂ ಅಜಗಜಾಂತರ ಇದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಮಹಿಳಾ ತಂಡಗಳಿಗೆ ದುಡ್ಡು ಖರ್ಚು ಮಾಡಲು ನಿರಾಸಕ್ತಿ ತೋರುತ್ತಿದ್ದ ಕಾಲದಲ್ಲಿ ಮಿಥಾಲಿ ಬ್ಯಾಟ್ ಹಿಡಿದವರು. ದೇಶದ ಮಹಿಳಾ ಟೆಸ್ಟ್ ತಂಡದ ಮಾಜಿ ನಾಯಕಿ, ಬೆಂಗಳೂರಿನ ಶಾಂತಾ ರಂಗಸ್ವಾಮಿಯವರ ನಿರಂತರ ಹೋರಾಟ ಮತ್ತು ಮಿಥಾಲಿ ಬಳಗವು ಕ್ರಿಕೆಟ್ ಅಂಗಳದಲ್ಲಿ ತೋರಿದ ಉತ್ಕೃಷ್ಟ ಪ್ರದರ್ಶನದಿಂದಾಗಿ ಬಿಸಿಸಿಐ ಕಡೆಗೂ ಮಣಿಯಬೇಕಾಯಿತು. ಹಣ, ವಾರ್ಷಿಕ ಗುತ್ತಿಗೆ ಮತ್ತು ಪುರುಷರ ಕ್ರಿಕೆಟ್‌ನಲ್ಲಿರುವಂತೆ ಟೂರ್ನಿಗಳನ್ನು ನಡೆಸಲು ಆರಂಭಿಸಿದೆ. ಜಾಹೀರಾತುಗಳಲ್ಲಿಯೂ ಕ್ರಿಕೆಟ್ ಆಟಗಾರ್ತಿಯರು ಕಾಣಿಸಿಕೊಳ್ಳತೊಡಗಿದ್ದಾರೆ. ಅದರಿಂದಾಗಿ ಇವತ್ತು ನಗರ, ಪಟ್ಟಣಗಳ ಕ್ರಿಕೆಟ್ ಅಕಾಡೆಮಿಗಳ ನೆಟ್ಸ್‌ನಲ್ಲಿ ಬಾಲಕಿಯರು ಅಭ್ಯಾಸ ನಡೆಸುತ್ತಿರುವ ದೃಶ್ಯಗಳು ಸಾಮಾನ್ಯವಾಗಿವೆ.

ನಿವೃತ್ತಿ ಘೋಷಿಸಿರುವ ಮಿಥಾಲಿ ಅವರ ಅನುಭವವು ಯುವಪ್ರತಿಭೆಗಳ ಬೆಳವಣಿಗೆಗೆ ವಿನಿಯೋಗವಾಗಲಿ

ಈ ಎಲ್ಲ ಕಾರಣಗಳಿಂದ ಮಹಿಳಾ ಕ್ರಿಕೆಟ್‌ನ ಮಟ್ಟಿಗೆ ಮಿಥಾಲಿ ಮಹಾನಾಯಕಿಯಾಗಿ ಗಮನ ಸೆಳೆಯುತ್ತಾರೆ. ತಮಿಳುನಾಡು ಮೂಲದ ಕುಟುಂಬದ ಮಿಥಾಲಿ ಅವರ ತಂದೆ ದೊರೈರಾಜ್ ವಾಯುಸೇನೆಯ ಅಧಿಕಾರಿಯಾಗಿದ್ದವರು. ಅವರು ರಾಜಸ್ಥಾನದ ಜೋಧಪುರದಲ್ಲಿ ನೆಲೆಸಿದ್ದ ಸಂದರ್ಭದಲ್ಲಿ ಜನಿಸಿದ ಮಿಥಾಲಿ, ಬೆಳೆದಿದ್ದು ಹೈದರಾಬಾದಿನಲ್ಲಿ. ಅಮ್ಮ ಲೀಲಾ ರಾಜ್ ಅವರ ಪ್ರಭಾವದಿಂದ ಭರತನಾಟ್ಯದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು. ಆದರೆ ಸಾಹಸ ಮನೋಭಾವದ ದೊರೈರಾಜ್, ಮಗಳನ್ನು ಕ್ರಿಕೆಟ್ ಆಟಗಾರ್ತಿಯನ್ನಾಗಿ ರೂಪಿಸಲು ಪಣತೊಟ್ಟರು. ಅವರ ಅಂದಿನ ನಿರ್ಧಾರದಿಂದ ಮಿಥಾಲಿ ದೇಶದ ಸಾವಿರಾರು ಹುಡುಗಿಯರಿಗೆ ಪ್ರೇರಣೆಯಾಗಿ ಬೆಳೆದದ್ದು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು. ಹತ್ತನೇ ವಯಸ್ಸಿನಿಂದ ತರಬೇತಿ ಆರಂಭವಾದ ಮೇಲೆ ಬಹುಬೇಗ ಯಶಸ್ಸಿನ ಮೆಟ್ಟಿಲೇರಿದರು. ಜೂನಿಯರ್ ಹಂತದಲ್ಲಿಯೇ ಹುಡುಗರನ್ನೂ ಮೀರಿಸುವ ಬ್ಯಾಟಿಂಗ್ ಕೌಶಲ ಅವರದ್ದಾಗಿತ್ತು. 16ನೇ ವಯಸ್ಸಿನಲ್ಲಿಯೇ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದರು. ಐರ್ಲೆಂಡ್ ಎದುರಿನ ಏಕದಿನ ಪಂದ್ಯದಲ್ಲಿ ಶತಕ ಬಾರಿಸಿದ ಅವರು ನಂತರ ಹಿಂದಿರುಗಿ ನೋಡಿದ್ದೇ ಇಲ್ಲ. ಏಕದಿನ ಕ್ರಿಕೆಟ್‌ನಲ್ಲಿ ಏಳು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ವಿಶ್ವದ ಮೊದಲ ಆಟಗಾರ್ತಿಯಾದರು. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ತಂಡಗಳ ಪಾರಮ್ಯವನ್ನು ಮೀರಿ ನಿಂತು ಭಾರತ ತಂಡವನ್ನು ಎರಡು ಸಲ ಏಕದಿನ ವಿಶ್ವಕಪ್ ಫೈನಲ್‌ವರೆಗೂ ಮುನ್ನಡೆಸಿದರು. ಟೆಸ್ಟ್, ಟಿ20 ಮತ್ತು ಏಕದಿನ ಮಾದರಿಗಳಲ್ಲಿ ದಾಖಲೆಗಳನ್ನು ಬರೆದಿಟ್ಟಿದ್ದಾರೆ. ತಮ್ಮ ಅಭಿಮಾನಿಗಳಿಂದ 'ಮಹಿಳಾ ತೆಂಡೂಲ್ಕರ್' ಎಂದು ಕರೆಸಿಕೊಂಡ ಆಟಗಾರ್ತಿ ಅವರು. ಪದ್ಮಶ್ರೀ, ಅರ್ಜುನ ಮತ್ತು ಮೇಜರ್ ಧ್ಯಾನಚಂದ್ ಖೇಲ್‌ರತ್ನ ಸೇರಿದಂತೆ ಹಲವು ಪ್ರಶಸ್ತಿ, ಪುರಸ್ಕಾರಗಳು ಅವರಿಗೆ ಒಲಿದಿವೆ. ಮಿಥಾಲಿ ಅವರ ದೀರ್ಘ ವೃತ್ತಿಜೀವನದಲ್ಲಿ ಕೆಲವು ವಿವಾದಗಳೂ ಸುದ್ದಿ ಮಾಡಿದವು. ಅದರಲ್ಲಿ ತಂಡದ ಮುಖ್ಯ ಕೋಚ್ ಆಗಿದ್ದ ರಮೇಶ್ ಪೊವಾರ್ ವಿರುದ್ಧ ಸಿಡಿದೆದ್ದ ಪ್ರಕರಣ ಬಹಳ ಚರ್ಚೆಗೆ ಗ್ರಾಸವಾಗಿತ್ತು. ಅವರು ಬರೆದ ದೂರಿನ ಪತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಸೋಲು, ಟೀಕೆಗಳಿಂದ ಎಂದೂ ಅವರು ವಿಚಲಿತರಾಗಲಿಲ್ಲ. ಪುಟಿದೆದ್ದು ನಿಂತು ಯಶಸ್ಸು ಗಳಿಸುವ ಮೂಲಕವೇ ಟೀಕಾಕಾರರಿಗೆ ಉತ್ತರ ಕೊಟ್ಟಿದ್ದಾರೆ. ಇದೀಗ ಅವರ ನಿವೃತ್ತಿ ಜೀವನದ ಇನಿಂಗ್ಸ್ ಆರಂಭವಾಗಲಿದೆ. ಅವರ ಅನುಭವವು ಯುವಪ್ರತಿಭೆಗಳ ಬೆಳವಣಿಗೆಗೆ ವಿನಿಯೋಗವಾದರೆ ದೇಶದ ಮಹಿಳಾ ಕ್ರಿಕೆಟ್ ಬೆಳವಣಿಗೆಯ ವೇಗವು ಗಗನಮುಖಿಯಾಗುವುದರಲ್ಲಿ ಸಂಶಯವಿಲ್ಲ.

ಸಂವಿಧಾನದ ವೇಷ ತೊಟ್ಟು ರಾಜ್ಯ ಸರ್ಕಾರಗಳಿಗೆ ಕಿರಿಕಿರಿ ಮಾಡುವುದನ್ನು ತಪ್ಪಿಸುವುದು ಹೇಗೆ?

ರಾಜ್ಯಪಾಲ: ಕೇಂದ್ರವೇ ನೇಮಿಸಬೇಕೇ?

ವಿಶ್ಲೇಷಣೆ

ಅರುಣ್ ಸಿನ್ಹಾ

ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ನೇತೃತ್ವದ ಸರ್ಕಾರವು ಅಲ್ಲಿನ ವಿಶ್ವವಿದ್ಯಾಲಯಗಳ ಕುಲಾಧಿಪತಿಯನ್ನಾಗಿ ರಾಜ್ಯಪಾಲರ ಬದಲು ಮುಖ್ಯಮಂತ್ರಿಯನ್ನು ನೇಮಕ ಮಾಡುವ ಕಾನೂನು ಜಾರಿಗೆ ತರಲು ತೀರ್ಮಾನಿಸಿದೆ. ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರ ಕೂಡ ಎರಡು ತಿಂಗಳ ಹಿಂದೆ ಇದೇ ಬಗೆಯ ತೀರ್ಮಾನ ಕೈಗೊಂಡಿತು. ಹೀಗೆ ಮಾಡಿರುವುದಕ್ಕೆ ಸಕಾರಣಗಳು ಇವೆ.

ರಾಜ್ಯಪಾಲರು ರಾಜ್ಯ ಸರ್ಕಾರಗಳ ಜೊತೆ ವರ್ತಿಸುತ್ತಿರುವ ರೀತಿಯಲ್ಲಿ ವಿಶಿಷ್ಟವಾದ ವಿಧಾನವೊಂದು ಇದೆ. ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿನ ರಾಜ್ಯಪಾಲರು ಅಲ್ಲಿನ ಸರ್ಕಾರಗಳ ಜೊತೆ ಲವ್ವಿ-ಡವ್ವಿ ಸಂಬಂಧ ಹೊಂದಿದ್ದಾರೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಜೊತೆ ಒಳ್ಳೆಯ ಸಂಬಂಧ ಹೊಂದಿರುವ ರಾಜ್ಯ ಸರ್ಕಾರಗಳ ಜೊತೆ ಅಲ್ಲಿನ ರಾಜ್ಯಪಾಲರು ಹೊಂದಾಣಿಕೆಯ ಬಾಂಧವ್ಯ ಬೆಳೆಸಿಕೊಂಡಿದ್ದಾರೆ. ಅಲ್ಲಿ ಸರ್ಕಾರಗಳನ್ನು ಅವರು ಸಾರ್ವಜನಿಕವಾಗಿ ಪ್ರಶಂಸಿಸುವುದೂ ಇದೆ.

ಆದರೆ, ಇತರ ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಸರ್ಕಾರದ ಬಗ್ಗೆ ಮೆಚ್ಚುಗೆಯ ಮಾತು ಆಡುವುದಿಲ್ಲ. ಅಲ್ಲಿ ಅವರಿಗೆ ಕರಾಳ ಮುಖಗಳು ಮಾತ್ರ ಕಾಣುತ್ತಿವೆ. ಅವರಿಗೆ ಅಲ್ಲಿ ಹಾಡಹಗಲೇ ನಿಯಮಗಳನ್ನು ಹತ್ಯೆ ಮಾಡುವುದು ಕಾಣುತ್ತಿದೆ. ಅಲ್ಲಿ ಅವರು ಬಹುತೇಕ ಸಂದರ್ಭಗಳಲ್ಲಿ ವಿರೋಧ ಪಕ್ಷದ (ಅಂದರೆ ಬಿಜೆಪಿಯ) ಭಾಷೆಯಲ್ಲಿ ಮಾತನಾಡುತ್ತಾರೆ. ಮಹಾರಾಷ್ಟ್ರದಲ್ಲಿ ಒಂದು ಅತ್ಯಾಚಾರ, ಕೊಲೆ ಪ್ರಕರಣ ನಡೆಯಿತು. ಮಹಿಳೆಯರ ಸುರಕ್ಷತೆ ಬಗ್ಗೆ ಚರ್ಚಿಸಲು ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಬೇಕು ಎಂದು ಬಿಜೆಪಿ ಆಗ್ರಹಿಸಿತು. ಎರಡು ದಿನಗಳ ವಿಶೇಷ ಅಧಿವೇಶನ ಕರೆಯುವಂತೆ ಕೋರಿ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಪತ್ರ ಬರೆದರು. ಇದಕ್ಕೆ ಜಾಣ ಪ್ರತಿಕ್ರಿಯೆ ನೀಡಿದ ಠಾಕ್ರೆ, ಈ ಬಗ್ಗೆ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಕೇಂದ್ರಕ್ಕೆ ತಾವು ಪತ್ರ ಬರೆಯಬೇಕು, ವಿಷಯವು ನಿರ್ದಿಷ್ಟ ರಾಜ್ಯಕ್ಕೆ ಸಂಬಂಧಿಸಿದ್ದಲ್ಲ, ಅದು ರಾಷ್ಟ್ರೀಯ ವಿಚಾರ ಎಂದು ಹೇಳಿದರು.

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರೂ ಬಿಜೆಪಿ ಬಯಸುವ ರೀತಿಯಲ್ಲಿಯೇ ವರ್ತಿಸುತ್ತಿದ್ದಾರೆ. ವೈದ್ಯಕೀಯ ಪ್ರವೇಶ ಮತ್ತು ವೈದ್ಯರ ನೇಮಕಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ನೀತಿಗಳನ್ನು ಹೊಂದಿರುವ ತಮಿಳುನಾಡು ಬಲಿಷ್ಠ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕಟ್ಟಿದೆ. ಹೀಗಾಗಿ, ಅಲ್ಲಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತಮಿಳುನಾಡು ರಾಜ್ಯವನ್ನು ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ವ್ಯಾಪ್ತಿಯಿಂದ ಹೊರತರಲು ಯತ್ನಿಸುತ್ತಿದ್ದಾರೆ. ಆದರೆ, ಎಲ್ಲವನ್ನೂ ಏಕರೂಪದ ವ್ಯವಸ್ಥೆಯ ಅಡಿ ತರುವುದರಲ್ಲಿ ನಂಬಿಕೆ ಹೊಂದಿರುವ ಬಿಜೆಪಿಗೆ, ವೈದ್ಯಕೀಯ ಪ್ರವೇಶಾತಿ ವಿಚಾರದಲ್ಲಿ ತಮಿಳುನಾಡಿಗೆ ವಿಶೇಷ ಸ್ಥಾನ ಸಿಗುವುದು ಇಷ್ಟವಿಲ್ಲ. ರವಿ ಅವರು ಆ ನಿಲುವಿನ ಪರ ಇದ್ದಾರೆ. ತಮಿಳುನಾಡು ವಿಧಾನಸಭೆ ಅನುಮೋದಿಸಿದ್ದ ಮಸೂದೆಯನ್ನು ಅವರು ಕೆಲವು ಆಕ್ಷೇಪಣೆಗಳೊಂದಿಗೆ ಹಿಂದಕ್ಕೆ ಕಳುಹಿಸಿದರು. ತಿದ್ದುಪಡಿ ಮಸೂದೆಯನ್ನೂ ದೀರ್ಘಾವಧಿಗೆ ಹಾಗೇ ಇರಿಸಿಕೊಂಡ ರವಿ, ನಂತರ ಅದನ್ನು ರಾಷ್ಟ್ರಪತಿಗೆ ಕಳುಹಿಸಿದರು. ಈಗ ಅದು ರಾಷ್ಟ್ರಪತಿಯವರ ಮುಂದಿದೆ.

ಪಶ್ಚಿಮ ಬಂಗಾಳದಲ್ಲಿ ರಾಜ್ಯಪಾಲ ಜಗದೀಪ್ ಧನಕರ್ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡುವಿನ ಸಂಘರ್ಷವನ್ನು ಗಮನಿಸಿದರೆ, ಮಹಾರಾಷ್ಟ್ರ ಹಾಗೂ ತಮಿಳುನಾಡಿನಲ್ಲಿ ಮುಖ್ಯಮಂತ್ರಿ-ರಾಜ್ಯಪಾಲರ ನಡುವೆ ನಡೆದಿರುವುದು ಸಂಭಾವಿತರ ಸಂಘರ್ಷ ಎನ್ನಬಹುದು. ಬಂಗಾಳದಲ್ಲಿ ಪ್ರತಿದಿನವೂ ವಾಗ್ದಾಳಿಗಳು ನಡೆಯುತ್ತಿವೆ. ಪಶ್ಚಿಮ ಬಂಗಾಳವು ಪ್ರಜಾತಂತ್ರದ ಪಾಲಿಗೆ ವಿಷಾನಿಲದ ಛೇಂಬರ್ ಆಗಿದೆ ಎಂದು ರಾಜ್ಯಪಾಲರು ಪ್ರತಿದಿನವೂ ಹೇಳುತ್ತಾರೆ. 'ರಾಜಭವನದಲ್ಲಿ ಒಬ್ಬ ರಾಜ ಇದ್ದಾನೆ. ಆತನದ್ದು ಸಡಿಲ ನಾಲಿಗೆ. ಆತ ಬಿಜೆಪಿಯ ಅಧ್ಯಕ್ಷನಂತೆ ಮಾತನಾಡುತ್ತಾನೆ' ಎಂದು ಮಮತಾ ಪ್ರತಿದಾಳಿ ನಡೆಸುತ್ತಾರೆ.

ಬಿಜೆಪಿಗೆ ಸಡ್ಡು ಹೊಡೆದು ನಿಂತಿರುವ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಹಾಗೂ ಸರ್ಕಾರದ ನಡುವಿನ ಸಂಘರ್ಷವು ಕೊನೆಗೊಳ್ಳುವುದೇ? ಇದಕ್ಕೆ ಉತ್ತರ 'ಇಲ್ಲ'. ಅಲ್ಲಿನ ಸರ್ಕಾರಗಳ ಬಗ್ಗೆ ರಾಜ್ಯಪಾಲರು ಸಾಧ್ಯವಾದಷ್ಟೂ ಕೆಟ್ಟ ಮಾತು ಆಡುತ್ತಿರಲಿ ಎಂದು ಬಿಜೆಪಿಯ ನಾಯಕರು ಬಯಸುತ್ತಿದ್ದಾರೆ ಎಂಬ ಕಾರಣಕ್ಕೆ ಹೀಗೆ ಹೇಳುತ್ತಿಲ್ಲ. ಈ ರೀತಿ ಮಾಡುವುದು ಬಿಜೆಪಿಯೇ ಮೊದಲಿಗೆ ಕಂಡುಕೊಂಡ ಮಾರ್ಗವಲ್ಲ. ಕಾಂಗ್ರೆಸ್ಸು ಉಚ್ಛ್ರಾಯದಲ್ಲಿದ್ದಾಗ ರಾಜ್ಯಪಾಲರನ್ನು ತನ್ನ ಏಜೆಂಟರಂತೆ ಬಳಸಿಕೊಂಡಿತು. ತನ್ನ ವಿರೋಧಿ ಪಕ್ಷಗಳ ಆಡಳಿತ ಇರುವ ರಾಜ್ಯಗಳು ರಾವಣನ ಆಡಳಿತವಿರುವ ಲಂಕೆ ಎಂಬಂತೆ ಬಿಂಬಿಸಲು ಅವರೂ ಯತ್ನಿಸಿದ್ದರು. ಮುಂದೊಂದು ದಿನ ಕಾಂಗ್ರೆಸ್, ಕೇಂದ್ರದಲ್ಲಿ ಅಧಿಕಾರಕ್ಕೆ ಮರಳಿದರೆ ಅದು ಕೂಡ ಮತ್ತೆ ಇದೇ ಕೆಲಸ ಮಾಡುತ್ತದೆ.

ಬ್ರಿಟಿಷರ ಕಾಲದ ಗವರ್ನರ್‌ಗಳಿಗೆ ಇದ್ದಂತಹ ಅಧಿಕಾರವೇ ಪ್ರಜಾತಂತ್ರ ವ್ಯವಸ್ಥೆಯಲ್ಲಿನ ರಾಜ್ಯಪಾಲರಿಗೂ ಇದೆ. ರಾಜ್ಯಪಾಲರ ಅಧಿಕಾರ ಏನೆಂಬುದನ್ನು ಸಂವಿಧಾನದ 163ನೇ ವಿಧಿ ಹೇಳುತ್ತದೆ. ಇದು 1935ರ ಭಾರತ ಸರ್ಕಾರ ಕಾಯ್ದೆಯ ಸೆಕ್ಷನ್ 50ರ ನಕಲು. ಅದರಲ್ಲಿ ಬ್ರಿಟಿಷರು ನೇಮಕ ಮಾಡಿದ ಗವರ್ನರ್‌ಗಳ ಪಾತ್ರ ಏನು ಎಂಬುದನ್ನು ವಿವರಿಸಲಾಗಿತ್ತು. ವಸಾಹತು ಕಾಲದ ಗವರ್ನರ್‌ಗಳ ಮಾದರಿಯಲ್ಲೇ, ಇಂದಿನ ರಾಜ್ಯಪಾಲರಿಗೆ ವಿವೇಚನಾ ಅಧಿಕಾರ ನೀಡಲಾಗಿದೆ. ಇಂತಹ ವಿವೇಚನಾ ಅಧಿಕಾರಕ್ಕೆ ಮಿತಿ ಇಲ್ಲ. ಯಾವೆಲ್ಲ ವಿಚಾರಗಳಲ್ಲಿ ರಾಜ್ಯಪಾಲರು ವಿವೇಚನಾ ಅಧಿಕಾರ ಬಳಸಿ ತೀರ್ಮಾನ ತೆಗೆದುಕೊಳ್ಳಬಹುದು ಎಂಬುದರ ಸ್ಪಷ್ಟ ವ್ಯಾಖ್ಯಾನ ಇಲ್ಲ. ರಾಜ್ಯಪಾಲರು ತಮ್ಮ ವಿವೇಚನಾ ಅಧಿಕಾರ ಬಳಸಿ ಕೈಗೊಂಡ ತೀರ್ಮಾನಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿಲ್ಲ, ಅದನ್ನು ಸಚಿವ ಸಂಪುಟವೂ ಪ್ರಶ್ನೆ ಮಾಡಲಾಗದು.

ಅವರು ವಿಧಾನಸಭೆ ಅನುಮೋದಿಸಿದ ಮಸೂದೆಗೆ ಸಹಿ ಹಾಕದೆ ಅನಿರ್ದಿಷ್ಟಾವಧಿಗೆ ಹಾಗೇ ಇರಿಸಿಕೊಳ್ಳಬಹುದು. ಸಂವಿಧಾನದ 163ನೇ ವಿಧಿಗೆ ತಿದ್ದುಪಡಿ ತಂದು, ರಾಜ್ಯಪಾಲರ ವಿವೇಚನಾ ಅಧಿಕಾರವನ್ನು ಹಿಂಪಡೆಯಬೇಕು. ಆದರೆ ಹೀಗೆ ಮಾಡುವುದರಲ್ಲಿಯೂ ಅಪಾಯವಿದೆ, ಈ ರೀತಿ ಮಾಡುವುದು ಪ್ರಜಾತಾಂತ್ರಿಕ ಮೌಲ್ಯಗಳಿಗೆ ಸರಿಹೊಂದುವುದೂ ಇಲ್ಲ. ರಾಜ್ಯ ಸರ್ಕಾರವು ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳುವಂತೆ ರಾಜ್ಯಪಾಲರು ನೋಡಿಕೊಳ್ಳಲಿ ಎಂಬ ಕಾರಣಕ್ಕೇ ಸಂವಿಧಾನ ರೂಪಿಸಿದವರು ಅವರಿಗೆ ವಿವೇಚನಾ ಅಧಿಕಾರ ನೀಡಿದರು. ಆದರೆ ಆ ಆಶಯ ಈಡೇರುತ್ತಿಲ್ಲ. ಸಂವಿಧಾನದ ರಕ್ಷಕರಾಗಿ ಕೆಲಸ ಮಾಡುವ ಬದಲು ರಾಜ್ಯಪಾಲರು ಕೇಂದ್ರ ಸರ್ಕಾರದ ಕಾವಲು ನಾಯಿಯಂತೆ ಕೆಲಸ ಮಾಡುತ್ತಿದ್ದಾರೆ.

ರಾಜ್ಯಪಾಲರನ್ನು ನೇಮಿಸುವ ಬಗೆಯಲ್ಲಿ ಬದಲಾವಣೆ ತಂದರೆ ಸಮಸ್ಯೆಗೆ ಪರಿಹಾರ ಸಿಗಬಹುದು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ತೋರಿದ ನಿಷ್ಠೆಯ ಆಧಾರದಲ್ಲಿ ರಾಜ್ಯಪಾಲರನ್ನು ನೇಮಕ ಮಾಡುವುದಾದರೆ, ಅವರು ಸಂವಿಧಾನದ ವೇಷ ತೊಟ್ಟು ರಾಜ್ಯ ಸರ್ಕಾರಗಳನ್ನು ಪೀಡಿಸುವುದು ಮುಂದುವರಿಯುತ್ತದೆ. ಹೀಗಾಗಿ, ರಾಜ್ಯಪಾಲರ ಹುದ್ದೆಯನ್ನು ರದ್ದು ಮಾಡಬೇಕಿಲ್ಲ. ಅವರ ವಿವೇಚನಾ ಅಧಿಕಾರವನ್ನೂ ಹಿಂದಕ್ಕೆ ಪಡೆಯಬೇಕಿಲ್ಲ. ಆದರೆ, ರಾಜ್ಯಪಾಲರನ್ನು ನೇಮಕ ಮಾಡುವ ಕೇಂದ್ರದ ಅಧಿಕಾರವನ್ನು ಕಿತ್ತುಕೊಳ್ಳಬೇಕು. ಪ್ರಧಾನಿ, ಲೋಕಸಭೆಯ ವಿರೋಧ ಪಕ್ಷದ ನಾಯಕ, ರಾಜ್ಯದ ಮುಖ್ಯಮಂತ್ರಿ, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ, ಸಂವಿಧಾನದ ಬಗ್ಗೆ ಅಪಾರ ಪರಿಣತಿ ಹೊಂದಿರುವ ವಕೀಲ ಮತ್ತು ಇತರ ಸ್ವತಂತ್ರ ಸದಸ್ಯರು ಇರುವ ಸಮಿತಿಯೊಂದು ರಾಜ್ಯಪಾಲರನ್ನು ನೇಮಕ ಮಾಡಲಿ.

ಸ್ವತಂತ್ರ ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರಗಳು ಆಗ ಜನರ ಹಿತಾಸಕ್ತಿಗೆ ಪೂರಕವಾಗಿ ಕೆಲಸ ಮಾಡಬಲ್ಲವು. ಒಬ್ಬರಿಗೊಬ್ಬರು ಪೂರಕ ಸಲಹೆಗಳನ್ನು ನೀಡುತ್ತ ಕೆಲಸ ಮಾಡಬಹುದು.

ಚುರುಮುರಿ

ಚಡ್ಡಿಗೊಂದು ಕಾಲ!

• ಬಿ.ಎನ್.ಮಲ್ಲೇಶ್

'ರೀ... ಟ್ರೇನು ಲೇಟಾತು, ಜಸ್ಟ್ ಈಗ ಅಮ್ಮನ ಮನೆಗೆ ಬಂದೆ, ನೀವೇನ್ ಮಾಡ್ತಿದೀರಿ?'

'ನಾನಾ? ನೀ ಮಾಡಿಟ್ಟಿದ್ದ ಚಿತ್ರಾನ್ನದ ಗೊಜ್ಜಿಗೆ ಅನ್ನ ಕಲೆಸ್ಕೊಂಡು ತಿಂತಾ ಇದೀನಿ'.

'ಆಹಾ, ಚೆನ್ನಾಗಿ ರೈಲು ಬಿಡ್ತೀರ'.

'ನಿನ್ನೆಲಿ, ಬರೀ ಅನುಮಾನ ನಿಂದು. ಇನ್ನೂ ಊರು ಮುಟ್ಟಿಲ್ಲ, ಆಗ್ಲೇ ಫೋನು. ಮನೇಲಿದೀನಿ ಅಂತ ಪ್ರೂಫ್ ಮಾಡಾಕೆ ಮಿಕ್ಸಿ ಆನ್ ಮಾಡಿ ಕೇಳಿಸ್ಲಾ?'

'ಅದೆಲ್ಲ ಹಳೇ ಸ್ಟೈಲು, ನಾನು ಹಿಡನ್ ಕ್ಯಾಮೆರಾ ಫಿಕ್ಸ್ ಮಾಡಿ ಬಂದಿದೀನಿ, ನಂಗೆಲ್ಲ ಗೊತ್ತಾಗುತ್ತೆ. ನಾನಿಲ್ಲ ಅಂತ ನಿಮ್ ಹರಟೆ ಫ್ರೆಂಡ್ಸ್‌ನೆಲ್ಲ ಮನಿಗೆ ಕರೀಬೇಡಿ. ನೀವೂ ಹೊರಗಡೆ ಹೋಗಿ ರಾತ್ರಿ ಲೇಟಾಗಿ ಟೈಟಾಗಿ ಬರ್ಬೇಡಿ ಆಯ್ತಾ?'

'ಮತ್ತೆ ನೀನಿಲ್ಲ ಅನ್ನೋ ಸಂಭ್ರಮ ಹೆಂಗೆ ಆಚರಿಸೋದು?'

'ಸಂಭ್ರಮನಾ? ಬಂದ್ಮೇಲೆ ನೋಡ್ಕೋತೀನಿ... ಬೆಳಿಗ್ಗೆ ನಾನೇಳಿದ್ದು ಎಲ್ಲ ನೆನಪಿದೆ ತಾನೆ? ಗ್ಯಾಸ್‌ನೋನು ಬಂದ್ರೆ ಸಿಲಿಂಡರ್ ಇಸ್ಕೊಳಿ, ಹಾಲು ಬಿಸಿ ಮಾಡಿ, ಇಲ್ಲಾಂದ್ರೆ ಒಡೆದು ಹೋಗುತ್ತೆ. ರಾತ್ರಿಗೆ ಅನ್ನ ಮಾಡ್ಕಳಿ, ಕುಕ್ಕರ್‌ಗೆ ಒಂದು ಕಪ್ ಅಕ್ಕಿ, ಎರಡು ಕಪ್ ನೀರು... ನಾನಿಲ್ಲ ಅಂತ ಅಕ್ಕಪಕ್ಕದ ಮನೆಯೋರು ಯಾರೂ ತಿಂಡಿ ಕೊಡಲ್ಲ, ಕಾಯ್ಬೇಡಿ... ಮತ್ತೇನೇಳಿದ್ದೆ?'

'ಅಮ್ಮಾ ತಾಯಿ, ಅಲ್ಲಿ ಅಮ್ಮನ ಮನೇಲಿ ನಾಕು ದಿನ ಆರಾಮಾಗಿ ಇದ್ದು ಬಾ, ನನ್ ಬಗ್ಗೆ ತಲೆ ಕೆಡಿಸ್ಕಾಬೇಡ'.

'ಹ್ಞಾಂ ಮರೆತಿದ್ದೆ, ಬಟ್ಟೆಗಳನ್ನ ಒಣಗಾಕಿದ್ದೆ. ಹಸಿ ಇದ್ರೂ ಪರ್ವಾಗಿಲ್ಲ, ಚಡ್ಡಿ, ಪ್ಯಾಂಟ್‌ಗಳನ್ನು ಮಾತ್ರ ಒಳಕ್ಕೆ ತಂದು ಒಣಗಾಕಿ. ಎಲ್ಲ ಕಡೆ ಚಡ್ಡಿ ಕದೀತಿದಾರಂತೆ. ರಾಜಕೀಯದೋರು ಚಡ್ಡಿ ಸುಡೋ ಪ್ರೋಗ್ರಾಂ ಹಾಕ್ಕಂಡಿದಾರಂತೆ...'

'ಅಲ್ಲ, ಚಡ್ಡಿ ಕದೀತಾರೆ ಸರಿ, ಪ್ಯಾಂಟ್ ಯಾಕೆ ಒಳಕ್ಕೆ ತರ್ಲಿ?'

'ನಿಮ್ ತಲೆ, ಪ್ಯಾಂಟ್ ಕಟ್ ಮಾಡಿದ್ರೆ ಚಡ್ಡಿ ಆಗಲ್ವಾ? ಸುಡೋಕೆ ಎಂಥ ಚಡ್ಡಿ ಆದ್ರೇನು, ನೀವೊಳ್ಳೆ...'

ಫೋನ್ ಕಟ್ಟಾಯಿತು.

ದಿನದ ಟ್ವೀಟ್

ವಾಸ್ತವದ ದರ್ಶನ!

ಕರ್ನಾಟಕದಲ್ಲಿ ಚಡ್ಡಿ (ಸುಡುವ) ರಾಜಕೀಯ. ಕೇರಳದಲ್ಲಿ ಬಿರಿಯಾನಿ ಪ್ರತಿಭಟನೆ (ಕೆಟ್ಟ ಮಾರ್ಗದ ಪ್ರತಿಭಟನೆಯೇನಲ್ಲ!). ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಹಲವು ರಾಜ್ಯಗಳಲ್ಲಿ ರೆಸಾರ್ಟ್ ರಾಜಕೀಯ ಮತ್ತು ಶಾಸಕರಿಗೆ ವೇತನಸಹಿತ ರಜೆ. ಭಾರತದ ರೋಚಕ ಪ್ರಜಾಪ್ರಭುತ್ವದ ಸಂಪೂರ್ಣ ಪ್ರದರ್ಶನ!

ನೇಹಾ ಖನ್ನಾ, ಪತ್ರಕರ್ತೆ

ಕಿಡಿನುಡಿ

ಕರ್ನಾಟಕದಲ್ಲಿ ದೇಶದಲ್ಲೇ ಅತಿಹೆಚ್ಚು ಪ್ರಮಾಣದಲ್ಲಿ, ಅಂದರೆ ಶೇ 18ರಷ್ಟು ರಸ್ತೆ ತೆರಿಗೆಯನ್ನು ವಿಧಿಸಲಾಗುತ್ತಿದೆ. ಜೊತೆಗೆ ಟೋಲ್ ಅನ್ನೂ ಪಾವತಿಸಬೇಕಾಗಿದೆ. ಇದು ಸಂಪೂರ್ಣ ಅಸಮಂಜಸ. ಟೋಲ್ ಪಾವತಿಸಬೇಕೆಂದಾದರೆ ರಸ್ತೆ ತೆರಿಗೆಯನ್ನು ಕಡಿಮೆ ಮಾಡಲಿ. ಡಬಲ್ ತೆರಿಗೆಯನ್ನು ತಪ್ಪಿಸಲಿ.

ವಾಸುದೇವ್ ಕಾಮತ್, ಆರ್‌ಟಿಐ ಕಾರ್ಯಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 10-6-1997

• **ಕಂಠೀರವ ಕ್ರೀಡಾಂಗಣದಲ್ಲಿ ದಾಂದಲೆ**

ಬೆಂಗಳೂರು, ಜೂನ್ 9– ರಾಷ್ಟ್ರೀಯ ಕ್ರೀಡೆಗಳ ಆರಂಭೋತ್ಸವದ ಕಹಿ ನೆನಪು ಮಾಸುವ ಮೊದಲೇ ಇನ್ನೊಂದು ಅಹಿತಕರ ಘಟನೆ ರಾಜ್ಯ ಕ್ರೀಡಾರಂಗಕ್ಕೆ ಮಸಿ ಬಳಿಯಿತು. ಕಂಠೀರವ ಕ್ರೀಡಾಂಗಣದಲ್ಲಿ ಇಂದು ರಾತ್ರಿ ಕರ್ನಾಟಕ ರಿಲೆ ತಂಡದ ಅನರ್ಹತೆಯನ್ನು ಸಹಿಸದ ಪ್ರೇಕ್ಷಕರು ಕುರ್ಚಿ ಎಸೆದು ಗಲಾಟೆ ಮಾಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪ್ರೇಕ್ಷಕರು ರಾಜ್ಯಕ್ಕೆ ಕೆಟ್ಟ ಹೆಸರು ತಂದಂತೆಯೇ ಅಥ್ಲೆಟಿಕ್ಸ್ ಪ್ರೇಕ್ಷಕರು ಕ್ರೀಡಾಮನೋಭಾವಕ್ಕೆ ವಿರುದ್ಧವಾಗಿ ವರ್ತಿಸಿದರು. ದಿನದ ಕೊನೆಯ ಸ್ಪರ್ಧೆಯಾಗಿದ್ದ ಮಹಿಳೆಯರ 4x100 ಮೀಟರ್ಸ್ ರಿಲೆಯಲ್ಲಿ ನಾಲ್ಕನೇ ಸಾಲಿನಲ್ಲಿದ್ದ ಕರ್ನಾಟಕ ತಂಡದ ಮೊದಲ ಓಟಗಾರ್ತಿ ಸುಮನಾ ಎರಡು ತಪ್ಪುಗಳನ್ನೆಸಗಿದ್ದರಿಂದ ತಂಡವನ್ನು ಅನರ್ಹಗೊಳಿಸಲಾಯಿತು. ಇದು ಗಲಾಟೆಗೆ ಕಾರಣವಾಯಿತು.

• **ದಳ ಅಧ್ಯಕ್ಷತೆ: ಆತ್ಮಸಾಕ್ಷಿ ಮತಕ್ಕೆ ಸಂಪುಟ ಮನವಿ**

ಬೆಂಗಳೂರು, ಜೂನ್ 9– ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸುವಂತೆ ಇಂದು ಇಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದಲ್ಲಿ ನಡೆದ ಮಂತ್ರಿಮಂಡಲ ಸಭೆಯು ತೆಗೆದುಕೊಂಡ ನಿರ್ಣಯದ ಮೂಲಕ ಮತದಾರರಲ್ಲಿ ಮನವಿ ಮಾಡಿಕೊಂಡಿದೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಹಾಲಿ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಹಾಗೂ ಕಾರ್ಯಾಧ್ಯಕ್ಷ ಶರದ್ ಯಾದವ್ ಅವರ ನಡುವಿನ ಸ್ಪರ್ಧೆಯಲ್ಲಿ ಬಹಿರಂಗವಾಗಿ ಯಾರ ಪರ ಅಥವಾ ವಿರೋಧವಾಗಿ ಪ್ರಚಾರದಲ್ಲಿ ತೊಡಗಬಾರದು ಎಂದೂ ನಿರ್ಣಯ ತೆಗೆದುಕೊಳ್ಳಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 10-6-1972

• **ಸಮಾಜವಾದಿ ಹೋರಾಟಗಾರ ಶಾಂತವೇರಿ ಗೋಪಾಲ ಗೌಡರ ನಿಧನ**

ಬೆಂಗಳೂರು, ಜೂನ್ 9– ಕರ್ನಾಟಕದಲ್ಲಿ ಸಮಾಜವಾದವನ್ನು ಬೆಳೆಸಿದ ನಾಯಕ ಶ್ರೀ ಶಾಂತವೇರಿ ಗೋಪಾಲ ಗೌಡ ಅವರು ಇಂದು ಬೆಳಗ್ಗೆ 8.45ರ ಸಮಯದಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರು.

ರಕ್ತದ ಒತ್ತಡ ಹೆಚ್ಚಿ ಕಳೆದ ನವೆಂಬರ್ 23ರಂದು ಆಸ್ಪತ್ರೆಗೆ ಸೇರಿದ ಶ್ರೀಯುತರು ಆರೋಗ್ಯ ಚೇತರಿಸಿಕೊಳ್ಳದೆ, ಕಳೆದ ಕೆಲ ತಿಂಗಳಿಂದ ಅರೆಪ್ರಜ್ಞೆ ಹಾಗೂ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ದಿವಂಗತರಿಗೆ 49 ವರ್ಷ ವಯಸ್ಸಾಗಿತ್ತು. ಪತ್ನಿ, ತಾಯಿ, ಅಣ್ಣ ಹಾಗೂ ಇಬ್ಬರು ಗಂಡು ಮಕ್ಕಳಿದ್ದಾರೆ.

ಕಳೆದ ಸುಮಾರು 30 ವರ್ಷಗಳ ಕಾಲದಲ್ಲಿ ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ಪ್ರಭಾವ ಬೀರಿ ನೀತಿ-ನ್ಯಾಯ ನಿಷ್ಠೆಗೆ, ಪ್ರಾಮಾಣಿಕತೆಗೆ, ಅದರೊಡನೆ ಸರಳ-ಸೌಜನ್ಯಕ್ಕೆ ಅವರು ಹೆಸರಾದವರು.

• **ರಾಜ್ಯದಾದ್ಯಂತ ನಗರ, ರಸ್ತೆ ಹೆಸರು ಕನ್ನಡದಲ್ಲಿ ಬರೆಸಲು ಆದೇಶ**

ಬೆಂಗಳೂರು, ಜೂನ್ 9– ರಾಜ್ಯದಾದ್ಯಂತ ನಗರ, ಪಟ್ಟಣ, ಗ್ರಾಮಗಳು ಹಾಗೂ ರಸ್ತೆಗಳ ಹೆಸರುಗಳನ್ನು ಕನ್ನಡದಲ್ಲಿ ಬರೆಸಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವು ಸಂಪರ್ಕ ಮತ್ತು ನಿರ್ಮಾಣ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಆದೇಶ ನೀಡಿದೆ.

ಅಧಿಕೃತ ಭಾಷಾ ಅಭಿವೃದ್ಧಿಗೆ ಹಲವಾರು ಮಾರ್ಗಗಳನ್ನು ಸೂಚಿಸಿ ಕಳೆದ ವರ್ಷ ಸಮಿತಿಯೊಂದು ಸಲ್ಲಿಸಿದ ವರದಿಯ-ಶಿಫಾರಸುಗಳನ್ನು ಸರ್ಕಾರವು ಒಟ್ಟಿನಲ್ಲಿ ಒಪ್ಪಿಕೊಂಡಿದೆ.

ಸಂಗತ

ಸೌಖ್ಯಕ್ಕೆ ತೊಡಕಾಗದಿರಲಿ ಸಂಪ್ರದಾಯ

ಸಂಪ್ರದಾಯದ ನೆಪ ಹೂಡಿ ಗರ್ಭಿಣಿಯರ ತವರಿನ ಮೇಲೆ ಆರ್ಥಿಕ ಹಾಗೂ ಆರೈಕೆಯ ಹೊರೆ ಹೊರಿಸುವುದು ಎಷ್ಟು ಸರಿ?

• ಎಚ್.ಕೆ.ಶರತ್

ಅವಧಿಗೂ ಮುನ್ನವೇ ಜನಿಸಿದ ತನ್ನ ಮಗುವನ್ನು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ಮೇಲೆ ಒಂದಷ್ಟು ದಿನಗಳಾದರೂ ತನ್ನೊಂದಿಗೆ ಮನೆಯಲ್ಲಿ ಇರಿಸಿಕೊಳ್ಳುವ ಅಪೇಕ್ಷೆ ಸ್ನೇಹಿತನದ್ದಾಗಿತ್ತು. ಗ್ರಾಮೀಣ ಪ್ರದೇಶದಲ್ಲಿರುವ ಹೆಂಡತಿಯ ತವರು ಮನೆಗೆ ಕಳಿಸಿದ ನಂತರ ಮಗುವಿನ ಆರೋಗ್ಯದಲ್ಲಿ ಏರುಪೇರಾದರೆ ಏನು ಮಾಡುವುದು ಎನ್ನುವ ಆತಂಕ ಅವನಲ್ಲಿ ನೆಲೆಯೂರಿತ್ತು.

'ಸಂಪ್ರದಾಯದ ಪ್ರಕಾರ, ಹೆರಿಗೆಯ ನಂತರ ಬಾಣಂತಿ- ಮಗುವನ್ನು ತವರು ಮನೆಗೆ ಕಳಿಸಿಕೊಡಬೇಕು. ಹೀಗೆ ಮಾಡುವ ಬದಲು ನಮ್ಮ ಮನೆಗೆ ಕರೆದುಕೊಂಡು ಬಂದರೆ ಸುತ್ತಮುತ್ತಲಿನವರು ಏನೆಂದುಕೊಳ್ಳುತ್ತಾರೆ? ಯಾವುದೇ ಕಾರಣಕ್ಕೂ ಮನೆಗೆ ಕರೆದುಕೊಂಡು ಬರುವುದು ಬೇಡ' ಎಂಬ ನಿಲುವಿಗೆ ಸ್ನೇಹಿತನ ತಾಯಿ ಜೋತು ಬಿದ್ದಿದ್ದರು. ಬೇರೆ ದಾರಿ ಕಾಣದೆ, ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ಹೆಂಡತಿ- ಮಗುವನ್ನು ಹೆಂಡತಿಯ ತವರು ಮನೆಗೆ ಬಿಟ್ಟು ಬಂದ. ಇದಾದ ಒಂದು ವಾರಕ್ಕೆ ಮೊದಲೇ ನಿರೀಕ್ಷಿಸಿದಂತೆ ಮಗುವಿನ ಆರೋಗ್ಯದಲ್ಲಿ ಏರುಪೇರಾಯಿತು. ಹೆಂಡತಿ ಮನೆಯಿಂದ ಇಪ್ಪತ್ತು ಕಿಲೊಮೀಟರ್ ದೂರದಲ್ಲಿದ್ದ ತಾಲ್ಲೂಕು ಕೇಂದ್ರದ ಆಸ್ಪತ್ರೆಗೆ ಮೊದಲು ಮಗುವನ್ನು ದಾಖಲಿಸಲಾಯಿತು. ಅಲ್ಲಿ ಸೂಕ್ತ ಚಿಕಿತ್ಸೆ ದೊರೆಯುವ ಭರವಸೆ ದೊರೆಯದೇ ಹೋದಾಗ ಕೊನೆಗೆ ಸ್ನೇಹಿತ ತಾನು ನೆಲೆಸಿರುವ ನಗರದ ಸುಸಜ್ಜಿತ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ. 'ಮಗುವಿನ ಪ್ರಾಣಕ್ಕಿಂತ ನಿಮಗೆ ನಿಮ್ಮ ಸಂಪ್ರದಾಯವೇ ಮುಖ್ಯವಾಯಿತಾ' ಎಂಬ ಪ್ರಶ್ನೆಯನ್ನು ತಾಯಿಯ ಮುಂದಿರಿಸಿ, ಈಗಲಾದರೂ ಪರಿಸ್ಥಿತಿಯ ತೀವ್ರತೆ ಅರ್ಥ ಮಾಡಿಕೊಳ್ಳಿ ಎಂದು ವಿನಂತಿಸಿದ. ಕೊನೆಗೂ ಮಗುವಿನ ಆರೋಗ್ಯದಲ್ಲಿ ಚೇತರಿಕೆಯಾಯಿತು. ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ನಂತರ ಸ್ನೇಹಿತನ ಹೆಂಡತಿ- ಮಗು ತವರು ಮನೆ ಸೇರಿದ್ದಾರೆ.

ಮದುವೆ ನಂತರ ದಂಪತಿ ಯಾರೊಂದಿಗೆ ನೆಲೆಸಿರಬೇಕು? ಗರ್ಭಿಣಿಯ ಆರೈಕೆಯನ್ನು ಯಾರು ನೋಡಿಕೊಳ್ಳಬೇಕು ಮತ್ತು ಎಲ್ಲಿರಬೇಕು? ಹೆರಿಗೆ ನಂತರ ಬಾಣಂತಿ- ಮಗು ಯಾರ ಮನೆಯಲ್ಲಿರಬೇಕು?... ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಮಾನದಂಡವಾಗುವುದು ಸಂಪ್ರದಾಯವೋ ಅಥವಾ ಸೌಲಭ್ಯಗಳ ಲಭ್ಯತೆಯೋ?

ಮೇಲೆ ಉಲ್ಲೇಖಿಸಿದ ಸ್ನೇಹಿತನ ಮನೆಯವರ ಹಾಗೆ ಬಹುತೇಕರು ಸಂಪ್ರದಾಯದ ಮೊರೆ ಹೋಗುವುದು ಕಣ್ಣೆದುರಿನ ವಾಸ್ತವವೇ ಆಗಿದೆ. ಸೌಲಭ್ಯಗಳ ಲಭ್ಯತೆಯನ್ನು ಗಣನೆಗೆ ತೆಗೆದುಕೊಳ್ಳದೆ ಸಂಪ್ರದಾಯದ ನೆಪ ಹೂಡಿ ಹೆಣ್ಣು ಮಕ್ಕಳ ಪೋಷಕರ ಮೇಲೆ ಆರ್ಥಿಕ ಹಾಗೂ ಆರೈಕೆಯ ಹೊರೆ ಹೊರಿಸುವುದು ಈಗಲೂ ಮುಂದುವರಿದಿದೆ. ಇಂತಹದ್ದೊಂದು ಪರಿಪಾಟ ಜಾರಿಯಲ್ಲಿರುವ ಕಾರಣಕ್ಕೆ ತಾಯಿ ಇಲ್ಲದ ಹೆಣ್ಣು ಮಕ್ಕಳು ಅಗಾಧ ನೋವು, ಅವಮಾನ, ತಳಮಳ ಅನುಭವಿಸಬೇಕಾದ ಸಂದರ್ಭಗಳು ಎದುರಾಗುತ್ತಲೇ ಇರುತ್ತವೆ. ಎಷ್ಟೋ ಮದುವೆ ಮಾತುಕತೆ ಇದೇ ಕಾರಣಕ್ಕೆ ಮುರಿದು ಬೀಳುವುದೂ ಇದೆ.

ಯುವತಿ ಹೆರಿಗೆಗೂ ಮುನ್ನ ಮತ್ತು ನಂತರ ಎಲ್ಲಿರಬೇಕು ಎಂಬ ಪ್ರಶ್ನೆಗೆ, ಎಲ್ಲಿ ಆರೈಕೆ ಮಾಡಲು ಜನ ಮತ್ತು ಅಗತ್ಯ ಸೌಲಭ್ಯಗಳಿವೆಯೋ ಅಲ್ಲಿ ಎಂಬ ಸಹಜ ಉತ್ತರ ಕಂಡುಕೊಳ್ಳುವಂತಹ ಮನಃಸ್ಥಿತಿ ರೂಪುಗೊಳ್ಳಬೇಕಲ್ಲವೇ? ಮೊದಲ ಹೆರಿಗೆಯ ಜವಾಬ್ದಾರಿ ಯುವತಿಯ ಪೋಷಕರದ್ದು ಎಂಬ ಕಾರಣಕ್ಕೆ ವೈದ್ಯಕೀಯ ಸೌಲಭ್ಯಗಳೂ ಲಭ್ಯವಿರದ ಊರಾದರೂ ಸರಿ, ಅಲ್ಲಿಯೇ ಹೆರಿಗೆ ಮಾಡಿಸಬೇಕೆಂಬ ಜಿದ್ದಿಗೆ ಬೀಳುವ ಸಂಪ್ರದಾಯವಾದಿಗಳು ಕಾಣಸಿಗುವುದು ಅಪರೂಪವೇನಲ್ಲ. ಹುಡುಗ ಮತ್ತವನ ತಂದೆ- ತಾಯಿ ನೆಲೆಸಿರುವ ಮನೆಯಲ್ಲಿ ಬಾಣಂತಿ- ಮಗುವಿನ ಆರೈಕೆಗೆ ಬೇಕಾದ ಸಕಲ ಸೌಲಭ್ಯಗಳಿದ್ದೂ ಸುಸಜ್ಜಿತ ಆಸ್ಪತ್ರೆ ಕೂಗಳತೆಯ ದೂರದಲ್ಲೇ ಇದ್ದರೂ ಗರ್ಭಿಣಿಯನ್ನು ಆಕೆಯ ತವರು ಮನೆಗೆ ದೂಡುವುದು ಕ್ರೌರ್ಯವಲ್ಲವೇ? ಸಂಪ್ರದಾಯದ ಹೆಸರಿನಲ್ಲಿ ಇಂತಹ ಕ್ರೌರ್ಯವೇ ಸಹಜ ಪ್ರಕ್ರಿಯೆಯಾಗಬೇಕೆ?

ಒಂದೆಡೆ ಹೆರಿಗೆಯಾದ ನಂತರ ತವರು ಮನೆ ಸೇರುವ ಮಹಿಳೆ, ಮಗುವಿನ ಆರೈಕೆಗೆ ತನ್ನೆಲ್ಲ ಸಮಯ ಮೀಸಲಿರಿಸಿದರೆ, ಮತ್ತೊಂದೆಡೆ, ಮಗುವಿನ ತಂದೆ ಎನಿಸಿಕೊಂಡವನಿಗೆ ಇದು ಮದುವೆ ನಂತರ ಒಂದಷ್ಟು ತಿಂಗಳುಗಳ ಕಾಲ ಆರಾಮಾಗಿರಲು ಸಿಕ್ಕ ಸದವಕಾಶವಾಗಿ ತೋರುವುದು ಸಹಜವೇ ಆಗಿರುವ ಸಮಾಜ ನಮ್ಮದಲ್ಲವೇ?

ಅನಗತ್ಯ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗುವ ಜೊತೆಗೆ ಹೆಣ್ಣು ಮಕ್ಕಳೆಡೆಗೆ ತಾತ್ಸಾರ ಮೂಡಲು ಕಾರಣವಾಗುವ ಇಂತಹ ನಡವಳಿಕೆಗಳಿಗೆ ಸಂಪ್ರದಾಯದ ಮುಸುಕು ತೊಡಿಸಿ, ಇನ್ನೂ ಎಷ್ಟು ದಿನ ಸಹಜವೆಂದೇ ಸ್ವೀಕರಿಸಬೇಕು? ಕೆಲ ಸಂದರ್ಭಗಳಲ್ಲಿ ಗರ್ಭಿಣಿ ಮತ್ತು ಮಗುವಿನ ಜೀವವನ್ನೇ ಪಣಕ್ಕೊಡ್ಡುವ ಇಂತಹ ಧೋರಣೆಗಳ ವಿರುದ್ಧ ಜಾಗೃತಿ ಮೂಡಿಸುವುದು ಕೂಡ ಆಳುವವರ ಆದ್ಯತೆಯಾಗಬೇಕಲ್ಲವೇ? ಇಂತಹ ಸಂಪ್ರದಾಯಗಳನ್ನೇ ಸನಾತನ ಮೌಲ್ಯವೆಂದು ಪರಿಭಾವಿಸಿ, ಅವುಗಳ ಮುಂದುವರಿಕೆಗೆ ತಾವು ಬದ್ಧರಾಗಿದ್ದೇವೆಂದು ಬಿಂಬಿಸಿಕೊಳ್ಳುವಲ್ಲಿ ಇನ್ನಿಲ್ಲದ ಉತ್ಸಾಹ ತೋರುತ್ತಿರುವವರ ದೃಷ್ಟಿಯು ಸಂಪ್ರದಾಯಗಳ ತೆಕ್ಕೆಗೆ ಸಿಲುಕಿ ನರಳುವವರತ್ತ ಹರಿಯುವುದೇ?

ಶಾಲಾ ಪಠ್ಯಪುಸ್ತಕಗಳ ಪುನರ್‌ಪರಿಷ್ಕರಣೆ ವೇಳೆ ಸೇರಿಸಲಾದ ಪಠ್ಯವೊಂದು ಹೆಣ್ಣನ್ನು ಬಿಂಬಿಸುವ ರೀತಿ ಗಮನಿಸಿದರೂ ಸಾಕು, ಆಳುವವರ ಆದ್ಯತೆ ಯಾವ ಕಡೆ ವಾಲತೊಡಗಿದೆ ಎಂಬುದಕ್ಕೆ ಪುರಾವೆ ದೊರೆಯಲಿದೆ.

ವಾಚಕರ ವಾಣಿ

ಕ್ರೀಡಾ ಸಂಸ್ಥೆಗಳಿಂದ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ

'ಭಾರತದ ಕ್ರೀಡೆಗೆ ಹಿತಾಸಕ್ತಿ ಸಂಘರ್ಷ ಎಂಬುದು ದೊಡ್ಡ ಶಾಪ' ಎಂಬ, ನಿವೃತ್ತ ನ್ಯಾಯಮೂರ್ತಿ ಹಾಗೂ ಭಾರತ ಟೇಬಲ್ ಟೆನಿಸ್ ಫೆಡರೇಷನ್‌ನಲ್ಲಿ ಆಡಳಿತ ಸುಧಾರಣೆ ಮತ್ತು ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸಲು ದೆಹಲಿ ಹೈಕೋರ್ಟ್ ನೇಮಕ ಮಾಡಿರುವ ಆಡಳಿತ ಸಮಿತಿ (ಸಿಒಎ) ಮುಖ್ಯಸ್ಥೆ ಗೀತಾ ಮಿತ್ತಲ್ ಅವರ ಮಾತು ಕ್ರೀಡಾ ಕ್ಷೇತ್ರದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಬೆರಳು ಮಾಡಿ ತೋರಿಸುವಂತಿದೆ. 'ಕ್ರೀಡೆಯೊಳಗಣ ಪೀಡೆಗೆ ಪರಿಹಾರ ಸಿಒಎ' ಎಂಬ ಗಿರೀಶ್ ದೊಡ್ಡಮನಿ ಅವರ ಲೇಖನವೂ (ಪ್ರ.ವಾ., ಜೂನ್ 8) ಫೆಡರೇಷನ್‌ಗಳ ಜವಾಬ್ದಾರಿಯನ್ನು ಪೂರಕವಾಗಿ ನೆನಪಿಸುವಂತಿದೆ.

ಫುಟ್‌ಬಾಲ್ ಹಾಗೂ ಹಾಕಿ ಫೆಡರೇಷನ್‌ಗಳಲ್ಲಿ ನಡೆದ ಅವಾಂತರಗಳನ್ನು ಗಮನಿಸಿದ ನ್ಯಾಯಾಲಯವು ಫೆಡರೇಷನ್‌ಗಳ ನಿರ್ಲಜ್ಜ ನಿಯಮಗಳಿಗೆ ಕಡಿವಾಣ ಹಾಕಲು ಸಿಒಎ ನೇಮಿಸಬೇಕಾಯಿತು. ಯಾವುದೇ ಮೂಲ ಸೌಲಭ್ಯಗಳಿಲ್ಲದ ಕುಗ್ರಾಮಗಳ ಅಥವಾ ಪಟ್ಟಣ ಪ್ರದೇಶದ ಪ್ರತಿಭೆಗಳನ್ನು ಹೆಕ್ಕಿ ತೆಗೆದು, ನಿರ್ಲಕ್ಷಿತ ಕ್ರೀಡಾ ಕ್ಷೇತ್ರವನ್ನು ಪೋಷಿಸಬೇಕಾದ ಕ್ರೀಡಾ ಸಂಸ್ಥೆಗಳು ಸ್ವಜನಪಕ್ಷಪಾತ, ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುತ್ತಿವೆ. ಈ ಮೂಲಕ ಕ್ರೀಡಾ ಕ್ಷೇತ್ರದ ಮೇಲೆ ಚಪ್ಪಡಿ ಎಳೆಯಲು ಹೊರಟಿವೆ. ಪ್ರಧಾನ ಮಂತ್ರಿ ಅವರ 'ಖೇಲೊ ಇಂಡಿಯಾ' ಕನಸು ಸಾಕಾರಗೊಳ್ಳಬೇಕಾದರೆ, ಕ್ರೀಡಾ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಪ್ರತಿಭೆಗಳನ್ನು ಮಾತ್ರ ಫೆಡರೇಷನ್‌ಗಳಿಗೆ ಆಯ್ಕೆ ಮಾಡಬೇಕಾಗಿದೆ. ಹಾಗಾದಾಗ ಮಾತ್ರ ಕ್ರೀಡೆಯ ಅಭಿವೃದ್ಧಿ ಸಾಧ್ಯ.

ಚಿ.ಉಮಾ ಶಂಕರ್, ಬೆಂಗಳೂರು

ಕತ್ತೆ ಸಾಕಣೆ: ಸ್ವ ಉದ್ಯೋಗಕ್ಕೆ ಶುಕ್ರದೆಸೆ?

ರಾಜ್ಯದ ಮೊದಲ ಕತ್ತೆ ಸಾಕಣೆ ಕೇಂದ್ರವು ಬಂಟ್ವಾಳ ತಾಲ್ಲೂಕಿನಲ್ಲಿ ಆರಂಭವಾಗಿದೆ. ಕತ್ತೆಯು ಏನಿದ್ದರೂ ಗಂಟುಮೂಟೆ ಹೊರಲಿಕ್ಕಷ್ಟೇ ಲಾಯಕ್ಕು ಎಂಬ ಭಾವನೆ ಜನರಲ್ಲಿದೆ. ಆದರೆ ಇದೀಗ ಅದರ ಹಾಲು ಬಹುಮುಖ್ಯವಾಗಿ ಮಧುಮೇಹ ನಿಯಂತ್ರಣ, ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುಣ ಹಾಗೂ ವಿಶೇಷವಾಗಿ ಸೌಂದರ್ಯವರ್ಧಕವಾಗಿ ಬಳಕೆಯಾಗುತ್ತದೆ ಎಂಬ ವಿಷಯ ತಿಳಿದು ಸಖೇದಾಶ್ಚರ್ಯವಾಗಿದೆ. ಜತೆಗೆ ಕತ್ತೆ ಎನ್ನುವ ನಮ್ಮ ನಡುವಿನ ನಿರುಪದ್ರವಿ ಪ್ರಾಣಿಗೂ ಶುಕ್ರದೆಸೆ ಬಂದಿರುವುದು ಮತ್ತು ಅದರ ಹಾಲು ಹೈನು ಉದ್ಯಮದ ನಮ್ಮ ಹಾಲಿನ ದರಕ್ಕಿಂತ ಎಷ್ಟೋ ಪಟ್ಟು ಜಾಸ್ತಿ ಇರುವುದು ಮುಂದಿನ ದಿನಗಳಲ್ಲಿ ಬಹು ದೊಡ್ಡ ಸ್ವ ಉದ್ಯೋಗಕ್ಕೆ ದಾರಿ ಆಗುವುದರಲ್ಲಿ ಸಂದೇಹವಿಲ್ಲ ಎನಿಸುತ್ತದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಗ್ರೀನ್ ಹೈವೆ: ಮರೆತ ಆಶ್ವಾಸನೆ

ರಾಷ್ಟ್ರೀಯ ಹೆದ್ದಾರಿ 167, ಭಾರತದಲ್ಲಿ ಮಹತ್ವದ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಇದು ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಮೂಲಕ ಹಾದುಹೋಗುತ್ತದೆ. ಸುಮಾರು 485 ಕಿಲೊಮೀಟರ್‌ನಷ್ಟು ವಿಸ್ತಾರ ಹೊಂದಿದ್ದು, ಇದು ಹಾದು ಹೋಗುವ ಪ್ರದೇಶವು ಬರೀ ಬರಡು ಭೂಮಿಯಿಂದ ಕೂಡಿದೆ. ಆದ್ದರಿಂದ ಈ ಹೆದ್ದಾರಿಯನ್ನು ಗ್ರೀನ್ ಹೈವೆಯಾಗಿ ಪರಿವರ್ತಿಸಿದಲ್ಲಿ ವಾತಾವರಣದಲ್ಲಿ ಕೊಂಚ ಮಟ್ಟಿಗೆ ಸುಧಾರಣೆ ಆಗುತ್ತದೆ ಎಂಬ ಕಾರಣಕ್ಕೆ ಗ್ರೀನ್ ಹೈವೆ ನೀತಿಯಡಿ ಇದನ್ನು ಮೇಲ್ದರ್ಜೆಗೆ ಏರಿಸುವುದಾಗಿ ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದರು.

ಈ ಕಾರ್ಯವನ್ನು ಒಂದೇ ವರ್ಷದಲ್ಲಿ ಕೈಗೊಳ್ಳುವುದಾಗಿ ಮೂರು ವರ್ಷಗಳ ಹಿಂದೆ ಅವರು ನೀಡಿದ್ದ ಆಶ್ವಾಸನೆ ಈವರೆಗೂ ಈಡೇರಿಲ್ಲ. ಇಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಲ್ಲಿ ಮಾತ್ರ ಪರಿಸರ ದಿನಾಚರಣೆ, ವನ ಮಹೋತ್ಸವದಂತಹ ಕಾರ್ಯಕ್ರಮಗಳಿಗೆ ಅರ್ಥ ಬರುತ್ತದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

...ಹಾಗೆಂದು ಕೇಳಿಬಿಟ್ಟರೆ?!

ಇದೀಗ ಶಾಲೆಗಳು ಆರಂಭಗೊಂಡು ಶೈಕ್ಷಣಿಕ ಚಟುವಟಿಕೆಗಳು ಚುರುಕುಗೊಳ್ಳುತ್ತಿವೆ. ಶಿಕ್ಷಕರಾದ ನಾವು ಸಾಮಾನ್ಯವಾಗಿ ಯಾವುದೇ ಪಾಠ, ಪದ್ಯ, ನಾಟಕಗಳ ಬಗ್ಗೆ ಬೋಧನೆ ಆರಂಭಕ್ಕೂ ಮುನ್ನ ಮಕ್ಕಳಲ್ಲಿ ಆಸಕ್ತಿ ಉದ್ದೀಪಿಸಲು ಪಠ್ಯ ಮತ್ತು ಲೇಖಕರ ಬಗೆಗೆ ಸ್ವಲ್ಪ ಹೆಚ್ಚಾಗೇ ಪರಿಚಯ ನೀಡುತ್ತೇವೆ.

ಆದರೆ ಈ ಬಾರಿ ಪಠ್ಯಪುಸ್ತಕ ಪರಿಷ್ಕರಣೆಯ ಗಲಾಟೆಯೆಲ್ಲವನ್ನೂ ಗಮನಿಸಿರುವ ಯಾರಾದರೊಬ್ಬ ವಿದ್ಯಾರ್ಥಿಯು ಎದ್ದುನಿಂತು 'ಬಿಡಿ ಸಾರ್, ಈ ಪುಸ್ತಕ ರಚನೆಯಲ್ಲಿ ನಡೆದಿರುವ ರಾಜಕೀಯವನ್ನು ನೋಡಿ ನೋಡಿ ಸಾಕಾಗಿದೆ' ಎಂದುಬಿಟ್ಟರೆ ಏನು ಗತಿ ಎಂದು ಆತಂಕವಾಗುತ್ತಿದೆ.

ಜೆ.ಬಿ.ಮಂಜುನಾಥ, ಪಾಂಡವಪುರ

ಕೆಲಸ ಅಧಿಕ, ವೇತನ ಅಲ್ಪ

ಸರ್ಕಾರವು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದೆ. ಇವರು ಕಾಯಂ ಶಿಕ್ಷಕರಂತೆ ಶಾಲಾ ಅವಧಿ ಮುಗಿಯುವವರೆಗೂ ಕಾರ್ಯ ನಿರ್ವಹಿಸುತ್ತಾರೆ. ಬೋಧನಾ ಚಟುವಟಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ. ಕೆಲವು ದಿನಗಳ ಹಿಂದೆ ಇವರಿಗೆ ತರಬೇತಿ ನೀಡಲು ಸಹ ಆದೇಶ ಹೊರಡಿಸಲಾಗಿದೆ. ಹೆಚ್ಚುಕಮ್ಮಿ ದಿನದ ಸಮಯವನ್ನು ಅವರು ಅಲ್ಲಿಯೇ ಕಳೆಯುತ್ತಾರೆ. ಬೇರೆ ಕೆಲಸದಲ್ಲಿ ತೊಡಗಿಸಿಕೊಳ್ಳಲು ಆಗುವುದಿಲ್ಲ. ಆದರೆ ಸರ್ಕಾರ ಇವರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ₹ 7,500, ಪ್ರೌಢಶಾಲಾ ಶಿಕ್ಷಕರಿಗೆ ₹ 8,000 ವೇತನವನ್ನು ಮಾತ್ರ ನೀಡುತ್ತದೆ. ಇಂದಿನ ಬೆಲೆ ಏರಿಕೆಯ ದಿನಮಾನದಲ್ಲಿ ಈ ಹಣ ಏನೇನೂ ಸಾಲದು. ಇವರಲ್ಲಿನ ಒಗ್ಗಟ್ಟಿನ ಕೊರತೆಯಿಂದ ಇದನ್ನು ಸರ್ಕಾರದ ಗಮನಕ್ಕೆ ತರಲು ಸಹ ಆಗುತ್ತಿಲ್ಲ. ಇವರ ವೇತನ ಹೆಚ್ಚಳದ ಬಗ್ಗೆ ಸರ್ಕಾರ ಗಮನಹರಿಸಬೇಕು.

ಸಣ್ಣಮಾರಪ್ಪ, ಚಂಗಾವರ, ಶಿರಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

• ಶ್ರೀಗಿರೀಶ್ ಜಾಲಿಹಾಳ್, ಪೂನಂ ಅಗರ್‌ವಾಲ್, ಸೋಮೇಶ್ ಝಾ

ಚುನಾವಣಾ ಬಾಂಡ್

ಮುಚ್ಚಿದ ಲಕೋಟೆಯ ಮಿಥ್ಯೆ

ಕಂಪನಿಗಳು ಮತ್ತು ವ್ಯಕ್ತಿಗಳು ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ಗೋಪ್ಯವಾಗಿ ನೀಡುವ ದೇಣಿಗೆ 19 ರಾಜಕೀಯ ಪಕ್ಷಗಳಿಗೆ ಮಾತ್ರ ಸಿಕ್ಕಿದೆ. ಭಾರತದಲ್ಲಿ 2,800ಕ್ಕೂ ಹೆಚ್ಚು ಪಕ್ಷಗಳಿವೆ. ಮೂರು ವರ್ಷಗಳಲ್ಲಿ ಬಾಂಡ್ ಮೂಲಕ ಸಂಗ್ರಹವಾದ ₹6,201 ಕೋಟಿಯಲ್ಲಿ ಶೇ 68ರಷ್ಟು ಆಡಳಿತಾರೂಢ ಬಿಜೆಪಿಗೆ ಸಿಕ್ಕಿದೆ ಎಂಬುದನ್ನು ಸರಣಿ ಸಂದರ್ಶನಗಳು ಮತ್ತು ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಮೂಲಕ ರಿಪೋರ್ಟರ್ಸ್ ಕಲೆಕ್ಟಿವ್ ಕಂಡುಕೊಂಡಿದೆ.

ದೇಶದ 105 ರಾಜಕೀಯ ಪಕ್ಷಗಳು ಚುನಾವಣಾ ಬಾಂಡ್‌ನ ದೇಣಿಗೆಗಳನ್ನು ನಗದೀಕರಿಸಿಕೊಂಡಿವೆ ಎಂಬ ಭಾವನೆಗೆ ಇದು ವಿರುದ್ಧವಾಗಿದೆ. ಹಾಗೆಯೇ, ಬಾಂಡ್ ವಿಧಾನವು ಅತ್ಯಂತ ದಕ್ಷ ಎಂಬ ಬಿಜೆಪಿಯ ಪ್ರತಿಪಾದನೆಯನ್ನೂ ಇದು ಸುಳ್ಳಾಗಿಸಿದೆ.

ಕಂಪನಿಗಳು ಮತ್ತು ವ್ಯಕ್ತಿಗಳು ಅನಾಮಧೇಯವಾಗಿ ಯಾವುದೇ ಮೊತ್ತವನ್ನು ರಾಜಕೀಯ ಪಕ್ಷಗಳಿಗೆ ಬಾಂಡ್ ಮೂಲಕ ನೀಡಬಹುದು. ಮೊತ್ತಕ್ಕೆ ಮಿತಿ ಎಂಬುದೇ ಇಲ್ಲ. ಚುನಾವಣಾ ಬಾಂಡ್‌ನ ಸಿಂಧುತ್ವವನ್ನು ಪ್ರಶ್ನಿಸಿ 2017 ಮತ್ತು 2018ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ. ಯಾವ ಪಕ್ಷಕ್ಕೆ ಚುನಾವಣಾ ಬಾಂಡ್ ಮೂಲಕ ಎಷ್ಟು ದೇಣಿಗೆ ಸಿಕ್ಕಿದೆ ಎಂಬ ಮಾಹಿತಿಯನ್ನು ಒದಗಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ 2019ರ ಏಪ್ರಿಲ್ 12ರಂದು ಸೂಚಿಸಿತ್ತು. ಮುಚ್ಚಿದ ಲಕೋಟೆಯಲ್ಲಿ ಈ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್ ಹೇಳಿತ್ತು.

ನ್ಯಾಯಾಲಯದ ಪ್ರಶ್ನೆಗೆ ಉತ್ತರಿಸುವಂತೆ ಆಯೋಗವು ರಾಜಕೀಯ ಪಕ್ಷಗಳನ್ನು ಕೇಳಿಕೊಂಡಿತ್ತು. ಆಯೋಗದಲ್ಲಿ ನೋಂದಣಿ ಆಗಿರುವ 2,800ಕ್ಕೂ ಹೆಚ್ಚು ಪಕ್ಷಗಳ ಪೈಕಿ 105 ಪಕ್ಷಗಳು ಪ್ರತಿಕ್ರಿಯೆ ನೀಡಿದ್ದವು. ಬಾಂಡ್ ಮೂಲಕ ದೇಣಿಗೆ ಪಡೆದಿದೆಯೇ ಇಲ್ಲವೇ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳದೆಯೇ ಎಲ್ಲ ಪಕ್ಷಗಳಿಂದಲೂ ಮಾಹಿತಿ ಕೇಳಿದ್ದನ್ನು ಕೆಲವು ಪಕ್ಷಗಳು ಪ್ರಶ್ನಿಸಿದ್ದವು ಕೂಡ.

ರಾಜಕೀಯ ಪಕ್ಷಗಳು ನೀಡಿದ ಪ್ರತಿಕ್ರಿಯೆಯನ್ನು ಆಯೋಗವು ಸುಪ್ರೀಂ ಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ 2020ರ ಫೆಬ್ರುವರಿಯಲ್ಲಿ ಸಲ್ಲಿಸಿದೆ. ಈ ಪಟ್ಟಿಯಲ್ಲಿ ಏಳು ರಾಷ್ಟ್ರೀಯ ಪಕ್ಷಗಳು, ರಾಷ್ಟ್ರೀಯ ಪಕ್ಷಗಳ ಮೂರು ರಾಜ್ಯ ಘಟಕಗಳು, ರಾಜ್ಯ ಮಟ್ಟದ 20 ಪಕ್ಷಗಳು, 70 ನೋಂದಾಯಿತ, ಮಾನ್ಯತೆ ಇಲ್ಲದ ಪಕ್ಷಗಳು (ನಿಶ್ಚಿತ ಚುನಾವಣಾ ಚಿಹ್ನೆ ಇಲ್ಲದ ಆದರೆ ಸ್ಪರ್ಧೆಗೆ ಅರ್ಹತೆ ಇರುವ ಪಕ್ಷಗಳು) ಮತ್ತು ಐದು ಗುರುತಿಸಿಲ್ಲದ ಪಕ್ಷಗಳು ಮಾಹಿತಿ ನೀಡಿವೆ.

ದೂರುದಾರರು ಪದೇ ಪದೇ ನೆನಪು ಮಾಡಿದ್ದರೂ ಸುಪ್ರೀಂ ಕೋರ್ಟ್ ಈ ಪ್ರಕರಣದ ವಿಚಾರಣೆ ನಡೆಸಿ ಎರಡು ವರ್ಷಗಳಾಗಿವೆ. ನ್ಯಾಯಾಲಯವು ಮುಚ್ಚಿದ ಲಕೋಟೆಯನ್ನು ತೆರೆದೇ ಇಲ್ಲ.

17 ಪಕ್ಷಗಳಿಗೆ ಮಾತ್ರ ಬಾಂಡ್ ದೇಣಿಗೆ

ಆಯೋಗಕ್ಕೆ ಮಾಹಿತಿ ನೀಡಿದ ನೋಂದಿತ ಮತ್ತು ಮಾನ್ಯತೆ ಇಲ್ಲದ 70 ಪಕ್ಷಗಳ ಪೈಕಿ 54 ಪಕ್ಷಗಳ ಮುಖ್ಯಸ್ಥರ ಜತೆಗೆ ಸಂದರ್ಶನ, ಪಕ್ಷಗಳು ಬರೆದ ಪತ್ರಗಳ ವಿಶ್ಲೇಷಣೆ ಮತ್ತು ರಾಜಕೀಯ ಪಕ್ಷಗಳ ವಾರ್ಷಿಕ ಲೆಕ್ಕ ಪರಿಶೋಧನೆ ವರದಿಯ ದತ್ತಾಂಶಗಳನ್ನು ಪಡೆದುಕೊಂಡು ರಿಪೋರ್ಟರ್ಸ್ ಕಲೆಕ್ಟಿವ್ ವಿಶ್ಲೇಷಣೆ ನಡೆಸಿದೆ.

ಮುಚ್ಚಿದ ಲಕೋಟೆಯಲ್ಲಿ ಮಾಹಿತಿ ಕೊಟ್ಟ 105 ಪಕ್ಷಗಳ ಪೈಕಿ 17 ಪಕ್ಷಗಳು ಮಾತ್ರ ಬಾಂಡ್ ಮೂಲಕ ದೇಣಿಗೆ ಪಡೆದಿವೆ.

2017–18ರಿಂದ 2019–20ರ ನಡುವಣ ಅವಧಿಯಲ್ಲಿ, ಈ 17 ಪಕ್ಷಗಳು ಪಡೆದ ದೇಣಿಗೆಯ ಪೈಕಿ ಬಿಜೆಪಿಯ ಪಾಲು ಶೇ 67.9ರಷ್ಟು ಅಥವಾ ₹4,215.89 ಕೋಟಿ. ಕಾಂಗ್ರೆಸ್ ಎರಡನೇ ಸ್ಥಾನದಲ್ಲಿದ್ದರೂ ಪಡೆದ ದೇಣಿಗೆ ಪ್ರಮಾಣ ಮಾತ್ರ ಅತ್ಯಲ್ಪ. ಈ ಪಕ್ಷಕ್ಕೆ ₹706.12 ಕೋಟಿ ಅಥವಾ ಒಟ್ಟು ದೇಣಿಗೆಯ ಶೇ 11.3ರಷ್ಟು ಸಿಕ್ಕಿದೆ.

ಮೂರನೇ ಸ್ಥಾನದಲ್ಲಿರುವ ಬಿಜು ಜನತಾ ದಳಕ್ಕೆ ಶೇ 4.2ರಷ್ಟು ಅಥವಾ ₹264 ಕೋಟಿ ದೊರೆತಿದೆ. ಇತರ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪಕ್ಷಗಳು ಉಳಿದ ಶೇ 16.6ರಷ್ಟು ಅಥವಾ ₹1,106 ಕೋಟಿಯನ್ನು ಪಡೆದುಕೊಂಡಿವೆ. ಬಿಜೆಪಿ, ಕಾಂಗ್ರೆಸ್, ಬಿಜೆಡಿಗೆ ಒಟ್ಟು ದೇಣಿಗೆಯ ಶೇ 83.4ರಷ್ಟು ದೊರೆತಿದೆ.

‘ಕಂಡ–ಕಂಡ ಪಕ್ಷಕ್ಕೆಲ್ಲಾ ನೋಟಿಸ್’

ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆಯಲು ಹಲವು ನಿಯಮಗಳನ್ನು ರೂಪಿಸಲಾಗಿದೆ. ಪಕ್ಷಗಳು ನೋಂದಣಿಯಾಗಿರಬೇಕು ಮತ್ತು ಅವುಗಳಿಗೆ ಪ್ರತ್ಯೇಕ ಚಿಹ್ನೆ ಇರಬೇಕು ಎಂಬುದು ಅಂತಹ ನಿಯಮಗಳಲ್ಲಿ ಒಂದು. ಜತೆಗೆ ಎಸ್‌ಬಿಐನಲ್ಲಿ ಖಾತೆ ಇರಬೇಕು ಎಂಬುದು ಇನ್ನೊಂದು ಷರತ್ತು. ಇವುಗಳನ್ನು ಪೂರೈಸದ ಪಕ್ಷಗಳು, ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆಯಲು ಅರ್ಹವಾಗುವುದಿಲ್ಲ. ಆದರೆ ಈ ರೀತಿಯ ಅರ್ಹತೆ ಇಲ್ಲದೇ ಇರುವ ಪಕ್ಷಗಳಿಗೂ ಚುನಾವಣಾ ಆಯೋಗವು, ‘ಚುನಾವಣಾ ಬಾಂಡ್‌ಗಳ ಮೂಲಕ ಪಡೆದಿರುವ ದೇಣಿಗೆ ಬಗ್ಗೆ ಮಾಹಿತಿ ನೀಡಿ’ ಎಂದು ನೋಟಿಸ್ ನೀಡಿದೆ.

ಆಯೋಗವು ನೋಟಿಸ್ ನೀಡಿದ 105 ಪಕ್ಷಗಳಲ್ಲಿ, ಒಂದು ಪಕ್ಷದ ಬ್ಯಾಂಕ್ ಖಾತೆಯಲ್ಲಿ ಇರುವುದು ಕೇವಲ ₹700. ಬ್ಯಾಂಕ್ ಖಾತೆಯಲ್ಲಿ ಅತ್ಯಂತ ಕಡಿಮೆ ಠೇವಣಿ ಹೊಂದಿರುವ ಉತ್ತರ ಪ್ರದೇಶದ ಲೇಬರ್ ಸಮಾಜ ಪಾರ್ಟಿಗೂ, ಈ ಬಗ್ಗೆ ಮಾಹಿತಿ ನೀಡುವಂತೆ ಆಯೋಗವು ನೋಟಿಸ್ ನೀಡಿದೆ. ಆದರೆ, ಆಯೋಗದ ನಿಯಮಗಳ ಪ್ರಕಾರ, ಈ ಪಕ್ಷವು ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆಯುವ ಅರ್ಹತೆಯನ್ನೇ ಹೊಂದಿಲ್ಲ.

ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆದಿವೆ ಎಂದು ಆಯೋಗವು ಪಟ್ಟಿ ಮಾಡಿದ 105 ಪಕ್ಷಗಳಲ್ಲಿ, ಬಹುತೇಕ ಪಕ್ಷಗಳು ದೇಶದ ಯಾವುದೋ ಗ್ರಾಮೀಣ ಪ್ರದೇಶದಲ್ಲಿ ನೋಂದಣಿಯಾದಂಥವು. ಸಣ್ಣ–ಪುಟ್ಟ ಕಚೇರಿ ಹೊಂದಿರುವ, ಮಾಧ್ಯಮಗಳ ಕಣ್ಣಿಗೆ ಬೀಳದ, ವಿಚಿತ್ರ ಹೆಸರು (ನಮ್ಮ ಮತ್ತು ನಿಮ್ಮ ಪಕ್ಷ, ಎಲ್ಲರಿಗಿಂತ ದೊಡ್ಡ ಪಕ್ಷ...) ಹೊಂದಿರುವ ಇಂತಹ ಪಕ್ಷಗಳು ಅದು ಹೇಗೆ ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸಿದವು ಎಂಬುದು ಕುತೂಹಲಕಾರಿ ವಿಷಯವಾಗಿತ್ತು.

ರಿಪೋರ್ಟರ್ಸ್ ಕಲೆಕ್ಟಿವ್ ಇಂತಹ ಪಕ್ಷಗಳನ್ನು ಹುಡುಕಿತು. ಬಹಳ ಪ್ರಯತ್ನದ ನಂತರ ಇಂತಹ 54 ಪಕ್ಷಗಳನ್ನಷ್ಟೇ ಸಂಪರ್ಕಿಸಲು ಸಾಧ್ಯವಾಯಿತು. ನಾವು ಸಂಪರ್ಕಿಸಿದ 54 ಪಕ್ಷಗಳೂ, ತಾವು ಚುನಾವಣಾ ಬಾಂಡ್ ಮೂಲಕ ಒಂದು ಪೈಸೆಯಷ್ಟು ದೇಣಿಗೆಯನ್ನೂ ಪಡೆದಿಲ್ಲ ಎಂದು ಪ್ರತಿಕ್ರಿಯೆ ನೀಡಿದವು. ಜತೆಗೆ ಚುನಾವಣಾ ಆಯೋಗದ ನೋಟಿಸ್‌ಗೆ ನೀಡಿದ ಉತ್ತರದ ಪ್ರತಿಯನ್ನು ಹಂಚಿಕೊಂಡವು.

ಗುಜರಾತ್‌ನ ರೈಟ್ ಟು ರಿಕಾಲ್ ಪಾರ್ಟಿಯು 2019ರ ಮೇ 30ರಂದು ನೋಟಿಸ್‌ಗೆ ಉತ್ತರ ನೀಡಿದೆ. ಅದರ ಬೆನ್ನಲ್ಲೇ, ಆಯೋಗವು ಆ ಪಕ್ಷದ ಹೆಸರನ್ನೂ ಸುಪ್ರೀಂ ಕೋರ್ಟ್‌ಗೆ ನೀಡಿದ ಪಟ್ಟಿಯಲ್ಲಿ ಸೇರಿಸಿದೆ.

ನಾವು ಫೋನ್ ಮೂಲಕ ಸಂಪರ್ಕಿಸಿದ ಪಟ್ನಾದ ಭಾರತೀಯ ಹಿಂದುಳಿದವರ ಪಕ್ಷದ ವಿನೋದ್ ಕುಮಾರ್ ಸಿನ್ಹಾ ಅವರು, ‘ನಮ್ಮಂತಹ ಪಕ್ಷಗಳಿಗೆ ಯಾರು ದೇಣಿಗೆ ನೀಡುತ್ತಾರೆ’ ಎಂದು ಮರುಪ್ರಶ್ನಿಸಿದರು.

ರಿಪೋರ್ಟರ್ಸ್ ಕಲೆಕ್ಟಿವ್ ವರದಿ

ಡಿಎಂಕೆ ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾ ಬಾಂಡ್ ಮೂಲಕ ದೇಣಿಗೆ ಪಡೆದಿವೆ. ಆದರೆ, ಸುಪ್ರೀಂ ಕೋರ್ಟ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಪಕ್ಷಗಳ ಪಟ್ಟಿಯಲ್ಲಿ ಈ ಪಕ್ಷಗಳನ್ನು ಆಯೋಗವು ಸೇರಿಸಿಲ್ಲ.

ಚುನಾವಣಾ ಬಾಂಡ್‌ಗಳ ಮೂಲಕ ಹಣ ಪಡೆಯಲು ಅರ್ಹತೆ ಇರುವ 23 ಪಕ್ಷಗಳು ಯಾವುವು ಎಂದು ಕೇಳಿದ ಪ್ರಶ್ನೆಗೆ ಭಾರತೀಯ ಸ್ಟೇಟ್ ಬ್ಯಾಂಕ್ ಉತ್ತರಿಸಿಲ್ಲ. ಚುನಾವಣಾ ಬಾಂಡ್ ನೀಡಲು ಅರ್ಹತೆ ಇರುವ ಏಕೈಕ ಬ್ಯಾಂಕ್ ಇದು. ಮಾಹಿತಿ ಹಕ್ಕು ಕಾಯ್ದೆ ಅಡಿ ಬ್ಯಾಂಕ್‌ಗೆ ಪ್ರಶ್ನೆ ಕೇಳಲಾಗಿತ್ತು.

‘ಸುಪ್ರೀಂ’ ಅಂಗಳದಲ್ಲಿದೆ ಚುನಾವಣಾ ಬಾಂಡ್

ಚುನಾವಣಾ ಬಾಂಡ್ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು 2017ರಲ್ಲಿ ಪ್ರಕಟಿಸಿದ್ದರು. ಕಂಪನಿಗಳು, ವ್ಯಕ್ತಿಗಳು, ಟ್ರಸ್ಟ್‌ಗಳು ಅಥವಾ ಎನ್‌ಜಿಒಗಳು ತಮಗೆ ಬೇಕಾದಷ್ಟು ಮೊತ್ತದ ಬಾಂಡ್‌ಗಳನ್ನು ಖರೀದಿಸಬಹುದು. ₹1000, ₹10,000, ಒಂದು ಲಕ್ಷ ರೂಪಾಯಿ, ಹತ್ತು ಲಕ್ಷ ರೂಪಾಯಿ ಮತ್ತು ಒಂದು ಕೋಟಿ ಮೊತ್ತದ ಬಾಂಡ್‌ಗಳನ್ನು ಖರೀದಿಸಿ, ಎಸ್‌ಬಿಐನಲ್ಲಿ ಖಾತೆ ತೆರೆದಿರುವ ರಾಜಕೀಯ ಪಕ್ಷಕ್ಕೆ ಜಮಾ ಮಾಡಬಹುದು ಎಂದು ಯೋಜನೆ ಹೇಳುತ್ತದೆ.

ಶ್ರೀಮಂತರು ಹಾಗೂ ಪ್ರಭಾವಿಗಳು ನೀಡುವ ದೇಣಿಗೆಯನ್ನು ಮರೆಮಾಚಲು ಚುನಾವಣಾ ಬಾಂಡ್‌ಗಳು ಸಹಾಯ ಮಾಡುತ್ತವೆ ಹಾಗೂ ಬಿಜೆಪಿಯಂತಹ ರಾಜಕೀಯ ಪಕ್ಷಗಳಿಗೆ ಹಣದ ಹರಿವನ್ನು ಹೆಚ್ಚಿಸುತ್ತವೆ ಎಂಬ ಆರೋಪಗಳು ಕೇಳಿಬಂದಿದ್ದವು.

ಚುನಾವಣಾ ಬಾಂಡ್‌ಗಳಿಗೆ ಅವಕಾಶ ನೀಡಿರುವ ಹಣಕಾಸು ಕಾಯ್ದೆ–2017ರ ತಿದ್ದುಪಡಿಗಳನ್ನು ತೆಗೆದುಹಾಕುವಂತೆ ಕೋರಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) 2017ರ ಸೆ.4ರಂದು ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

ಚುನಾವಣಾ ಬಾಂಡ್ ಯೋಜನೆ ರದ್ದಾಗಬೇಕು ಎಂದು ಬಯಸಿದ್ದ ಚುನಾವಣಾ ಆಯೋಗ ಸಹ, 2019ರ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಪ್ರತಿ– ಪ್ರಮಾಣಪತ್ರವನ್ನು ಸಲ್ಲಿಸಿತ್ತು. ‘ಪಾರದರ್ಶಕ ದೇಣಿಗೆ ವಿಚಾರಕ್ಕೆ ಸಂಬಂಧಿಸಿದಂತೆ ಚುನಾವಣಾ ಬಾಂಡ್‌ಗಳದ್ದು ಹಿಮ್ಮುಖ ಹೆಜ್ಜೆ. ರಾಜಕೀಯ ದೇಣಿಗೆ ಹೆಸರಿನಲ್ಲಿ ಷೆಲ್ ಕಂಪನಿಗಳಿಂದ ಕಪ್ಪುಹಣ ಹರಿದುಬರುವ ಸಾಧ್ಯತೆಯಿದೆ. ಭಾರತದ ರಾಜಕೀಯ ಪಕ್ಷಗಳಿಗೆ ರವಾನೆಯಾಗುವ, ಪರಿಶೀಲನೆಗೊಳಪಡದ ವಿದೇಶಿ ಹಣವು ದೇಶದ ರಾಜಕೀಯದ ಮೇಲೆ ಪರಿಣಾಮ ಬೀರಬಹುದು. ವಿದೇಶಿ ಕಂಪನಿಗಳು ಭಾರತದ ರಾಜಕೀಯವನ್ನು ಪ್ರಭಾವಿಸಬಹುದು’ ಎಂದು ಆಯೋಗ ಕಳವಳ ವ್ಯಕ್ತಪಡಿಸಿತ್ತು.

ಆಯೋಗದ ಕಳವಳಕ್ಕೆ ತಿರುಗೇಟು ನೀಡಿದ್ದ ಬಿಜೆಪಿ, ಚುನಾವಣಾ ಬಾಂಡ್ ಅಪರೂಪದ ಯೋಜನೆಯಾಗಿದ್ದು, ರಾಜಕೀಯ ವ್ಯವಸ್ಥೆಯ ಕೊಳೆಯನ್ನು ತೊಳೆದು ಸ್ವಚ್ಛ ಹಣದ ಹರಿವಿಗೆ ಅವಕಾಶ ನೀಡುತ್ತದೆ ಎಂದು ಪ್ರತಿಪಾದಿಸಿತ್ತು.

ಭಾರತೀಯ ರಿಸರ್ವ್ ಬ್ಯಾಂಕ್‌ನ ಆಕ್ಷೇಪಗಳು, ಚುನಾವಣಾ ಆಯೋಗದ ಕಳವಳಗಳನ್ನು ಬದಿಗಿರಿಸಿದ್ದ ಕೇಂದ್ರ ಸರ್ಕಾರವು ಕಾನೂನುಗಳನ್ನು ಮೀರಿ, ವಿಶೇಷ ಅವಕಾಶಗಳನ್ನು ಸೃಷ್ಟಿಸಿ ಕರ್ನಾಟಕದ ವಿಧಾನಸಭಾ ಚುನಾವಣೆಗೂ ಮುನ್ನ ಚುನಾವಣಾ ಬಾಂಡ್ ಯೋಜನೆ ಜಾರಿಗೊಳಿಸಿದ್ದರ ಮೇಲೆ ‘ರಿಪೋರ್ಟರ್ಸ್ ಕಲೆಕ್ಟಿವ್’ ತನಿಖಾ ವರದಿಯು 2019ರಲ್ಲಿ ಬೆಳಕು ಚೆಲ್ಲಿತ್ತು. ಚುನಾವಣಾ ಆಯೋಗದ ಹೇಳಿಕೆಯ ಬಗ್ಗೆ ಸರ್ಕಾರವು ಸಂಸತ್ತಿಗೆ ಸುಳ್ಳು ಹೇಳಿತ್ತು.

ಚುನಾವಣಾ ಬಾಂಡ್ ಕುರಿತಂತೆ ಆರ್‌ಟಿಐನಡಿ ಮಾಹಿತಿ ಕೋರಿರುವ ಅರ್ಜಿಗಳಿಗೆ ಉತ್ತರ ನೀಡಲು ಅನುಮತಿ ನೀಡುವಂತೆ ಹಣಕಾಸು ಸಚಿವಾಲಯವನ್ನು ಎಸ್‌ಬಿಐ ಕೇಳಿತ್ತು. ಈ ವಿಚಾರದಲ್ಲಿ ಬ್ಯಾಂಕ್ ಸುಳ್ಳು ನುಡಿದಿತ್ತು. 2018 ಮತ್ತು 2019ರಲ್ಲಿ ಎಷ್ಟು ಮೊತ್ತದ ಚುನಾವಣಾ ಬಾಂಡ್ ಮಾರಾಟವಾಗಿವೆ ಎಂಬ ದತ್ತಾಂಶ ಇಲ್ಲ ಎಂದು ಬ್ಯಾಂಕ್ ಪ್ರತಿಕ್ರಿಯೆ ನೀಡಿತ್ತು. 105ರ ಪೈಕಿ 23 ಪಕ್ಷಗಳು ಮಾತ್ರ ಬಾಂಡ್ ಸ್ವೀಕರಿಸಲು ಅರ್ಹ ಎಂದು ಲೋಕೇಶ್ ಬಾತ್ರಾ ಎಂಬುವರು ಇತ್ತೀಚೆಗೆ ಸಲ್ಲಿಸಿದ್ದ ಆರ್‌ಟಿಐ ಅರ್ಜಿಗೆ ಪ್ರತಿಕ್ರಿಯೆ ನೀಡಲಾಗಿತ್ತು. ಆದರೆ, ಆರ್‌ಟಿಐ ಕಾಯ್ದೆ ಕೆಲವು ಸೆಕ್ಷನ್‌ಗಳ ಅಡಿಯಲ್ಲಿ ಆ 23 ಪಕ್ಷಗಳ ಹೆಸರುಗಳನ್ನು ಉಲ್ಲೇಖಿಸಲು ಆಗುವುದಿಲ್ಲ ಎಂದು ಬ್ಯಾಂಕ್ ಹೇಳಿತ್ತು.

ಈ ವರದಿಯ ಇಂಗ್ಲಿಷ್ ಆವೃತ್ತಿಯು ‘ಆರ್ಟಿಕಲ್ 14’ ಪೋರ್ಟಲ್‌ನಲ್ಲಿ ಪ್ರಕಟವಾಗಿದೆ

ಶ್ರೀಗಿರೀಶ್ ಜಾಲಿಹಾಳ್ ಅವರು ರಿಪೋರ್ಟರ್ಸ್ ಕಲೆಕ್ಟಿವ್‌ನ ಸದಸ್ಯ, ಪೂನಂ ಅಗರ್‌ವಾಲ್ ಅವರು ಸ್ವತಂತ್ರ ತನಿಖಾ ಪತ್ರಕರ್ತೆ, ಸೋಮೇಶ್ ಝಾ ಅವರು ಲಾಸ್ ಏಂಜಲೀಸ್ ಟೈಮ್ಸ್‌ನಲ್ಲಿ ಆಲ್ಫ್ರೆಡ್ ಫ್ರೆಂಡ್ಲಿ ಒಸಿಸಿಆರ್‌ಪಿ ತನಿಖಾ ವರದಿಗಾರಿಕೆ ಫೆಲೋ ಆಗಿದ್ದಾರೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 143

ವಿರಕ್ತರಾದ ದಕ್ಷನ ಮಕ್ಕಳು

ನಾರದಮುನಿಯು ‘ದಕ್ಷನು ತನ್ನ ಮನೆಗೆ ಹೋದನಂತರ ಮುಂದೇನಾಯಿತೆಂಬುದನ್ನು ದಯವಿಟ್ಟು ಹೇಳು’ ಎನ್ನುತ್ತಾನೆ. ಆಗ ಬ್ರಹ್ಮ ‘ತನ್ನಾಶ್ರಮಕ್ಕೆ ತೆರಳಿದ ದಕ್ಷಬ್ರಹ್ಮ, ಮುಂದೆ ನನ್ನಾಜ್ಞೆಯಂತೆ ಮನಸ್ಸಿನಿಂದ ಅನೇಕ ಪ್ರಜೆಗಳನ್ನು ಸೃಷ್ಟಿಸಿದ. ಆದರೆ ಸೃಷ್ಟಿಸಿದ ಪ್ರಜೆಗಳು ಬೆಳೆಯಲೇ ಇಲ್ಲ. ಎಷ್ಟು ಜನಗಳನ್ನು ಸೃಷ್ಟಿಸಿದ್ದನೋ, ಅಷ್ಟೆ ಜನಗಳಿದ್ದರು. ಅದನ್ನು ನೋಡಿ ದಕ್ಷಬ್ರಹ್ಮ ಚತುರ್ಮುಖಬ್ರಹ್ಮನಾದ ನನ್ನ ಬಳಿಗೆ ಬಂದು ಹೀಗೆ ವಿಜ್ಞಾಪಿಸಿಕೊಂಡ.

‘ಓ ಬ್ರಹ್ಮನೇ, ನಾನು ಮಾಡಿದ ಪ್ರಜೆಗಳ ಸೃಷ್ಟಿಯು ಬೆಳೆಯುತ್ತಲೇ ಇಲ್ಲವಲ್ಲಾ? ನಾನೆಷ್ಟು ಪ್ರಜೆಗಳನ್ನು ಸೃಷ್ಟಿಸಿದ್ದೆನೋ ಅಷ್ಟೇ ಪ್ರಜೆಗಳಿರುವರು. ಒಂದೂ ಹೆಚ್ಚಾಗಿಲ್ಲ. ಈಗ ನಾನೇನು ಮಾಡಲಿ? ಈ ಪ್ರಜೆಗಳು ತಾನಾಗಿಯೇ ಹೇಗೆ ಬೆಳೆಯುವರು? ಪ್ರಜೆಗಳ ಸಂಖ್ಯೆ ಹೇಗೆ ಹೆಚ್ಚಾಗುವುದು? ಅದಕ್ಕೆ ಉಪಾಯವನ್ನು ಹೇಳು. ಅದರಂತೆ ನಾನು ಅವಶ್ಯವಾಗಿ ಮಾಡುವೆ’ ಎಂದ.

ಆಗ ಬ್ರಹ್ಮ ಹೇಳಿದ ‘ಎಲೈ ದಕ್ಷಪ್ರಜಾಪತಿಯೇ, ನಾನು ಹೇಳುವ ಹಿತವಾದ ಮಾತನ್ನು ಕೇಳು. ಅದರಂತೆ ಮಾಡು, ಶಿವನು ನಿನಗೆ ಕಲ್ಯಾಣವನ್ನುಂಟುಮಾಡುವನು. ಪಂಚಜನ ಅಥವಾ ವೀರಣ ಎಂಬ ಮುನಿಗೆ ‘ಅಸಿಕ್ನಿ’ ಎಂಬ ಸುಂದರಿಯಾದ ಪುತ್ರಿ ಇದ್ದಾಳೆ. ಅಸಿಕ್ನಿಯನ್ನು ನೀನು ಪತ್ನಿಯಾಗಿ ಪರಿಗ್ರಹಿಸು. ಬಳಿಕ ನಿನ್ನ ಪತ್ನಿಯಲ್ಲಿ ಮೈಥುನಧರ್ಮದಿಂದ ಪ್ರಜೆಗಳನ್ನು ಸೃಷ್ಟಿಮಾಡು. ಇದೇ ಕ್ರಮದಿಂದ ಮುಂದೆ ಸೃಷ್ಟಿಯು ಬೆಳೆಯುವುದು’ ಎಂದು ಸೂಚಿಸುತ್ತಾನೆ.

ಬ್ರಹ್ಮನ ಸಲಹೆಯಂತೆ ದಕ್ಷನು ಅಸಿಕ್ನಿಯನ್ನು ಮದುವೆಯಾದ. ನಂತರ ಮೈಥುನಧರ್ಮದಿಂದ ಪ್ರಜೆಗಳನ್ನು ಸೃಷ್ಟಿಸಲುದ್ಯುಕ್ತನಾದ. ತನ್ನ ಹೆಂಡತಿಯಾದ ವೀರಣಿ(ಅಸಿಕ್ನಿ)ಯಲ್ಲಿ ದಕ್ಷನು ‘ಹರ್ಯಶ್ವರ’ ಎಂಬ ಹೆಸರುಳ್ಳ ಹತ್ತು ಸಾವಿರ ಜನ ಪುತ್ರರನ್ನು ಸೃಷ್ಟಿಸಿದ. ದಕ್ಷಪುತ್ರರೆಲ್ಲರೂ ಒಂದೇ ವಿಧವಾದ ಧರ್ಮ ಮತ್ತು ಶೀಲವುಳ್ಳವರಾಗಿದ್ದರು. ತಂದೆಯಲ್ಲಿ ಭಕ್ತಿಯುಳ್ಳವರಾಗಿರುವುದರ ಜೊತೆಗೆ ಸದಾ ವೇದೋಕ್ತಮಾರ್ಗದಲ್ಲಿ ನಡೆಯುವವರಾಗಿಯೂ ಇದ್ದರು. ದಕ್ಷಬ್ರಹ್ಮ ತನ್ನ ಹತ್ತು ಸಾವಿರ ಪುತ್ರರನ್ನು ಕರೆದು ಪ್ರಜೆಗಳನ್ನು ಸೃಷ್ಟಿಮಾಡಿ ಎಂದು ಆಜ್ಞಾಪಿಸಿದ. ಅದಕ್ಕಾಗಿ ಅವರು ತಪಸ್ಸನ್ನಾಚರಿಸಲು ಪಶ್ಚಿಮದಿಕ್ಕಿನತ್ತ ತೆರಳಿದರು. ಪಶ್ಚಿಮದಿಕ್ಕಿನಲ್ಲಿರುವ ನಾರಾಯಣ ಸರಸ್ಸು ಎಂಬ ತುಂಬಾ ಪವಿತ್ರವಾದ ತೀರ್ಥವಿತ್ತು. ಆ ತೀರ್ಥದಲ್ಲಿ ದೇವಗಂಗೆ ಮತ್ತು ಸಮುದ್ರಗಳ ಸಂಗಮವಾಗುತ್ತಿತ್ತು. ಆ ತೀರ್ಥದ ಜಲವನ್ನು ಸ್ಪರ್ಶಮಾಡಿದೊಡನೆಯೇ ಆ ದಕ್ಷಪುತ್ರರು ಪರಿಶುದ್ಧರಾಗಿ ಧರ್ಮ ಮತ್ತು ಮೋಕ್ಷ ಸಾಧನವಾದ ಜ್ಞಾನಗಳಲ್ಲಿ ತುಂಬಾ ತಿಳಿವಳಿಕೆಯುಳ್ಳವರಾದರು.

ಆಗ ಹರಿಯ ಸಲಹೆಯಂತೆ ಅಲ್ಲಿಗೆ ಬಂದ ನಾರದನಾದ ನೀನು ‘ಎಲೈ ದಕ್ಷಪುತ್ರರಾದ ಹರ್ಯಶ್ವರೇ, ಭೂಮಿಯಲ್ಲಿಯ ಸೃಷ್ಟಿಯನ್ನೇ ನೋಡದೆ ನೀವು, ಸೃಷ್ಟಿಗಾಗಿ ತಪಸ್ಸನ್ನಾಚರಿಸುತ್ತಲಿರುವಿರಿ’ ಎಂದು ಹೇಳಿದೆ. ಆಗ ಆ ಹರ್ಯಶ್ವರು ನಿನ್ನ ಮಾತನ್ನು ಕೇಳಿ ಸೃಷ್ಟಿಯನ್ನು ಮಾಡುವ ವಿಚಾರದಲ್ಲಿ ತುಂಬಾ ವಿಮರ್ಶೆಯನ್ನು ಮಾಡಿದರು. ಶಾಸ್ತ್ರ ಮತ್ತು ಗುರುಗಳ ಉಪದೇಶಗಳಿಂದ ಸೃಷ್ಟಿಯ ಕ್ರಮವನ್ನು ತಿಳಿಯದಿದ್ದವನು, ಪ್ರಕೃತಿಯ ಗುಣಗಳಿಂದಾಗುವ ಸೃಷ್ಟಿಯನ್ನು ಹೇಗೆ ಮಾಡುವನು? ಅಂಥ ಸೃಷ್ಟಿ ಮಾಡುವುದು ಅಸಾಧ್ಯ ಎಂದು ನಿಶ್ಚಯಿಸಿದ ಆ ದಕ್ಷಪುತ್ರರೆಲ್ಲರೂ ನಾರದನಾದ ನಿನಗೆ ನಮಸ್ಕರಿಸಿ ಪುನರ್ಜನ್ಮರಹಿತವಾದ ಜ್ಞಾನಮಾರ್ಗವನ್ನು ಹಿಡಿದು ಮುಕ್ತರಾದರು’ ಎಂದು ತಿಳಿಸುತ್ತಾನೆ ಬ್ರಹ್ಮ.

‘ಎಲೈ ನಾರದ, ನೀನು ಶಂಕರನನ್ನೇ ಮನಸ್ಸಿನಲ್ಲಿ ಧ್ಯಾನಿಸುವವನು. ಸಾಮಾನ್ಯಜನಗಳಿಗೆ ಮಹೇಶ್ವರನಲ್ಲಿ ಭಕ್ತಿಯುಂಟಾಗುವಂತೆ ಮಾಡಿ ಮುಕ್ತಿಮಾರ್ಗಕ್ಕೆ ಹಚ್ಚುವೆ. ಅದರಂತೆ ಆ ದಕ್ಷಸುತರಿಗೂ ಮುಕ್ತಿಮಾರ್ಗ ಉಪದೇಶಿಸಿದೆ. ಅವರು ಸೃಷ್ಟಿಕಾರ್ಯ ಬಿಟ್ಟು, ಮುಕ್ತಿಮಾರ್ಗದಲ್ಲಿ ಮನಸ್ಸಿಟ್ಟರು. ಕೆಲವು ಕಾಲ ಕಳೆದ ಮೇಲೆ ವಿಷಯ ತಿಳಿದ ದಕ್ಷಪ್ರಜಾಪತಿ ತುಂಬಾ ದುಃಖಪಟ್ಟ. ನಾರದನಿಂದಲೇ ತನ್ನ ಪುತ್ರರು ತಿರುಗಿ ಬಾರದಂತಹ ಜ್ಞಾನಮಾರ್ಗವನ್ನು ಹಿಡಿದಿದ್ದಾರೆಂದು ಹಲುಬಿದ. ಒಳ್ಳೆಯ ಮಕ್ಕಳು ಜನಿಸುವುದು ಕೊನೆಗೆ ದುಃಖಕ್ಕಾಗಿಯೇ ಎಂದು ತನ್ನ ಮಕ್ಕಳ ಸ್ಥಿತಿ ನೆನೆದು ಶೋಕಿಸಿದ. ಶಿವಮಾಯೆಯಿಂದ ಮೋಹಿತನಾಗಿದ್ದರಿಂದ ದಕ್ಷಪ್ರಜಾಪತಿ ತುಂಬಾ ಶೋಕಕ್ಕೊಳಗಾದ’ ಎನ್ನುತ್ತಾನೆ ನಾರದನಿಗೆ ಬ್ರಹ್ಮ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ತಮಿಳುನಾಡಿನಲ್ಲಿ ಕಮಲ ಅರಳುತ್ತಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಇದೇ ಮಂಗಳವಾರ (ಜೂನ್ 7) ಟ್ವೀಟ್ ಮಾಡಿದ್ದಾರೆ. ನಾಲ್ವರು ಯುವಕರು ಒಬ್ಬರ ಹೆಗಲ ಮೇಲೆ ಒಬ್ಬರು ನಿಂತು, ವಿದ್ಯುತ್ ಕಂಬದ ಮೇಲೆ ಬಿಜೆಪಿ ಧ್ವಜ ಹಾರಿಸುತ್ತಿರುವ ಚಿತ್ರವನ್ನು ಅವರು ಟ್ವೀಟ್ ಮಾಡಿದ್ದಾರೆ. ಬಿಜೆಪಿಯ ಹಲವು ನಾಯಕರು ಇದನ್ನು ಮರುಟ್ವೀಟ್ ಮಾಡಿದ್ದಾರೆ. ಈ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಇದು ತಿರುಚಲಾದ ಚಿತ್ರ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘2022ರ ಮೇ 31ರಂದು ತೆಲಂಗಾಣ ಬಿಎಸ್‌ಪಿ ಮುಖಂಡರು ಮೂಲ ಚಿತ್ರವನ್ನು ಟ್ವೀಟ್ ಮಾಡಿದ್ದರು. ನಾಲ್ವರು ಯುವಕರು ಒಬ್ಬರ ಹೆಗಲ ಮೇಲೆ ಒಬ್ಬರು ನಿಂತು, ವಿದ್ಯುತ್ ಕಂಬದ ಮೇಲೆ ಬಿಎಸ್‌ಪಿ ಧ್ವಜ ಹಾರಿಸುತ್ತಿರುವ ಚಿತ್ರವದು. ಮೂಲ ಚಿತ್ರದಲ್ಲಿದ್ದ ಬಿಎಸ್‌ಪಿ ಧ್ವಜವನ್ನು ತೆಗೆದುಹಾಕಿ, ಆ ಜಾಗದಲ್ಲಿ ಬಿಜೆಪಿ ಧ್ವಜವನ್ನು ಸೇರಿಸಲಾಗಿದೆ. ಹೀಗೆ ತಿರುಚಲಾದ ಚಿತ್ರವನ್ನು ಬಿಜೆಪಿ ನಾಯಕರು ಹಂಚಿಕೊಂಡಿದ್ದಾರೆ’ ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮನಸ್ಸೇ ಮುಕ್ತಿಯ ಪಥ

ಮುಕ್ತಿಯೆಂಬುದು ಮನದ ಸಂಸ್ಥಿತಿಯೆ, ಬೇರಲ್ಲ |
ರಕ್ತಿ ವಿಪರೀತವದಕಾಗದಿರೆ ಮುಕ್ತಿ ||
ಯುಕ್ತಿಯಿಂ ಕರಣಚೇಷ್ಟಿತವ ತಿದ್ದುತೆ ಶಮಿಪ |
ಶಕ್ತಿವಂತನೆ ಮುಕ್ತ – ಮಂಕುತಿಮ್ಮ || 647 ||

ಪದ-ಅರ್ಥ: ಸಂಸ್ಥಿತಿ = ಸಮಸ್ಥಿತಿ, ರಕ್ತಿ = ಆಸಕ್ತಿ, ವಿಪರೀತವದಕಾಗದಿರೆ = ವಿಪರೀತ + ಅದಕೆ + ಆಗದಿರೆ, ಯುಕ್ತಿಯಿಂ = ಯುಕ್ತಿಯಿಂದ, ಕರಣಚೇಷ್ಟಿತವ = ಕರಣ(ಇಂದ್ರಿಯ) + ಚೇಷ್ಟಿತ-ವ(ಚೇಷ್ಟೆಗಳನ್ನು), ತಿದ್ದುತೆ = ತಿದ್ದುತ್ತ, ಶಮಿಪ = - ಶಾಂತಗೊಳಿಸುವ.

ವಾಚ್ಯಾರ್ಥ: ಮುಕ್ತಿ ಎಂಬುದು ಮನಸ್ಸಿನ ಸಮಸ್ಥಿತಿಯೇ, ಬೇರೇನೂ ಅಲ್ಲ. ಜಗತ್ತಿನ ಆಸಕ್ತಿ ವಿಪರೀತವಾಗದಿದ್ದರೆ ಮುಕ್ತಿ. ಯುಕ್ತಿಯಿಂದ ಇಂದ್ರಿಯಗಳ ಚೇಷ್ಟೆಗಳನ್ನು ತಿದ್ದುತ್ತ, ಶಾಂತಗೊಳಿಸುವ ಶಕ್ತಿವಂತನೆ ನಿಜವಾಗಿಯೂ ಮುಕ್ತ.

ವಿವರಣೆ: ಮುಕ್ತಿ ಎಂದರೆ ಬಿಡುಗಡೆ. ಯಾವುದರಿಂದ ಬಿಡುಗಡೆ? ನಮಗೆ ಮೂರು ತರಹದ ಬಿಡುಗಡೆಗಳು ಬೇಕು. ಶರೀರಪರವಾದ ದೇಹ ರೋಗದಿಂದ ಬಿಡುಗಡೆ, ಮಾನಸಿಕವಾದ ಚಿಂತೆಯಿಂದ ಬಿಡುಗಡೆ, ಬುದ್ಧಿಪರವಾದ ಮಾಂದ್ಯದಿಂದ ಬಿಡುಗಡೆ. ಕಪಿಲ ಮಹರ್ಷಿ ಹೇಳುತ್ತಾರೆ ‘ತ್ರಿವಿಧ ದುಃಖ ಅತ್ಯಂತ ನಿವೃತ್ತಿ: ಅತ್ಯಂತ ಪುರುಷಾರ್ಥ.’ ಹಾಗೆಂದರೆ ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಲ್ಲಿ ನಾಲ್ಕನೆಯದಾದ ಮೋಕ್ಷ ನಮ್ಮನ್ನು ತ್ರಿವಿಧ ದುಃಖಗಳಿಂದ ಪೂರ್ಣ ಬಿಡುಗಡೆ ಮಾಡುವುದರಿಂದ ಅದೇ ಅತ್ಯಂತ ಶ್ರೇಷ್ಠ ಪುರುಷಾರ್ಥ. ನಾವು ಮೂರು ಬಗೆಯ ಗುಣದೋಷಗಳಿಂದ ಸೇರಿದ ದುಃಖಗಳಿಂದ ಹೊರಗೆ ಬರುವುದು ಮುಕ್ತಿ. ಅವು, ಶಾರೀರಿಕವಾದ ತಮೋಗುಣ, ಮಾನಸಿಕವಾದ ರಜೋಗುಣ ಮತ್ತು ಬೌದ್ಧಿಕವಾದ ಸತ್ವಗುಣಗಳು.

ಈ ಗುಣಗಳಿಂದ ಹೊರಬಂದರೆ ಮನಸ್ಸು ಸಂಪೂರ್ಣ ಸಮಸ್ಥಿತಿಯಲ್ಲಿ ಇರುತ್ತದೆ. ಕಗ್ಗ ಹೇಳುತ್ತದೆ, ಇದೇ ಮುಕ್ತಿ, ಬೇರೇನೂ ಅಲ್ಲ. ಇದನ್ನು ಸಾಧಿಸುವ ವಿಧಾನಗಳೇನು? ಮೊದಲನೆಯದು ಆಸಕ್ತಿ ಕಡಿಮೆಯಾಗಬೇಕು. ಆಸಕ್ತಿ ಕರ್ತವ್ಯದಲ್ಲಿ ಅಲ್ಲ. ಇದು ನನ್ನದು, ಇವರು ನನ್ನವರು ಎಂಬ ಅತಿಯಾದ ಮೋಹದ ಅಂಟು, ಆಸಕ್ತಿ. ಆಸಕ್ತಿ ಗಟ್ಟಿಯಾಗಿದ್ದಷ್ಟೂ ಬಿಡುಗಡೆ ಕಷ್ಟ. ನಾನು ಅನೇಕ ವ್ಯಕ್ತಿಗಳನ್ನು ಕಂಡಿದ್ದೇನೆ. ಯಾರು ಪ್ರಪಂಚಕ್ಕೆ, ಅಂದರೆ, ನನ್ನ ಮನೆ, ನನ್ನ ಮೊಮ್ಮಕ್ಕಳು, ಅವರ ಮದುವೆಯನ್ನು ನೋಡುವಾಸೆ, ಎಂದೆಲ್ಲ ಅತಿಯಾದ ಮೋಹವನ್ನು ಕಟ್ಟಿಕೊಂಡಿದ್ದಾರೋ ಅವರು ಬೇಗ ದೇಹವನ್ನು ಬಿಡಲಾರರು. ಬಹಳಷ್ಟು ಬಾರಿ ಹಾಸಿಗೆ ಹಿಡಿದು, ನರಳಿದರೂ ಬಿಡುವ ಮನಸ್ಸು ಬರುವುದಿಲ್ಲ. ಯಾರು ಹೆಚ್ಚು ಅಂಟಿಕೊಂಡಿಲ್ಲವೋ, ಜೀವನವನ್ನು ಮೇಲೆ ಮೇಲೆ ಹಗುರವಾಗಿ ನಡೆಸಿದ್ದಾರೋ ಅವರು ಫಟ್ ಎಂದು ದೇಹವನ್ನು ಬಿಟ್ಟು ಹಾರಿಬಿಡುತ್ತಾರೆ. ಬಿಡುಗಡೆ ಅವರಿಗೆ ಸುಲಭ. ಅದು ದೇಹದಿಂದ ಬಿಡುಗಡೆ ಮಾತ್ರವಲ್ಲ, ಆಸೆಗಳಿಂದ ಬಿಡುಗಡೆ. ಅದನ್ನೇ ಕಗ್ಗ ಸುಂದರವಾಗಿ, ಆಸಕ್ತಿ, ಮೋಹ ಹೆಚ್ಚಾಗದಿದ್ದರೆ ಮುಕ್ತಿ ಎನ್ನುತ್ತದೆ.

ಎರಡನೆಯದು, ಕುಶಲತೆಯಿಂದ, ಇಂದ್ರಿಯಗಳ ಚೇಷ್ಟೆಗಳನ್ನು ನಿಯಂತ್ರಿಸಬೇಕು. ಇಂದ್ರಿಯಗಳನ್ನು ಸತ್ ಚಿಂತನೆಗಳಿಂದ, ಸತ್ ಕಾರ್ಯಗಳಿಂದ, ಸತ್ ಸಂಗದಿಂದ ತಿದ್ದುತ್ತ ಇರಬೇಕು. ಅದರೊಂದಿಗೆ, ಕೊಂಚ ಅವಕಾಶ ಸಿಕ್ಕರೆ ಸಾಕು, ಥಟ್ಟನೆ ಹಾರಾಡುವ ಇಂದ್ರಿಯಗಳನ್ನು ಶಾಂತಗೊಳಿಸಬೇಕು. ಹಾಗೆ ಮಾಡುವವನೇ ನಿಜವಾದ ಶಕ್ತಿವಂತ. ಅವನಿಗೆ ಬದುಕು ಬಿಡುಗಡೆಯ ಹಾದಿಯಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದಶಮಿ ಗಂ. 07-27 ನಕ್ಷತ್ರ: ಚಿತ್ತಾ ಗಂ. 27-37 ಯೋಗ: ವರಿಯಾನ್ ಗಂ. 23-35, ಕರಣ: ಗರಜೆ ಗಂ 07-27, ವೃಷಭ ಮಾಸದ 26 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 10 ಜುಲ್ಹಾಯಿದ್ ದಿನ ವಿಶೇಷ : ನಿರ್ಜಲ ಏಕಾದಶಿ (ಸ್ಮಾರ್ತ)
ಅದೃಷ್ಟ ಸಂಖ್ಯೆ : 7, 9

ಮೇಷ: ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡುವುದರಿಂದ ಗುರಿ ತಲುಪಲು ಸುಲಭವಾಗುವುದು. ಸಂಬಂಧಿಗಳಲ್ಲಿ ಇದ್ದಂತಹ ಸಾಲದ ಹಣ ಹಿಂತಿರುಗಿ ಬರುವುದು. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ಇರಲಿ.

ವೃಷಭ: ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಾಗಿದೆ. ಸಂಬಂಧಗಳಿಗೆ ಅತಿಯಾಗಿ ಬೆಲೆ ಕೊಡುವ ನೀವು ಸಂಬಂಧಿಕರ ಮೊಸಳೆ ಕಣ್ಣೀರಿಗೆ ಸುಲಭವಾಗಿ ಮರುಳಾಗದಿರಿ.

ಮಿಥುನ: ಮನಸ್ಸನ್ನು ಜಾಗ್ರತೆಯಾಗಿ ಇಟ್ಟುಕೊಳ್ಳಿ. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ. ಅನಗತ್ಯವಾದ ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ಪೂರ್ತಿ ಮಾಡುವ ತೀರ್ಮಾನಕ್ಕೆ ಬರುವುದು ಉತ್ತಮ.

ಕರ್ಕಾಟಕ: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಕುಶಲ ಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ.

ಸಿಂಹ: ನಿಮ್ಮ ವಿನೋದ ಸ್ವಭಾವ ಹಾಗೂ ಬುದ್ಧಿವಂತಿಕೆ ಇತರರನ್ನು ಆಕರ್ಷಿಸುವುದು. ಕೈ ತಪ್ಪಿದ್ದ ಕೆಲವು ಕೆಲಸಗಳು ಹಿರಿಯರ ನಿಮಗೆ ಪುನಃ ದೊರೆಯಲಿದೆ. ಇದರಿಂದಾಗಿ ನಿಮ್ಮಲ್ಲಿನ ಆತ್ಮ ವಿಶ್ವಾಸವು ಹೆಚ್ಚುವುದು.

ಕನ್ಯಾ: ಸಂಬಂಧಿಕರ ವಲಯದಲ್ಲಿ ನಿಮ್ಮ ಮೇಲಿದ್ದ ತಪ್ಪು ಅಭಿಪ್ರಾಯಗಳು ದೂರಾಗುವುದು. ಹೊಸಮನೆಯ ಅಲಂಕಾರಕ್ಕಾಗಿ ಹೆಚ್ಚಿನ ವಸ್ತುಗಳನ್ನು ಕೊಳ್ಳುವಿರಿ. ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ.

ತುಲಾ: ಹೊಸ ಕೆಲಸ ಕಾರ್ಯಗಳ ಬಗ್ಗೆ ಮನೆಯವರೊಂದಿಗೆ ಮಾತು ಕತೆ ನಡೆಸಿ. ತಾಳ್ಮೆಯಿಂದ ವರ್ತಿಸಿ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ. ವಿಮಾ ಸಲಹೆಗಾರರು ಯಾರಿಗೂ ಬಲವಂತ ಪಡಿಸಬೇಡಿ.

ವೃಶ್ಚಿಕ: ನಿಮ್ಮ ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಮಕ್ಕಳ ವಿದ್ಯಾಭ್ಯಾಸದ ಪ್ರಗತಿ ಕಂಡು ಮನೆಯವರಿಗೆಲ್ಲ ಸಮಾಧಾನ. ಕೆಲಸಗಳೆಲ್ಲವೂ ತನ್ನಷ್ಟಕ್ಕೆ ತಾನೆಯೇ ಪೂರ್ಣಗೊಳ್ಳುವುದು.

ಧನು: ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಬಹಳ ಉಪಯೋಗ. ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗಿ ಕೈ ಸೇರುವುದು. ಸಿದ್ಧಿವಿನಾಯಕನ ಆರಾಧನೆಯಿಂದ ಶುಭ.

ಮಕರ: ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕವಾಗಬೇಕಾದ ಅವಶ್ಯಕತೆ ಇಲ್ಲ. ಮನೆಮದ್ದುಗಳಿಂದ ಸರಿಹೋಗುತ್ತದೆ. ನಿಮ್ಮ ಗಮನಕ್ಕೆ ಬರುವ ತಪ್ಪುಗಳನ್ನು ಪುನರಾವರ್ತನೆಯಾಗದಂತೆ ಗಮನಿಸಿ.

ಕುಂಭ: ಅತಿ ಅವಸರ ಮತ್ತು ಅತಿ ಉದ್ವೇಗ ಇವೆರಡು ನಿಮ್ಮನ್ನು ತಲೆ ತಗ್ಗಿಸುವಂತೆ ಮಾಡುತ್ತದೆ. ಕೆಲಸದ ಬಗ್ಗೆ ವಿಮರ್ಶಿಸಿ ನಂತರದಲ್ಲಿ ಕಾರ್ಯರೂಪಕ್ಕೆ ತನ್ನಿರಿ. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಾಣುವರು.

ಮೀನ: ಇತರರನ್ನು ಮಾತಿನ ಮೂಲಕ ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ನಿಮ್ಮ ಮಾತು ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಇರುವ ಬಗ್ಗೆ ಗಮನ ನೀಡಿ. ಸಂಜೆಯ ಸಮಯದಲ್ಲಿ ಶಿರೋ ವೇದನದಿಂದ ಬಳಲುವ ಸಾಧ್ಯತೆ ಇರುವುದು.

ಪದಬಂಧ 4984 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾಗ್ದೇವಿಯ ಇನ್ನೊಂದು ಹೆಸರು (4)
3.ಅಂತರಂಗವನ್ನು ನಿಯಾಮಿಸತಕ್ಕ ಪರಮಾತ್ಮ (4)
4.ಮಿಡಿ ಧರಿಸಿದವಳ ಸ್ಪಂದನ! (3)
5.ವರ ಪಡೆದುಕೊಂಡಿರುವ ಬೇಡ (4)
7.ವಿರಳವಾಗಿರುವ ರಕುತ (3)
9.ಕಾನೂನು ಬಲ್ಲವನು ನೋಡುತ್ತಿರುವ ಕಾಡು (3)
10.ಬಲೆ ಬೀಸುತ್ತಿರುವ ಬಲಹೀನೆ (3)
11.ಮಗನಿಗೆ ಇದು ತುಂಬಾ ಸಲೀಸು! (3)
13.ಅತ್ಯಂತ ಚಲುವಾದುದು ಮರದಲ್ಲಿದೆ (4)
15.ಮಲಯ ಪರ್ವತದಲ್ಲಿ ಕಾಣಿಸಿದ ಹೂವು (3)
16.ಮಾತುಕತೆಯಾಡುವಾಗ ಬಂದಿರುವ ಅಮಲು! (4)
17.ಕಣದಲ್ಲಿ ಹಾಕಿರುವ ಲಗಾಮು (4)

ಮೇಲಿಂದ ಕೆಳಕ್ಕೆ
1. ವಸತಿಯ ಹತ್ತಿರ ಮಂತ್ರಿಯಿದ್ದಾನಲ್ಲಾ! (3)
2.ಕತ್ತಲು ಅಥವಾ ಅಜ್ಞಾನ (3)
3.ಅಂತರಂಗದಲ್ಲಿ ತೋರಿರುವ ವ್ಯತ್ಯಾಸ! (3)
6.ಈ ರೀತಿ ಕೋಮಲವಾಗಿರು (5)
8.ಶೀರ್ಷಿಕೆಯನ್ನು ಹೀಗೆ ಕೊಡಿ! (5)
12.ಮತ್ತೆ ಮತ್ತೆ ತೋರುತ್ತಿರುವ ಪ್ರೀತಿ (3)
13.ಕರುವಿಗೆ ತೋರಿಸುತ್ತಿರುವ ದಯೆ (3)
14.ಮಣ ಭಾರವಿರುವ ನಲ್ಲ! (3)



4983ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಳಪ 3.ಬಸದಿ 5.ಲವಲವಿಕೆ 7.ರವ 9.ತೀರ 10.ಪಿಕ 12.ನರ 14.ತಲವಿನ್ಯಾಸ 16.ಹರಕೆ 17.ನಯನ

ಮೇಲಿಂದ ಕೆಳಕ್ಕೆ: 1.ಬಡಿವಾರ 2.ಪತ್ತಲ 3.ಬಯಕೆ 4.ದಿನಕರ 6.ಲಕ್ಷ್ಯ 8.ವರ್ತಕ 9.ತೀರ್ಮಾನ 11.ಭವಿ 13.ರಸಾಯನ 14.ತಡಿಕೆ 15.ಸನ್ಮಾನ

ಸುಡೊಕು 5370

						6		2
		5	2					
2		4		1			9	
	5		7			8		
				8		5		9
8		6		9				
6		2		5		9		7
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5369 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಕೋಮುಭಾವನೆ ಕೆರಳಿಸಿದ ಆರೋಪ ಪ್ರಕರಣ

ಪ್ರವಾದಿ ವಿರುದ್ಧದ ಹೇಳಿಕೆಗಳಿಗೆ ತೀವ್ರ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಬಿಜೆಪಿ ನೂಪುರ್ ಅವರನ್ನು ಅಮಾನತು ಮಾಡಿ, ನವೀನ್‌ರನ್ನು ಉಚ್ಚಾಟಿಸಿದೆ

ನೂಪುರ್, ಜಿಂದಾಲ್, ಒವೈಸಿ ವಿರುದ್ಧ ಎಫ್‌ಐಆರ್

ನವದೆಹಲಿ: ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೋಮುಭಾವನೆ ಕೆರಳಿಸಿದ ಆರೋಪದಲ್ಲಿ ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ, ದೆಹಲಿ ಬಿಜೆಪಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿದ್ದ ನವೀನ್ ಕುಮಾರ್ ಜಿಂದಾಲ್, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹಾಗೂ ಸಂತ ಯತಿ ನರಸಿಂಗಾನಂದ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

ನೂಪುರ್ ಶರ್ಮಾ

ದೆಹಲಿ ಪೊಲೀಸರು ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದು, ಅದರಲ್ಲಿ ಪತ್ರಕರ್ತ ಸಬಾ ನಖ್ವಿ, ಪೀಸ್ ಪಾರ್ಟಿಯ ಶಬದ್ ಚೌಹಾನ್, ರಾಜಸ್ಥಾನದ ಮೌಲಾನಾ ಮುಫ್ತಿ ನದೀಮ್, ಹಿಂದೂ ಮಹಾಸಭಾದ ಪೂಜಾ ಶಕುನ್, ಗುಲ್ಜಾರ್ ಅನ್ಸಾರಿ ಹಾಗೂ ಅನಿಲ್ ಕುಮಾರ್ ಮೀನಾ ಹೆಸರುಗಳೂ ಸೇರಿವೆ.

'ಸಾಮಾಜಿಕ ಜಾಲತಾಣಗಳಲ್ಲಿ ಈ ಮುಖಂಡರ ಪೋಸ್ಟ್‌ಗಳನ್ನು ವಿಶ್ಲೇಷಿಸಿ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅವರ ಹೇಳಿಕೆಗಳು ಶಾಂತಿಗೆ ಧಕ್ಕೆ ತರುವಂತಿವೆ ಹಾಗೂ ಜನರನ್ನು ಪ್ರಚೋದಿಸುವ ರೀತಿಯಲ್ಲಿವೆ' ಎಂದು ದೆಹಲಿ ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಪ್ರವಾದಿ ಮಹಮ್ಮದ್ ಅವರ ವಿರುದ್ಧ ನೂಪುರ್ ಶರ್ಮಾ, ಸುದ್ದಿವಾಹಿನಿಯೊಂದರಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಪ್ರವಾದಿ ವಿರುದ್ಧ ನವೀನ್ ಕುಮಾರ್ ಜಿಂದಾಲ್ ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೆಗಳನ್ನು ಪ್ರಕಟಿಸಿದ್ದರು. ಉಳಿದದವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಹಾಕಿದ್ದರು.

ಸಾಮರಸ್ಯಕ್ಕೆ ಭಂಗ ತರುವ ಹೇಳಿಕೆಗಳನ್ನು ಪ್ರಕಟಿಸಿದ ಖಾತೆಗಳ ಬಗ್ಗೆ ಮಾಹಿತಿ ನೀಡುವಂತೆ ಸಾಮಾಜಿಕ ಜಾಲತಾಣಗಳ ಸಂಘಟನೆಗಳಿಗೆ ದೆಹಲಿ ಪೊಲೀಸರು ನೋಟಿಸ್ ನೀಡಿದ್ದಾರೆ.

ಪ್ರವಾದಿ ಬಗ್ಗೆ ಹೇಳಿಕೆ ನೀಡಿದ ಕಾರಣಕ್ಕೆ ಜೀವ ಬೆದರಿಕೆ ಕರೆ ಬಂದಿದೆ ಎಂದು ನೂಪುರ್ ಶರ್ಮಾ ಅವರು ದೆಹಲಿ ಪೊಲೀಸರಿಗೆ ದೂರು ನೀಡಿದ್ದರು. ಈ ಸಂಬಂಧ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು, ಶರ್ಮಾ ಅವರಿಗೆ ಭದ್ರತೆ ನೀಡಿದ್ದಾರೆ.

ದಕ್ಷಿಣ ಏಷ್ಯಾದಲ್ಲೇ ವೇಗದ ಬೆಳವಣಿಗೆಯ ವಿವಿ:ಲಂಡನ್ ಕ್ಯೂಎಸ್ ವಿಶ್ಲೇಷಣೆ

ಐಐಎಸ್‌ಸಿ 155ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್ಸಿ) ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದಕ್ಷಿಣ ಏಷ್ಯಾದ ವಿಶ್ವವಿದ್ಯಾಲಯವಾಗಿ ಗುರುತಿಸಿಕೊಂಡಿದ್ದು, 2023ನೇ ಸಾಲಿನ ಕ್ಯೂಎಸ್ ವರ್ಲ್ಡ್ ಯುನಿವರ್ಸಿಟಿ ಶ್ರೇಯಾಂಕದ ಅಗ್ರ 150 ವಿಶ್ವವಿದ್ಯಾಲಯಗಳ ಪಟ್ಟಿಯೊಳಗೆ ಸ್ಥಾನ ಪಡೆಯುವ ಸನಿಹದಲ್ಲಿದೆ.

ಕ್ಯೂಎಸ್ (ಕ್ವಾಕ್ವಾರೆಲ್ಲಿ ಸೈಮಂಡ್ಸ್) ಶ್ರೇಯಾಂಕದ ಅಗ್ರ 200 ವಿಶ್ವವಿದ್ಯಾನಿಲಯಗಳಲ್ಲಿ ಬೆಂಗಳೂರಿನ ಐಐಎಸ್‌ಸಿ ಸಂಶೋಧನಾ ಸಂಸ್ಥೆ ವರ್ಷದಿಂದ ವರ್ಷಕ್ಕೆ ಮೇಲೇರುತ್ತಿದ್ದು, ಕಳೆದ ಬಾರಿಗಿಂತ 31 ಸ್ಥಾನ ಜಿಗಿತಕಂಡು, ಪ್ರಸ್ತುತ 155ನೇ ರ‍್ಯಾಂಕ್‌ಗೆ ಏರಿದೆ. ಕಳೆದ ಬಾರಿ 186ನೇ ರ‍್ಯಾಂಕ್‌ನಲ್ಲಿದ್ದ ಐಐಎಸ್‌ಸಿ, ಬಾಂಬೆ ಐಐಟಿ ಮತ್ತು ದೆಹಲಿ ಐಐಟಿಗಿಂತ ಅಗ್ರ ಶ್ರೇಯಾಂಕದ ಭಾರತೀಯ ವಿಶ್ವವಿದ್ಯಾಲಯ ಎನ್ನುವ ಶ್ರೇಯ ಪಡೆದುಕೊಂಡಿದೆ.

ಲಂಡನ್ ಮೂಲದ ಜಾಗತಿಕ ಉನ್ನತ ಶಿಕ್ಷಣ ವಿಶ್ಲೇಷಕ ಕ್ವಾಕ್ವಾರೆಲ್ಲಿ ಸೈಮಂಡ್ಸ್ (ಕ್ಯೂಎಸ್) ಗುರುವಾರ ವಿಶ್ವದ ಅತ್ಯಂತ ಹೆಚ್ಚು ಜನಪ್ರಿಯ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳ ಶ್ರೇಯಾಂಕದ 19ನೇ ಆವೃತ್ತಿಯನ್ನು ಬಿಡುಗಡೆ ಮಾಡಿದೆ.

ಹಾರ್ವರ್ಡ್, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ ಮತ್ತು ಎಂಐಟಿಗಿಂತಲೂ ಮುನ್ನಡೆ ಸಾಧಿಸಿ, ವಿಶ್ವದ ಉನ್ನತ ಸಂಶೋಧನಾ ವಿಶ್ವವಿದ್ಯಾಲಯವೆನಿಸಿಕೊಂಡಿದೆ.

ಬೆಂಗಳೂರಿನ ಐಐಎಸ್‌ಸಿ

ಇದರ ಜತೆಗೆ ದೇಶದ ನಾಲ್ಕು ಐಐಟಿಗಳು ಅಗ್ರ ರ‍್ಯಾಂಕ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

1400 ವಿಶ್ವವಿದ್ಯಾನಿಲಯಗಳ ಪೈಕಿ 41 ವಿಶ್ವವಿದ್ಯಾನಿಲಯಗಳು ಜಾಗತಿಕವಾಗಿ ಸ್ಥಾನ ಪಡೆದಿವೆ. ಅವುಗಳಲ್ಲಿ 12 ವಿಶ್ವವಿದ್ಯಾಲಯಗಳು ಕಳೆದ ಬಾರಿಗಿಂತ ಶ್ರೇಯಾಂಕಗಳನ್ನು ಸುಧಾರಿಸಿಕೊಂಡಿವೆ. ಕೇವಲ ಮೂರು ವಿಶ್ವವಿದ್ಯಾಲಯಗಳು ಅಗ್ರ 200 ರ‍್ಯಾಂಕ್‌ನೊಳಗಿದ್ದರೆ, 27 ವಿ.ವಿಗಳು ಅಗ್ರ 1000 ರ‍್ಯಾಂಕ್‌ಗಳ ಪಟ್ಟಿಯೊಳಗಿವೆ.

ವಿಶ್ಲೇಷಕರು ಬಿಡುಗಡೆ ಮಾಡಿರುವ ಆವೃತ್ತಿಯ ಪ್ರಕಾರ, ಕಳೆದ ವರ್ಷ 22 ಭಾರತೀಯ ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಶೋಧನಾ ಸಂಸ್ಥೆಗಳು ಅಗ್ರ 1000 ರ‍್ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದವು. ಈ ಬಾರಿ 27 ವಿಶ್ವವಿದ್ಯಾಲಯಗಳಲ್ಲಿ, ಆರು ವಿ.ವಿಗಳು ಅಗ್ರ 300ರೊಳಗೆ ಸ್ಥಾನ ಪಡೆದಿವೆ.

ಬಾಂಬೆ ಐಐಟಿ ಮತ್ತು ದೆಹಲಿ ಐಐಟಿ ಕ್ರಮವಾಗಿ 172 ಮತ್ತು 174ನೇ ಸ್ಥಾನದಲ್ಲಿವೆ. ಎರಡೂ ಸಂಸ್ಥೆಗಳು ಕಳೆದ ವರ್ಷದಿಂದ ಕ್ರಮವಾಗಿ ಐದು ಮತ್ತು ಹನ್ನೊಂದು ಸ್ಥಾನ ಮೇಲೇರಿವೆ. ಇವು ದೇಶದ ಮೊದಲೆರಡು ಅತ್ಯುತ್ತಮ ಉನ್ನತ ಶಿಕ್ಷಣ ಸಂಸ್ಥೆಗಳು ಎನ್ನುವ ಶ್ರೇಯ ಸಂಪಾದಿಸಿವೆ.

ಮದ್ರಾಸ್ (250), ಕಾನ್ಪುರ (264), ಖರಗ್‌ಪುರ (270), ರೂರ್ಕಿ (269), ಗುವಾಹಟಿ (284) ಮತ್ತು ಇಂದೋರ್ (296) ಸೇರಿ ಎಂಟು ಐಐಟಿಗಳು ಅಗ್ರ 300 ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆದಿವೆ.

ದೆಹಲಿ ವಿಶ್ವವಿದ್ಯಾಲಯದ (521), ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (601) ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ (801) ವಿಶ್ವವಿದ್ಯಾಲಯಗಳು ಶ್ರೇಯಾಂಕದಲ್ಲಿ ಕುಸಿತ ಕಂಡ ವಿ.ವಿಗಳಾಗಿವೆ.

ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ.

ಸುದ್ದಿ 2 ನಿಮಿಷ

'ಗಡಿಯಲ್ಲಿ ಚೀನಾದ ಮೂಲಸೌಕರ್ಯ: ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ'

ನವದೆಹಲಿ: ಪೂರ್ವ ಲಡಾಖ್‌ಗೆ ಹೊಂದಿಕೊಂಡಿರುವ ಗಡಿ ಪ್ರದೇಶದಲ್ಲಿ ಚೀನಾ ಮೂಲಸೌಕರ್ಯ ಅಭಿವೃದ್ಧಿಪಡಿಸುತ್ತಿರುವುದು ಸೇರಿದಂತೆ ಗಡಿಯುದ್ದಕ್ಕೂ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಭಾರತವು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಗುರುವಾರ ಹೇಳಿದ್ದಾರೆ.

ಲಡಾಖ್‌ಗೆ ಹೊಂದಿಕೊಂಡಿರುವ ತನ್ನ ಗಡಿಯಲ್ಲಿ ಚೀನಾ ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿಪಡಿಸುತ್ತಿದೆ ಎಂದು ಅಮೆರಿಕದ ಸೇನೆಯ ಪೆಸಿಫಿಕ್ ಕಮಾಂಡ್‌ನ ಜನರಲ್ ಚಾರ್ಲ್ಸ್ ಎ ಫ್ಲಿನ್ ನೀಡಿರುವ ಎಚ್ಚರಿಕೆಗೆ ಪ್ರತಿಕ್ರಿಯಿಸಿ ಅರಿಂದಮ್ ಅವರು ಈ ಹೇಳಿಕೆ ನೀಡಿದ್ದಾರೆ.

ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಲು ಸರ್ಕಾರವು ಬದ್ಧವಾಗಿದೆ ಮತ್ತು ಇದಕ್ಕಾಗಿ ಸಮರ್ಪಕ ಮತ್ತು ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದೂ ಹೇಳಿದ್ದಾರೆ.

ಗಡಿ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಭಾರತವು ಇತ್ತೀಚೆಗಿನ ವರ್ಷಗಳಲ್ಲಿ ಕ್ರಮ ಕೈಗೊಂಡಿದೆ ಎಂದೂ ಹೇಳಿದ್ದಾರೆ. ಲಡಾಖ್ ಗಡಿ ಬಿಕ್ಕಟ್ಟಿನ ಕುರಿತು ಚೀನಾದ ಜೊತೆ ಮಾತುಕತೆ ನಡೆಸಲು ರಾಜತಾಂತ್ರಿಕವಾಗಿಯೂ ಪ್ರಯತ್ನಿಸುತ್ತಿದ್ದೇವೆ ಎಂದಿದ್ದಾರೆ.

ನೀಟ್–ಪಿಜಿ: ವಿಶೇಷ ಕೌನ್ಸೆಲಿಂಗ್ ಕುರಿತು ಇಂದು ತೀರ್ಪು

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ 'ನೀಟ್ ಪಿಜಿ–21'ರಲ್ಲಿ ಅರ್ಹತೆ ಪಡೆದವರಿಗಾಗಿ ನಡೆದ ಅಖಿಲ ಭಾರತ ಕೋಟಾದ ಕೌನ್ಸೆಲಿಂಗ್ ನಂತರವೂ ಉಳಿದಿರುವ 1,456 ಸೀಟುಗಳ ಭರ್ತಿಗೆ, ಇನ್ನೊಂದು ಸುತ್ತಿನ ವಿಶೇಷ ಕೌನ್ಸೆಲಿಂಗ್ ನಡೆಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತ ಆದೇಶವನ್ನು ಸುಪ್ರೀಂಕೋರ್ಟ್ ಗುರುವಾರ ಕಾಯ್ದಿರಿಸಿತು.

ಕಕ್ಷಿದಾರರ ಪರ ವಕೀಲರು ತಮ್ಮ ವಾದವನ್ನು ಪೂರ್ಣಗೊಳಿಸಿದ ಬಳಿಕ ಶುಕ್ರವಾರ ತನ್ನ ಆದೇಶ ಪ್ರಕಟಿಸುವುದಾಗಿ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಅನಿರುದ್ಧ ಬೋಸ್ ಅವರ ಪೀಠ ತಿಳಿಸಿದೆ.

ಕೇಂದ್ರದ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಬಲ್ಬೀರ್ ಸಿಂಗ್ ಅವರು, ಈಗಾಗಲೇ ಫೆಬ್ರುವರಿಯಲ್ಲಿ ತರಗತಿಗಳು ಪ್ರಾರಂಭವಾಗಿದೆ. ಮತ್ತೊಂದು ಸುತ್ತಿನ ಕೌನ್ಸೆಲಿಂಗ್ ನಡೆಸಿದರೆ ನೀಟ್ 2022ರಲ್ಲಿ ಪ್ರವೇಶ ಪಡೆಯುವವರಿಗೆ ನಡೆಯುವ ಬೋಧನಾ ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದರು.

ಹಣ ಅಕ್ರಮ ವರ್ಗಾವಣೆ: 25 ಮಂದಿಗೆ ಶಿಕ್ಷೆ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ದೇಶದಲ್ಲಿ ಈವರೆಗೆ 24 ಜನರಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಸುಮಾರು 17 ವರ್ಷಗಳ ಹಿಂದೆ ಗಂಭೀರ ಆರ್ಥಿಕ ಅಪರಾಧಗಳ ತನಿಖೆಗೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಅಧಿಕಾರ ನೀಡಿದ ಬಳಿಕ 400ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಅಧಿಕೃತ ಮಾಹಿತಿ ಪ್ರಕಾರ, ₹1,04,702 ಕೋಟಿ ಮೌಲ್ಯದ (ತಾತ್ಕಾಲಿಕ) ಆಸ್ತಿ ಜಪ್ತಿ ಮಾಡುವಾಗ ಇ.ಡಿ, ಪಿಎಂಎಲ್‌ಎ ಕಾಯ್ದೆ ಅಡಿ 5,422 ಪ್ರಕರಣ ದಾಖಲಿಸಿದೆ. ಸಮನ್ಸ್ ನೀಡುವುದು, ಬಂಧನ, ತನಿಖಾ ಹಂತದಲ್ಲಿ ಆರೋಪಿಗಳ ಆಸ್ತಿ ಜಪ್ತಿ ಮತ್ತು ನ್ಯಾಯಾಲಯದ ಮುಂದೆ ತಪ್ಪಿತಸ್ಥರನ್ನು ವಿಚಾರಣೆಗೆ ಒಳಪಡಿಸಲು ಇ.ಡಿಗೆ ಕಾನೂನು ಪ್ರಕಾರ ಅಧಿಕಾರ ನೀಡಲಾಗಿದೆ. ಅಂಕಿ ಅಂಶ ಪ್ರಕಾರ ಇದೇ ಅವಧಿಯಲ್ಲಿ ಫೆಡರಲ್ ಏಜೆನ್ಸಿ ಸಹ ಒಟ್ಟು 992 ಚಾರ್ಜ್‌ಶೀಟ್‌ಗಳನ್ನು ನ್ಯಾಯಾಲಯಗಳಿಗೆ ಸಲ್ಲಿಸಿದೆ.

ಅಧಿಕಾರಿಗಳ ಪ್ರಕಾರ, ಶಿಕ್ಷೆಗೊಳಗಾದವರು ಮಾದಕವಸ್ತು ಕಳ್ಳಸಾಗಣೆ, ವಿದೇಶಕ್ಕೆ ಅಕ್ರಮವಾಗಿ ಹಣ ರವಾನೆ, ಉಗ್ರ ಸಂಸ್ಥೆಗಳಿಗೆ ಹಣಕಾಸು ನೆರವು ಮತ್ತು ಸರ್ಕಾರದ ಅನುದಾನದಲ್ಲಿ ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗಿಯಾದವರು. ರಾಜಕಾರಣಿಗಳು, ಅಧಿಕಾರಿಗಳು, ಉದ್ಯಮಿಗಳು, ಕಾರ್ಪೊರೇಟ್ ಸಂಸ್ಥೆ, ವಿದೇಶಿ ಪ್ರಜೆಗಳು ಸೇರಿ ಉನ್ನತ ವ್ಯಕ್ತಿಗಳ ವಿರುದ್ಧ ತನಿಖೆ ನಡೆಸುತ್ತಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಇನ್ನೆರಡು ದಿನಗಳಲ್ಲಿ ಮುಂಗಾರು ಚುರುಕು

ನವದೆಹಲಿ (ಪಿಟಿಐ): 'ಮುಂಗಾರು ವಾಡಿಕೆಯಂತೆ ಪ್ರಗತಿಯಲ್ಲಿದೆ. ಇನ್ನೆರಡು ದಿನಗಳಲ್ಲಿ ಕರ್ನಾಟಕ, ತಮಿಳುನಾಡು, ಗೋವಾ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಮತ್ತಷ್ಟು ಚುರುಕಾಗಲು ಪರಿಸ್ಥಿತಿ ಅನುಕೂಲಕರವಾಗಿದೆ' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ತಿಳಿಸಿದೆ.

'ಮುಂಗಾರು ಪ್ರಗತಿಯಲ್ಲಿ ವಿಳಂಬವಾಗಿಲ್ಲ. ಮುಂದಿನ ಎರಡು ದಿನಗಳಲ್ಲಿ ಮಹಾರಾಷ್ಟ್ರ ತಲುಪುವ ಸಾಧ್ಯತೆಯಿದ್ದು, ನಂತರದ ಎರಡು ದಿನಗಳಲ್ಲಿ ಮುಂಬೈ ಮಹಾನಗರವನ್ನೂ ಆವರಿಸುವ ಸಾಧ್ಯತೆ ಇದೆ' ಎಂದು ಐಎಂಡಿಯ ಹಿರಿಯ ವಿಜ್ಞಾನಿ ಆರ್.ಕೆ. ಜೆನಮಣಿ ತಿಳಿಸಿದರು.

'ಬಲವಾದ ಗಾಳಿ ಮತ್ತು ಮೋಡಗಳ ರಚನೆ ದಟ್ಟವಾಗುತ್ತಿದೆ. ಮುಂಗಾರು ಪ್ರಬಲವಾಗುವ ಲಕ್ಷಣಗಳಿವೆ. ಮೇ 31ರಂದು ಆರಂಭವಾದ ಮುಂಗಾರು ಜೂನ್ 7ರ ನಡುವೆ ದಕ್ಷಿಣ ಮತ್ತು ಮಧ್ಯ ಅರಬ್ಬಿ ಸಮುದ್ರ, ಕೇರಳದಾದ್ಯಂತ, ಕರ್ನಾಟಕ ಹಾಗೂ ತಮಿಳುನಾಡಿನ ಕೆಲವು ಭಾಗಗಳನ್ನು ಆವರಿಸಿತ್ತು. ಈ ಮಧ್ಯೆ ಇಡೀ ಈಶಾನ್ಯ ಭಾರತವನ್ನೂ ಆವರಿಸಿ, ಉತ್ತಮ ಮಳೆಯಾಗಿದೆ' ಎಂದು ತಿಳಿಸಿದರು.

15ರವರೆಗೆ ಉಷ್ಣಾಂಶ ಬದಲಾವಣೆ ಇಲ್ಲ: ದೆಹಲಿ- ರಾಷ್ಟ್ರ ರಾಜಧಾನಿ ಪ್ರದೇಶ ಮತ್ತು ವಾಯುವ್ಯ ಭಾರತದ ಇತರ ಭಾಗಗಳಲ್ಲಿ ವಾರಾಂತ್ಯದಲ್ಲಿ ಗರಿಷ್ಠ ತಾಪಮಾನವು ಕಡಿಮೆಯಾಗಲಿದೆ. ಆದರೆ, ಜೂನ್ 15ರವರೆಗೆ ಯಾವುದೇ ದೊಡ್ಡ ಬದಲಾವಣೆಯ ಸಾಧ್ಯತೆಯಿಲ್ಲ. ತಾಪಮಾನವು 40 ಡಿಗ್ರಿ ಸೆಲ್ಸಿಯಸ್ ಮತ್ತು 43 ಡಿಗ್ರಿ ಸೆಲ್ಸಿಯಸ್ ನಡುವೆ ಇರಲಿದೆ ಎಂದು ಐಎಂಡಿ ಹೇಳಿದೆ.

ಇ.ಡಿ ಕಚೇರಿ ಎದುರು ಕಾಂಗ್ರೆಸ್ ಸತ್ಯಾಗ್ರಹ

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜೂನ್ 13 ರಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜಾರಿ ನಿರ್ದೇಶನಾಲಯದ ಮುಂದೆ ಹಾಜರಾಗಲಿರುವ ಹಿನ್ನೆಲೆಯಲ್ಲಿ, ಪಕ್ಷದ ನಾಯಕರು ಮತ್ತು ಸಂಸದರು ಹಾಗೂ ಮುಖಂಡರು ಇಲ್ಲಿನ ಕೇಂದ್ರ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ 'ಸತ್ಯಾಗ್ರಹ' ನಡೆಸಲು ಗುರುವಾರ ನಿರ್ಧರಿಸಿದ್ದಾರೆ.

'ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಇ.ಡಿ ದುರ್ಬಳಕೆಯ ವಿರುದ್ಧ ಕಾಂಗ್ರೆಸ್ ನಾಯಕರು ದೇಶದಾದ್ಯಂತ ಎಲ್ಲಾ ಜಾರಿ ನಿರ್ದೇಶನಾಲಯ ಕಚೇರಿಗಳ ಮುಂದೆ 'ಸತ್ಯಾಗ್ರಹ' ನಡೆಸಲಿದ್ದಾರೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ವರ್ಚುವಲ್ ಸಭೆ ಬಳಿಕ ಹೇಳಿದರು.

ಬಾಲಾರೋಪಿಗಳನ್ನು ವಯಸ್ಕರೆಂದು ಪರಿಗಣಿಸಿ: ಅರ್ಜಿ ಸಲ್ಲಿಸಲು ಚಿಂತನೆ

ಹೈದರಾಬಾದ್ (ಪಿಟಿಐ): 17 ವರ್ಷದ ಬಾಲಕಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಐವರು ಬಾಲಾರೋಪಿಗಳಿದ್ದು, ಇವರನ್ನು ವಯಸ್ಕರು ಎಂದು ಪರಿಗಣಿಸಿ ವಿಚಾರಣೆ ನಡೆಸಲು ಅನುಮತಿ ಕೋರಿ ಬಾಲ ನ್ಯಾಯಮಂಡಳಿಗೆ ಮನವಿ ಸಲ್ಲಿಸಲು ಹೈದರಾಬಾದ್ ಪೊಲೀಸರು ಮುಂದಾಗಿದ್ದಾರೆ.

ಮೇ 28ರಂದು ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಆರು ಜನರನ್ನು ಬಂಧಿಸಲಾಗಿದೆ. ಈ ಪೈಕಿ ಒಬ್ಬ ಬಾಲಾರೋಪಿಯು ಸಂತ್ರಸ್ತೆಯ ಜತೆ ಅನುಚಿತವಾಗಿ ವರ್ತಿಸುತ್ತಿರುವ ದೃಶ್ಯ ವಿಡಿಯೊದಲ್ಲಿದ್ದು, ಅಪರಾಧದಲ್ಲಿ ಭಾಗಿಯಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಬಾಲಾಪರಾಧಿಗಳ ವಿರುದ್ಧದ ಆರೋಪ ಸಾಬೀತಾದರೆ 3 ವರ್ಷ ಶಿಕ್ಷೆ ವಿಧಿಸಬಹುದು. 'ಆರೋಪಿಗಳಿಗೆ ಗರಿಷ್ಠ ಶಿಕ್ಷೆ ಸಿಗಬೇಕು ಎಂಬುದು ನಮ್ಮ ಉದ್ದೇಶ. ಈ ಬಗ್ಗೆ ಮಂಡಳಿಯ ಎದುರು ಮನವಿ ಸಲ್ಲಿಸುವ ಬಗ್ಗೆ ಪರಿಶೀಲಿಸುತ್ತಿದ್ದೇವೆ' ಎಂದು ಹೈದರಾಬಾದ್ ಪೊಲೀಸ್ ಆಯುಕ್ತ ಸಿ.ವಿ. ಆನಂದ್ ಅವರು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿ ಇದೆ. 10,000 -15,000. 8951315839, 9880545002

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

Marketing & Sales

WANTED SALES Person / Staff Location - Jayanagar /Malleshwaram Contact 9844187234 Sanjay Jewellers

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Security & Detectives

WALK IN Interview for Freshers/ Experienced INVESTIGATORS, within 18-40 years of age. Qualificaton no bar, owning 100cc bike at Koramangala. Call : 9845510965. www.globedetective.com

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

Walk-in

ಕನ್ನಡ ಮಾತನಾಡುವ ಟೆಲಿಕಾಲರ್ಸ್ ಯುವತಿಯರು ತಕ್ಷಣ ಬೇಕಾಗಿದ್ದಾರೆ,ವಯಸ್ಸು 30 ವರ್ಷದ ಕೆಳಗೆ, ಕಲ್ಯಾಣ್ ನಗರ ಸುತ್ತಮುತ್ತ ವಾಸಿಸುವವರಿಗೆ ಆದ್ಯತೆ. 8884773331/ 08048531033

ವ್ಯಾಪಾರ

Business to Business

Services

ನಾವು ವೈಯಕ್ತಿಕ, ವ್ಯಾಪಾರ, ಆಸ್ತಿ, ಕೃಷಿ ಮತ್ತು ಶೈಕ್ಷಣಿಕ ಸಾಲವನ್ನು ಒದಗಿಸುತ್ತೇವೆ. (ಏಜೆಂಟರು ಸ್ವಾಗತ) Ph. 8222841175, 8278291749

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

ಇತರೆ

Caterers / Office Lunch

CANTEEN CONTRACTOR required to operate kiosk in petrol pump at Hoskote. PH 9591997014,8618556359

ಪ್ರವಾಸ

Travel

ಸ್ವಯಂಭೂ ಹಿಮಲಿಂಗ ಅಮರನಾಥ್, ವೈಷ್ಣವಿದೇವಿ ಕಾಶ್ಮೀರ್ ಅಮೃತಸರ್ 26.06.2022 ರಿಂದ 13/17 ದಿನಗಳು. ಚಿತ್ರಕೂಟ, ನೈಮಿಶಾರಣ್ಯ ಕಾಶಿ,ಗಯಾ, ಪ್ರಯಾಗ,ಅಯೋಧ್ಯ 8 ದಿನಗಳು. ಸಿಕ್ಕಿಂ,ಕಾಮಕ್ಯ, ಡಾರ್ಜಲಿಂಗ್, ಪುರಿ,ಭುವನೇಶ್ವರ್ 14 ದಿನಗಳು. 07.08.2022 14.08.2022 ರಿಂದ ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

13.7.2022 13/7ದಿನಗಳು ವಿಮಾನ,ACಬಸ್, ಊಟ,ರೂಂ ವಸತಿಯೊಂದಿಗೆ ಕಾಶಿ,ಗಯಾ, ಆಗ್ರಾ,ದೆಹಲಿ,ಅಯೋಧ್ಯ, ನೈಮಿಷರಣ್ಯಾ.,04.09.2022 12ದಿನಗಳು ನೇಪಾಳ,ಕಠ್ಮಂಡು, ಮುಕ್ತಿನಾಥ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).6363416487/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

ಸಂಕ್ಷಿಪ್ತ ಸುದ್ದಿ

ಪಾಕ್ ಡ್ರೋನ್ ಹಿಮ್ಮೆಟ್ಟಿಸಿದ ಬಿಎಸ್‌ಎಫ್

ಜಮ್ಮು (ಪಿಟಿಐ): ಇಲ್ಲಿನ ಅಂತರರಾಷ್ಟ್ರೀಯ ಗಡಿ (ಐಬಿ) ಬಳಿ ಶಂಕಿತ ಪಾಕ್ ಡ್ರೋನ್ ಗುರುತಿಸಿದ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರು ಗುಂಡಿನ ದಾಳಿ ನಡೆಸುವ ಮೂಲಕ ಅದನ್ನು ಹಿಮ್ಮೆಟ್ಟಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

'ಅರ್ನಿಯಾ ಪ್ರದೇಶದಲ್ಲಿ (ಅಂತರರಾಷ್ಟ್ರೀಯ ಗಡಿ ಭಾಗ) ಗುರುವಾರ ಬೆಳಿಗ್ಗೆ 04:15ರ ವೇಳೆಯಲ್ಲಿ ಡ್ರೋನ್ ಅನ್ನು ಗಮನಿಸಲಾಯಿತು. ಕೂಡಲೇ ಎಚ್ಚೆತ್ತ ಬಿಎಸ್‌ಎಫ್ ಯೋಧರು ಸುಮಾರು 300 ಮೀಟರ್ ಎತ್ತರದಲ್ಲಿ ಹಾರುತ್ತಿದ್ದ ಈ ಶಂಕಿತ ಡ್ರೋನ್ ವಿರುದ್ಧ ಗುಂಡಿನ ದಾಳಿ ನಡೆಸಿ, ಅದು ಹಿಂತಿರುಗುವಂತೆ ಮಾಡಿದರು' ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದರು.

ಪ್ರಾಣಿಗಳಿಗೆ ಕೋವಿಡ್ 19 'ಅನೊಕೊವ್ಯಾಕ್ಸ್'

ನವದೆಹಲಿ (ಪಿಟಿಐ): ಪ್ರಾಣಿಗಳಿಗೆ ನೀಡಬಹುದಾದ, ದೇಶಿಯವಾಗಿಯೇ ಅಭಿವೃದ್ಧಿಪಡಿಸಿರುವ ಕೋವಿಡ್ 19 ಲಸಿಕೆ 'ಅನೊಕೊವ್ಯಾಕ್ಸ್' ಅನ್ನು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಗುರುವಾರ ಬಿಡುಗಡೆ ಮಾಡಿದರು.

ಹರಿಯಾಣ ಮೂಲದ ಐಸಿಎಆರ್-ನ್ಯಾಷನಲ್ ರಿಸರ್ಚ್ ಸೆಂಟರ್ ಆನ್ ಇಕ್ವೈನ್ಸ್ (ಎನ್‌ಆರ್‌ಸಿ)ಈ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ. ಈ ಲಸಿಕೆ ನಾಯಿ, ಸಿಂಹ, ಚಿರತೆ, ಇಲಿ ಮತ್ತು ಮೊಲಗಳಿಗೆ ಸುರಕ್ಷಿತವಾಗಿದೆ ಎಂದು ಐಸಿಎಆರ್ ಹೇಳಿಕೆಯಲ್ಲಿ ತಿಳಿಸಿದೆ.

ರಾಜ್ಯಸಭೆ ಚುನಾವಣೆ: 16 ಸ್ಥಾನಗಳಿಗೆ ಇಂದು ಮತದಾನ

ಹೆಚ್ಚುವರಿ ಅಭ್ಯರ್ಥಿಗಳತ್ತ ಎಲ್ಲರ ಚಿತ್ತ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ 16 ಸ್ಥಾನಗಳಿಗೆ ಕರ್ನಾಟಕ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಹರಿಯಾಣದಲ್ಲಿ ಶುಕ್ರವಾರ ಮತದಾನ ನಡೆಯಲಿದೆ. ರಾಜಸ್ಥಾನ ಮತ್ತು ಹರಿಯಾಣದಲ್ಲಿ ಬಿಜೆಪಿ ಬೆಂಬಲಿಸಿರುವ ಇಬ್ಬರು ಪಕ್ಷೇತರ ಅಭ್ಯರ್ಥಿಗಳತ್ತಲೇ ಎಲ್ಲರ ಕಣ್ಣು ನೆಟ್ಟಿದೆ.

ಈ ಬಾರಿ ತೆರವಾಗಿದ್ದ 57 ಸ್ಥಾನಗಳಿಗೆ ವಿವಿಧ ರಾಜ್ಯಗಳಿಂದ 41 ಮಂದಿ ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ 16 ಸ್ಥಾನಗಳಿಗೆ ಈ ನಾಲ್ಕೂ ರಾಜ್ಯಗಳಲ್ಲಿ ಶುಕ್ರವಾರ ಮತದಾನ ನಡೆಯಲಿದೆ. ಈಗಾಗಲೇ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ, ಬಿಜೆಪಿಯ ಸ್ಥಾನ ಕಳೆದ ಬಾರಿಗಿಂತ ಒಂದು ಕಡಿಮೆಯಾಗಿದೆ. ಉಳಿದ ರಾಜ್ಯಗಳಲ್ಲಿ ಈ ನಷ್ಟವನ್ನು ತುಂಬಿಕೊಳ್ಳಲು ಬಿಜೆಪಿ ಹರಸಾಹಸ ಪಡುತ್ತಿದೆ. ಬೇರೆ ಪಕ್ಷಗಳ ಶಾಸಕರನ್ನು ಬಿಜೆಪಿ ತನ್ನತ್ತ ಸೆಳೆಯುವ ಸಾಧ್ಯತೆ ಇರುವ ಕಾರಣ, ಬಿಜೆಪಿಯೇತರ ಪಕ್ಷಗಳು ತಮ್ಮ ಶಾಸಕರನ್ನು ರೆಸಾರ್ಟ್‌ಗಳಲ್ಲಿ ಭದ್ರಪಡಿಸಿವೆ.

ರಾಜಸ್ಥಾನದಲ್ಲಿ ಕಾಂಗ್ರೆಸ್ ಇಬ್ಬರು ಮತ್ತು ಬಿಜೆಪಿ ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಬೇಕಾದಷ್ಟು ಮತಗಳನ್ನು ಹೊಂದಿವೆ. ಆದರೆ, ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡ ಬಳಿಕವೂ ಬಿಜೆಪಿ ಬಳಿ 30 ಹೆಚ್ಚುವರಿ ಮತಗಳು ಉಳಿಯಲಿವೆ. ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿರುವ ಪತ್ರಿಕೋದ್ಯಮಿ ಸುಭಾಷ್ ಚಂದ್ರ ಅವರಿಗೆ ಈ ಹೆಚ್ಚುವರಿ ಮತಗಳನ್ನು ನೀಡುವುದಾಗಿ ಬಿಜೆಪಿ ಬೆಂಬಲ ಘೋಷಿಸಿದೆ. ಆದರೆ, ಚಂದ್ರ ಅವರನ್ನು ಗೆಲ್ಲಿಸಿಕೊಳ್ಳಲು ಬಿಜೆಪಿಗೆ ಮತ್ತಷ್ಟು ಮತಗಳ ಅವಶ್ಯಕತೆ ಇದೆ. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಶಾಸಕರನ್ನು ಬಿಜೆಪಿಯು ತನ್ನತ್ತ ಸೆಳೆದುಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಶಿವಸೇನಾ ಶಾಸಕರನ್ನು ಮುಂಬೈನ ದಿ ರಿಟ್ರೀಟ್ ರೆಸಾರ್ಟ್‌ನಿಂದ ಬೇರೊಂದು ಹೋಟೆಲ್‌ಗೆ ಈಚೆಗೆ ಸ್ಥಳಾಂತರಿಸಲಾಯಿತು –ಪಿಟಿಐ ಚಿತ್ರ

ರಾಜಸ್ಥಾನದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಒಡಕು ಎದ್ದು ಕಾಣಿಸುತ್ತಿದೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಒಂದೆಡೆಯಾದರೆ, ಸಚಿನ್ ಪೈಲಟ್ ಅವರದ್ದು ಮತ್ತೊಂದು ಬಣ. ಇಬ್ಬರು ನಾಯಕರು ಒಗ್ಗಟ್ಟಿನಿಂದ ರಾಜ್ಯಸಭೆ ಚುನಾವಣೆ ಎದುರಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ, ಕಾಂಗ್ರೆಸ್‌ನಿಂದ ಅಡ್ಡಮತದಾನವಾದರೆ ಬಿಜೆಪಿಗೆ ಲಾಭವಾಗಲಿದೆ.

ಹರಿಯಾಣದಲ್ಲಿ ಬಿಜೆಪಿ ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ. ಆ ಬಳಿಕವೂ ಎನ್‌ಡಿಎ ಮೈತ್ರಿಕೂಟದ ಬಳಿ 21 ಮತಗಳು ಉಳಿಯಲಿವೆ. ಈ ಮತಗಳನ್ನು ಹೆಚ್ಚುವರಿಯಾಗಿ ಕಣಕ್ಕೆ ಇಳಿದಿರುವ ಪಕ್ಷೇತರ ಅಭ್ಯರ್ಥಿ ಕಾರ್ತಿಕೇಯ ಶರ್ಮಾ ಅವರಿಗೆ ನೀಡುವುದಾಗಿ ಬಿಜೆಪಿ ಹೇಳಿದೆ. ತನ್ನ ಶಾಸಕರನ್ನು ಬಿಜೆಪಿ ಸೆಳೆಯುವ ಸಾಧ್ಯತೆ ಇದೆ ಎಂದಿರುವ ಕಾಂಗ್ರೆಸ್, ತನ್ನೆಲ್ಲಾ ಶಾಸಕರನ್ನು ರೆಸಾರ್ಟ್ ಒಂದರಲ್ಲಿ ಭದ್ರಪಡಿಸಿದೆ.

ಆದರೆ ಪಕ್ಷದ ರಾಜ್ಯ ಘಟಕದಲ್ಲಿ ಒಡಕು ಇದ್ದೇ ಇದೆ. ರಾಜ್ಯ ಘಟಕದ ಅಧ್ಯಕ್ಷ ಭೂಪಿಂದರ್ ಸಿಂಗ್ ಹೂಡಾ ಮತ್ತು ಬಿಷ್ಣೋಯಿ ನಾಯಕ ಕುಲದೀಪ್ ಸಿಂಗ್ ಬಿಷ್ಣೋಯಿ ಮಧ್ಯೆ ಒಡಕು ಮೂಡಿದೆ. ಈ ಒಡಕಿನ ಲಾಭ ಪಡೆಯಲು ಬಿಜೆಪಿ ಯತ್ನಿಸಬಹುದು ಎಂದು ಕಾಂಗ್ರೆಸ್ ಎಚ್ಚರ ವಹಿಸಿದೆ.

ಮಹಾರಾಷ್ಟ್ರದಿಂದ ಆರು ಸ್ಥಾನಗಳಿಗೆ ಸಂಸದರು ಆಯ್ಕೆಯಾಗಲಿದ್ದಾರೆ. ಆದರೆ ಶಿವಸೇನಾ ಮತ್ತು ಬಿಜೆಪಿ ಹೆಚ್ಚುವರಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. ಒಟ್ಟು ಏಳು ಮಂದಿ ಕಣದಲ್ಲಿದ್ದಾರೆ. ಆರು ಸ್ಥಾನಗಳಿಗೆ ಅಗತ್ಯವಿರುವಷ್ಟು ಮತಗಳು ಮುಗಿದು, ಹೆಚ್ಚುವರಿಯಾಗಿ ಇನ್ನೂ 25 ಮತಗಳು ಸಣ್ಣ–ಪುಟ್ಟ ಪಕ್ಷಗಳ ಬಳಿ ಉಳಿಯಲಿವೆ. ಇವುಗಳ ಜತೆಗೆ, ಆಡಳಿತ ಮೈತ್ರಿಕೂಟದ ಕೆಲವು ಮತಗಳನ್ನು ಸೆಳೆದರೆ ಬಿಜೆಪಿ ತನ್ನ ಹೆಚ್ಚುವರಿ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಬಹುದು. ಆದರೆ, ಇದನ್ನು ತಪ್ಪಿಸುವ ಸಲುವಾಗಿ ಆಡಳಿತಾರೂಢ ಮೈತ್ರಿಕೂಟವು ತನ್ನ ಶಾಸಕರನ್ನು ರೆಸಾರ್ಟ್‌ಗಳಲ್ಲಿ ಭದ್ರಪಡಿಸಿವೆ.

ನಾಲ್ಕೂ ರಾಜ್ಯಗಳಲ್ಲಿ ಒಂದಾದರೂ ಹೆಚ್ಚುವರಿ ಸ್ಥಾನವನ್ನು ಗೆದ್ದುಕೊಳ್ಳಲೇಬೇಕು ಎಂದು ಬಿಜೆಪಿ ಯತ್ನಿಸುತ್ತಿದೆ. ಹೀಗಾಗಿ ಕಣದಲ್ಲಿರುವ ಹೆಚ್ಚುವರಿ ಮತ್ತು ಪಕ್ಷೇತರ ಅಭ್ಯರ್ಥಿಗಳತ್ತ ಎಲ್ಲರ ಕಣ್ಣು ನೆಟ್ಟಿದೆ.

ದೇಶಮುಖ್, ಮಲಿಕ್‌ಗೆ ಜಾಮೀನು ಇಲ್ಲ

ಮುಂಬೈ: ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ ಆಘಾಡಿಗೆ ರಾಜ್ಯಸಭೆ ಚುನಾವಣೆ ಸಂದರ್ಭದಲ್ಲಿ ಹಿನ್ನಡೆಯಾಗಿದೆ. ಎನ್‌ಸಿಪಿ ಮುಖಂಡರಾದ ಅನಿಲ್ ದೇಶಮುಖ್ ಮತ್ತು ನವಾಬ್ ಮಲಿಕ್ ಅವರಿಗೆ ಮತ ಹಾಕುವುದಕ್ಕಾಗಿ ಒಂದು ದಿನದ ಜಾಮೀನು ನೀಡಲು ವಿಶೇಷ ನ್ಯಾಯಾಲಯ ಗುರುವಾರ ನಿರಾಕರಿಸಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಈ ಇಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ದೇಶಮುಖ್ ಮತ್ತು ಮಲಿಕ್ ಅವರು ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಶುಕ್ರವಾರ ಬೆಳಿಗ್ಗೆ ಇದರ ವಿಚಾರಣೆ ನಡೆಯಲಿದೆ.

ಜನ ಪ್ರಾತಿನಿಧ್ಯ ಕಾಯ್ದೆ ಅಡಿಯಲ್ಲಿ ಈ ಇಬ್ಬರಿಗೂ ಮತದಾನದ ಹಕ್ಕು ಇಲ್ಲ ಎಂದು ಜಾರಿ ನಿರ್ದೇಶನಾಲಯವು ವಾದಿಸಿತ್ತು.

ರಾಜ್ಯಸಭೆಯ ನಾಲ್ಕು ಸ್ಥಾನಗಳನ್ನು ಗೆಲ್ಲಲು ಬೇಕಾದಷ್ಟು ಸದಸ್ಯ ಬಲ ತನಗೆ ಇದೆ ಎಂದು ಮಹಾ ವಿಕಾಸ ಆಘಾಡಿ ಹೇಳಿದೆ.

ಟಿ20 ಕ್ರಿಕೆಟ್: ದೊಡ್ಡ ಮೊತ್ತ ಬೆನ್ನತ್ತಿ ಗೆದ್ದ ದಕ್ಷಿಣ ಆಫ್ರಿಕಾ; ಇಶಾನ್ ಕಿಶನ್ ಅರ್ಧಶತಕ ವ್ಯರ್ಥ

ರಸಿ, ಮಿಲ್ಲರ್ ಅಬ್ಬರಕ್ಕೆ ಒಲಿದ ಜಯ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದ ರಸಿ ವ್ಯಾನ್ ಡರ್ ಡಸೆ ಮತ್ತು ಡೇವಿಡ್ ಮಿಲ್ಲರ್ ಅವರಿಬ್ಬರ ಸಿಡಿಲಬ್ಬರದ ಬ್ಯಾಟಿಂಗ್‌ಗೆ ಆತಿಥೇಯ ಭಾರತ ತಂಡದ ಬೌಲರ್‌ಗಳು ಬೆಚ್ಚಿಬೆರಗಾದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಗೆಲುವಿಗಾಗಿ 212 ರನ್‌ಗಳನ್ನು ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡವು 19.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿಮುಟ್ಟಿತು. 7 ವಿಕೆಟ್‌ಗಳಿಂದ ಗೆದ್ದಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ರಸಿ (ಅಜೇಯ 75; 46ಎ, 4X7, 6X5) ಮತ್ತು ಮಿಲ್ಲರ್ (ಅಜೇಯ 64; 31ಎ, 4X4, 6X5) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 131 ರನ್ ಗಳಿಸಿದರು. ತಂಡವು 8.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 81 ರನ್ ಕಳೆದುಕೊಂಡಿತ್ತು. 68 ಎಸೆತಗಳಲ್ಲಿ 130 ರನ್ ಗಳಿಸುವ ಒತ್ತಡ ಇತ್ತು. ಕ್ವಿಂಟನ್ ಡಿಕಾಕ್, ತೆಂಬಾ ಬವುಮಾ ಮತ್ತು ಡ್ವೇನ್ ಪ್ರಿಟೋರಿಯಸ್ ಔಟಾಗಿದ್ದರು.

ದಕ್ಷಿಣ ಆಫ್ರಿಕಾ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ ಡೇವಿಡ್ ಮಿಲ್ಲರ್ ಮತ್ತು ರಸಿ ವ್ಯಾನ್ ಡರ್ ಡಸೆ ಸಂಭ್ರಮಿಸಿದ್ದು ಹೀಗೆ –ಎಎಫ್‌ಪಿ ಚಿತ್ರ

ಈ ಹಂತದಲ್ಲಿ ರಸಿ ಮತ್ತು ಮಿಲ್ಲರ್ ತಮ್ಮ ಮೇಲಿನ ಭರವಸೆ ಉಳಿಸಿಕೊಂಡರು. ಕೇವಲ 22 ಎಸೆತಗಳಲ್ಲಿ ಅರ್ಧಶತಕ ಹೊಡೆದ ಮಿಲ್ಲರ್ ಸಂಭ್ರಮಿಸಿದರು. 16ನೇ ಓವರ್‌ನಲ್ಲಿ ವ್ಯಾನ್ ಕ್ಯಾಚ್ ಕೈಬಿಟ್ಟ ಫೀಲ್ಡರ್ ಶ್ರೇಯಸ್ ಅಯ್ಯರ್ ಜೀವದಾನ ನೀಡಿದರು. ಇದನ್ನು ಸಮರ್ಥವಾಗಿ ಬಳಸಿಕೊಂಡ ವ್ಯಾನ್ ಮತ್ತು ಮಿಲ್ಲರ್ ಜೋಡಿಯು ತಂಡವನ್ನು ಗೆಲುವಿನ ದಡಕ್ಕೆ ಸೇರಿಸಿತು. ಹಾರ್ದಿಕ್ ಪಾಂಡ್ಯ ಕೇವಲ ಒಂದು ಓವರ್ ಹಾಕಿ 18 ರನ್ ಬಿಟ್ಟುಕೊಟ್ಟರು. ಆವೇಶ್ ಖಾನ್ ನಾಲ್ಕು ಓವರ್‌ಗಳಲ್ಲಿ 35 ರನ್ ಕೊಟ್ಟರು. ಉಳಿದ ಬೌಲರ್‌ಗಳೆಲ್ಲರೂ ಆವೇಶ್‌ಗಿಂತಲೂ ಹೆಚ್ಚು ತುಟ್ಟಿಯಾದರು.

ಇಶಾನ್ ಅರ್ಧಶತಕ: ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇಶಾನ್ ಕಿಶನ್ (76; 48ಎ) ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 211 ರನ್ ಗಳಿಸಿತು.

ಆರಂಭಿಕ ಜೋಡಿ ಇಶಾನ್ ಕಿಶನ್ (76; 48ಎ, 4X11, 6X3) ಮತ್ತು ಋತುರಾಜ್ ಗಾಯಕವಾಡ್ (23; 15ಎ, 6X3) ಮೊದಲ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿ ಅಮೋಘ ಅರಂಭ ನೀಡಿದರು.

ಇಶಾನ್ ಜೊತೆಗೂಡಿದ ಶ್ರೇಯಸ್ ಅಯ್ಯರ್ ಕೂಡ ಬೀಸಾಟವಾಡಿದರು. ಮೂರು ಸಿಕ್ಸರ್‌ಗಳನ್ನೂ ಸಿಡಿಸಿದರು. ಕೇವಲ 27 ಎಸೆತಗಳಲ್ಲಿ 36 ರನ್‌ಗಳನ್ನು ಗಳಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 80 ರನ್‌ಗಳನ್ನು ಸೇರಿಸಿದರು. ಶತಕದತ್ತ ಹೆಜ್ಜೆಟ್ಟಿದ್ದ ಇಶಾನ್ 13ನೇ ಓವರ್‌ನಲ್ಲಿ ಕೇಶವ್ ಮಹಾರಾಜ್ ಎಸೆತವನ್ನು ಸಿಕ್ಸರ್‌ಗೆತ್ತುವ ಭರದಲ್ಲಿ ಟ್ರಿಸ್ಟಾನ್ ಸ್ಟಬ್ಸ್‌ಗೆ ಸುಲಭದ ಕ್ಯಾಚಿತ್ತರು. ಮೂರು ಓವರ್‌ಗಳ ನಂತರ ಶ್ರೇಯಸ್ ಕೂಡ ಔಟಾದರು.

ಇಶಾನ್ ಕಿಶನ್

ಸ್ಕೋರ್ ಕಾರ್ಡ್

ಭಾರತ 4ಕ್ಕೆ 211 (20 ಓವರ್)
ಇಶಾನ್ ಸಿ ಸ್ಟಬ್ಸ್ ಬಿ ಮಹಾರಾಜ್ 76 (48ಎ, 4X11, 6X3), ಋತುರಾಜ್ ಸಿ ಬವುಮಾ ಬಿ ಪಾರ್ನೆಲ್ 23 (15ಎ, 6X3), ಶ್ರೇಯಸ್ ಬಿ ಪ್ರಿಟೋರಿಯಸ್ 36 (27ಎ, 4X1, 6X3), ರಿಷಭ್ ಸಿ ವ್ಯಾನ್ ಡರ್ ಡಸೆ ಬಿ ನಾರ್ಕಿಯಾ 29 (16ಎ, 4X2, 6X2), ಹಾರ್ದಿಕ್ ಔಟಾಗದೆ 31 (12ಎ, 4X2, 6X3), ಕಾರ್ತಿಕ್ ಔಟಾಗದೆ 1 (2ಎ)
ಇತರೆ (ಬೈ 1, ಲೆಗ್‌ಬೈ 2, ವೈಡ್ 12) 15
ವಿಕೆಟ್ ಪತನ: 1–57 (ಋತುರಾಜ್ ಗಾಯಕವಾಡ್, 6.2), 2–137 (ಇಶಾನ್ ಕಿಶನ್, 12.6), 3–156 (ಶ್ರೇಯಸ್ ಅಯ್ಯರ್, 16.1), 4–202 (ರಿಷಭ್ ಪಂತ್, 19.1)
ಬೌಲಿಂಗ್: ಕೇಶವ್ ಮಹಾರಾಜ್ 3–0–43–1, ಕಗಿಸೊ ರಬಾಡ 4–0–35–0, ಆ್ಯನ್ರಿಚ್ ನಾರ್ಕಿಯಾ 4–0–36–1, ವೇಯ್ನ್ ಪಾರ್ನೆಲ್ 4–0–32–1, ತಬ್ರೇಜ್ ಶಂಸಿ 2–0–27–0, ಡ್ವೇನ್ ಪ್ರಿಟೋರಿಯಸ್ 3–0–35–1

ದಕ್ಷಿಣ ಆಫ್ರಿಕಾ 3ಕ್ಕೆ 212 (19.1 ಓವರ್)
ಡಿಕಾಕ್ ಸಿ ಇಶಾನ್ ಬಿ ಅಕ್ಷರ್ 22 (18 ಎ, 4X3), ಬವುಮಾ ಸಿ ಪಂತ್ ಬಿ ಭುವನೇಶ್ವರ್ 10 (8 ಎ, 4X2), ಪ್ರಿಟೋರಿಯಸ್ ಬಿ ಹರ್ಷಲ್ 29 (13 ಎ, 4X1, 6X4), ರಸಿ ಔಟಾಗದೆ 75 (46 ಎ, 4X7, 6X5), ಮಿಲ್ಲರ್ ಔಟಾಗದೆ 64 (31 ಎ, 4X4, 6X5)
ಇತರೆ (ಲೆಗ್ ಬೈ 7, ನೋಬಾಲ್ 1, ವೈಡ್ 4) 12
ವಿಕೆಟ್ ಪತನ: 1-22 (ತೆಂಬಾ ಬವುಮಾ, 2.2), 2-61 (ಡ್ವೇನ್‌ಪ್ರಿಟೋರಿಯಸ್, 5.2), 3-81 (ಕ್ವಿಂಟನ್ ಡಿಕಾಕ್, 8.4)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–43–1, ಆವೇಶ್ ಖಾನ್ 4–0–45–0, ಯಜುವೇಂದ್ರ ಚಾಹಲ್ 2.1–0–26–0, ಹಾರ್ದಿಕ್ ಪಾಂಡ್ಯ 1–0–18–0, ಹರ್ಷಲ್ ಪಟೇಲ್ 4–0–43–1, ಅಕ್ಷರ್ ಪಟೇಲ್ 4–0–40–1

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 7 ವಿಕೆಟ್ ಗೆಲುವು

ಮುಂಬೈಗೆ ವಿಶ್ವದಾಖಲೆ ಜಯ

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಸೆಮಿಫೈನಲ್‌ಗೆ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಕ್ರಿಕೆಟ್ ತಂಡವು ಗುರುವಾರ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಉತ್ತರಾಖಂಡದ ವಿರುದ್ಧ 725 ರನ್‌ಗಳಿಂದ ಜಯಿಸಿತು. ಇದರೊಂದಿಗೆ ದೇಶಿ ಕ್ರಿಕೆಟ್‌ನಲ್ಲಿ ಅತಿ ದೊಡ್ಡ ಅಂತರದಿಂದ ಗೆದ್ದ ವಿಶ್ವದಾಖಲೆ ನಿರ್ಮಿಸಿತು.

92 ವರ್ಷಗಳ ಹಿಂದೆ ಶೆಫಿಲ್ಡ್ ಶೀಲ್ಡ್ ಟೂರ್ನಿಯಲ್ಲಿ ನ್ಯೂ ಸೌತ್‌ವೇಲ್ಸ್ ತಂಡವು 685 ರನ್‌ಗಳಿಂದ ಕ್ವಿನ್ಸ್‌ಲೆಂಡ್ ವಿರುದ್ಧ ಗೆದ್ದಿದ್ದು ಇದುವರೆಗಿನ ದಾಖಲೆಯಾಗಿತ್ತು. ರಣಜಿ ಟ್ರೋಫಿ ಟೂರ್ನಿಯಲ್ಲಿ 1953–54ರಲ್ಲಿ ಬಂಗಾಳ ತಂಡವು 540 ರನ್‌ಗಳಿಂದ ಒಡಿಶಾ ಎದುರು ಜಯಿಸಿದ ದಾಖಲೆಯೂ ಇತ್ತು.

ನಗರದ ಹೊರವಲಯದ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ನಾಲ್ಕನೇ ದಿನ ಮುಂಬೈ ಈ ಸಾಧನೆ ಮಾಡಿತು. ಮುಂಬೈ ತಂಡವು ಉತ್ತರಾಖಂಡಕ್ಕೆ 794 ರನ್‌ಗಳ ಗುರಿ ನೀಡಿತ್ತು. ಅದಕ್ಕುತ್ತರವಾಗಿ ಉತ್ತರಾಖಂಡವು 27.5 ಓವರ್‌ಗಳಲ್ಲಿ 69 ರನ್ ಗಳಿಸಿ ಆಲೌಟ್ ಆಯಿತು. ಧವಳ್ ಕುಲಕರ್ಣಿ, ಶಮ್ಸ್ ಮುಲಾನಿ ಮತ್ತು ತನುಷ್ ಕೋಟ್ಯಾನ್ ತಲಾ ಮೂರು ವಿಕೆಟ್ ಗಳಿಸಿದರು.

41 ಬಾರಿ ರಣಜಿಯ ಟ್ರೋಫಿ ವಿಜೇತ ಮುಂಬೈ ತಂಡವು ಸೆಮಿಫೈನಲ್‌ನಲ್ಲಿ ಉತ್ತರಪ್ರದೇಶವನ್ನು ಎದುರಿಸಲಿದೆ. ಬುಧವಾರ ನಡೆದ ಪಂದ್ಯದಲ್ಲಿ ಉತ್ತರಪ್ರದೇಶ ತಂಡವು ಕರ್ನಾಟಕದ ಎದುರು ಜಯಿಸಿತ್ತು.

ಸಂಕ್ಷಿಪ್ತ ಸ್ಕೋರು: ಆಲೂರು ಕ್ರೀಡಾಂಗಣ: ಮೊದಲ ಇನಿಂಗ್ಸ್– ಮುಂಬೈ: 166.4 ಓವರ್‌ಗಳಲ್ಲಿ 8ಕ್ಕೆ647ಡಿ, ಉತ್ತರಾಖಂಡ: 41.4 ಓವರ್‌ಗಳಲ್ಲಿ 114, ಎರಡನೇ ಇನಿಂಗ್ಸ್: ಮುಂಬೈ: 58 ಓವರ್‌ಗಳಲ್ಲಿ 3ಕ್ಕೆ261, ಉತ್ತರಾಖಂಡ: 27.5 ಓವರ್‌ಗಳಲ್ಲಿ 69 (ಕುನಾಲ್ ಚಾಂಡೆಲಾ 21, ಶಿವಂ ಖುರಾನ ಔಟಾಗದೆ 25, ಧವಳ್ ಕುಲಕರ್ಣಿ 11ಕ್ಕೆ3, ಶಮ್ಸ್ ಮುಲಾನಿ 15ಕ್ಕೆ3, ತನುಷ್ ಕೋಟ್ಯಾನ್ 13ಕ್ಕೆ3) ಫಲಿತಾಂಶ: ಮುಂಬೈ ತಂಡಕ್ಕೆ 725 ರನ್‌ಗಳ ಜಯ. ಸೆಮಿಫೈನಲ್‌ಗೆ ಪ್ರವೇಶ ಮೊದಲ ಇನಿಂಗ್ಸ್– ಪಂಜಾಬ್: 71.2 ಓವರ್‌ಗಳಲ್ಲಿ 219, ಮಧ್ಯಪ್ರದೇಶ: 154.5 ಓವರ್‌ಗಳಲ್ಲಿ 397, ಎರಡನೇ ಇನಿಂಗ್ಸ್: ಪಂಜಾಬ್: 68.4 ಓವರ್‌ಗಳಲ್ಲಿ 203 (ಅನ್ಮೋಲ್‌ಪ್ರೀತ್ ಸಿಂಗ್ 31, ಅನ್ಮೋಲ್ ಮಲ್ಹೋತ್ರಾ 34, ಸಿದ್ಧಾರ್ಥ್ ಕೌಲ್ 31, ಮಯಂಕ್ ಮಾರ್ಕಂಡೆ ಔಟಾಗದೆ 33, ಕುಮಾರ್ ಕಾರ್ತಿಕೇಯ 50ಕ್ಕೆ6, ಸಾರಾಂಶ್ ಜೈನ್ 100ಕ್ಕೆ4) ಮಧ್ಯಪ್ರದೇಶ: 5.1 ಓವರ್‌ಗಳಲ್ಲಿ 26 (ಯಶ್ ದುಬೆ ಔಟಾಗದೆ 17, ಹಿಮಾಂಶು ಮಂತ್ರಿ ಔಟಾಗದೆ 9) ಫಲಿತಾಂಶ: ಮಧ್ಯಪ್ರದೇಶಕ್ಕೆ 10 ವಿಕೆಟ್‌ಗಳ ಗೆಲುವು.

ಜಸ್ಟ್ ಕ್ರಿಕೆಟ್ ಮೈದಾನ: ಮೊದಲ ಇನಿಂಗ್ಸ್: ಬಂಗಾಳ: 218.4 ಓವರ್‌ಗಳಲ್ಲಿ 7ಕ್ಕೆ773, ಜಾರ್ಖಂಡ್: 96 ಓವರ್‌ಗಳಲ್ಲಿ 298 (ನದೀಮ್ 25, ಆಶಿಶ್ ಕುಮಾರ್ 14, ಸಯಾನ್ ಮಂಡಲ್ 71ಕ್ಕೆ4, ಶಾಬಾಜ್ ಅಹಮದ್ 51ಕ್ಕೆ4), ಎರಡನೇ ಇನಿಂಗ್ಸ್: ಬಂಗಾಳ: 31 ಓವರ್‌ಗಳಲ್ಲಿ 3ಕ್ಕೆ76 (ಅಭಿಷೇಕ್ ರಾಮನ್ 22, ಅನುಸ್ಟುಪ್ ಮಜುಂದಾರ್ ಬ್ಯಾಟಿಂಗ್ 22, ಮನೋಜ್ ತಿವಾರಿ ಬ್ಯಾಟಿಂಗ್ 12, ಶಾಬಾಜ್ ನದೀಂ 18ಕ್ಕೆ3).

ಧವಳ್ ಕುಲಕರ್ಣಿ

ಮುಖ್ಯಾಂಶಗಳು
- 92 ವರ್ಷಗಳ ಹಿಂದಿನ ದಾಖಲೆ ಪತನ
- ಶೆಫಿಲ್ಡ್ ಶೀಲ್ಡ್ ಟೂರ್ನಿಯಲ್ಲಿ ನ್ಯೂ ಸೌತ್‌ವೇಲ್ಸ್ ತಂಡ ದಾಖಲೆ ಮಾಡಿತ್ತು
- ಉತ್ತರಾಖಂಡ ವಿರುದ್ಧ 725 ರನ್‌ಗಳ ಗೆಲುವು

ಖೇಲೊ ಇಂಡಿಯಾ: ರಿಧಿಮಾಗೆ ಚಿನ್ನ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಗುರುವಾರವೂ ಪದಕಗಳ ಬೇಟೆಯಾಡಿದರು.

ಹರಿಯಾಣದ ಪಂಚಕುಲಾದಲ್ಲಿ ನಡೆಯುತ್ತಿರುವ ಕೂಟದ ಬಾಲಕಿಯರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ರಿಧಿಮಾ ವೀರೇಂದ್ರ ಕುಮಾರ್ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. 1 ನಿಮಿಷ 5.13 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿದರು. ಈ ವಿಭಾಗದಲ್ಲಿ ನೀನಾ ವೆಂಕಟೇಶ್ ಬೆಳ್ಳಿ ಜಯಿಸಿದರು.

ಬಾಲಕರ 1500 ಮೀ. ಫ್ರೀಸ್ಟೈಲ್‌ನಲ್ಲಿ ಅನೀಶ್ ಗೌಡ (16 ನಿ. 23.85 ಸೆ.) ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಈ ವಿಭಾಗದಲ್ಲಿ ಪವನ್ ಧನಂಜಯ್ ಕಂಚು ಜಯಿಸಿದರು. ಬಾಲಕಿಯರ 4X100 ಮೀ. ಫ್ರೀಸ್ಟೈಲ್‌ನಲ್ಲಿ ಕರ್ನಾಟಕ ತಂಡ ಬೆಳ್ಳಿ ಜಯಿಸಿತು.

ಬಾಲಕರ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಉತ್ಕರ್ಷ ಪಾಟೀಲ್ (58.63 ಸೆ.), 200 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಲಾಕ್ಷ್ಯಾ (2 ನಿ. 46.31 ಸೆ.) ಅವರು ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಇದೇ ವಿಭಾಗದಲ್ಲಿ ಲಿನೇಶಾ ಎ.ಕೆ. ಬೆಳ್ಳಿ ಮತ್ತು ಸಾನ್ವಿ ರಾವ್ ಕಂಚು ಜಯಿಸಿದರು.

400 ಮೀ. ಫ್ರೀಸ್ಟೈಲ್‌ನಲ್ಲಿ ಹಾಷಿಕಾ ರಾಮಚಂದ್ರ ಬೆಳ್ಳಿ ಜಯಿಸಿದರು. ಬಾಲಕರ 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿದಿತ್ ಶಂಕರ್ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಫುಟ್‌ಬಾಲ್; ಸೆಮಿಗೆ ಕರ್ನಾಟಕ: ಶರತ್ ಗಳಿಸಿದ ಗೋಲಿನ ನೆರವಿನಿಂದ 1–0ಯಿಂದ ಹರಿಯಾಣವನ್ನು ಸೋಲಿಸಿದ ಕರ್ನಾಟಕ ಫುಟ್‌ಬಾಲ್ ತಂಡವು ಸೆಮಿಫೈನಲ್ ತಲುಪಿತು.

ರಿಧಿಮಾ ವೀರೇಂದ್ರಕುಮಾರ್– ಪ್ರಜಾವಾಣಿ ಸಂಗ್ರಹ ಚಿತ್ರ

ಬೆಂಗಳೂರು ಗಾಲ್ಫ್: ಪ್ರಣವಿಗೆ ಮುನ್ನಡೆ

ಬೆಂಗಳೂರು: ಮೈಸೂರಿನ ಪ್ರಣವಿ ಅರಸ್ ಅವರು ಇಲ್ಲಿ ನಡೆಯುತ್ತಿರುವ ಹೀರೊ ಮಹಿಳಾ ಗಾಲ್ಫ್ ಟೂರ್ನಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಈ ಋತುವಿನಲ್ಲಿ ಎರಡು ಟೂರ್ನಿಗಳಲ್ಲಿ ಜಯ ಸಾಧಿಸಿರುವ ಪ್ರಣವಿ, ಪ್ರೆಸ್ಟೀಜ್ ಗಾಲ್ಫ್‌ಶೈರ್ ಅಂಗಣದಲ್ಲಿ ಮಿಂಚಿದರು.

ಎರಡನೇ ಸುತ್ತಿನ ಬಳಿಕ ಜಾಹ್ನವಿ ಬಕ್ಷಿ ಎರಡನೇ ಸ್ಥಾನದಲ್ಲಿದ್ದರು. ಅಸ್ಮಿತಾ ಮೂರನೇ ಸ್ಥಾನದಲ್ಲಿದ್ದರು. ವಿಧಾತ್ರಿ ಅರಸ್ ನಾಲ್ಕು ಮತ್ತು ಸಿದ್ಧಿ ಕಪೂರ್ ಐದನೇ ಸ್ಥಾನದಲ್ಲಿದ್ದರು. ಹೀನಾ ಕಾಂಗ್, ಜ್ಯೋತ್ಸ್ನಾ ಸಿಂಗ್, ರಿಧಿಮಾ ದಿಲಾವರಿ ಮತ್ತು ನೇಹಾ ತ್ರಿಪಾಠಿ ಜಂಟಿ ಆರನೇ ಸ್ಥಾನದಲ್ಲಿದ್ದರು.

ಬಾಬರ್ ಶತಕ: ಪಾಕ್‌ಗೆ ಜಯ

ಮುಲ್ತಾನ್ (ಎಪಿ): ನಾಯಕ ಬಾಬರ್ ಆಜಂ ಏಕದಿನ ಕ್ರಿಕೆಟ್‌ನಲ್ಲಿ 17ನೇ ಶತಕ ದಾಖಲಿಸಿದರು. ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಪಾಕಿಸ್ತಾನ ತಂಡವು ವೆಸ್ಟ್ ಇಂಡೀಸ್ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಜಯಿಸಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ತಂಡವು ಶಾಯ್ ಹೋಪ್ (127) ಶತಕದ ಬಲದಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 305 ರನ್ ಗಳಿಸಿತು. ಅದಕ್ಕುತ್ತರವಾಗಿ ಪಾಕಿಸ್ತಾನ ತಂಡವು ಬಾಬರ್ (103; 107ಎ, 4X9) ಶತಕದ ಬಲದಿಂದ 49.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 306 ರನ್ ಗಳಿಸಿತು. ಇಮಾಮ್ ಉಲ್ ಹಕ್ ಮತ್ತು ಮೊಹಮ್ಮದ್ ರಿಜ್ವಾನ್ ಅರ್ಧಶತಕ ಗಳಿಸಿದರು.


ಬಾಬರ್ ಆಜಂ– ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 8ಕ್ಕೆ 305 (ಶಾಯ್ ಹೋಪ್ 127, ಶಾಮ್ರಾ ಬ್ರೂಕ್ಸ್ 70, ರೋವ್ಮನ್ ಪೊವೆಲ್ 32, ರೊಮೆರಿಯೊ ಶೆಫರ್ಡ್ 25, ಶಾಹೀನ್ ಆಫ್ರಿದಿ 55ಕ್ಕೆ2, ಹ್ಯಾರಿಸ್ ರವುಫ್ 77ಕ್ಕೆ4), ಪಾಕಿಸ್ತಾನ: 49.2 ಓವರ್‌ಗಳಲ್ಲಿ 5ಕ್ಕೆ306 (ಇಮಾಮ್ ಉಲ್ ಹಕ್ 66, ಬಾಬರ್ ಆಜಂ 103, ಮೊಹಮ್ಮದ್ ರಿಜ್ವಾನ್ 59, ಖುಷ್‌ದಿಲ್ ಶಾ ಔಟಾಗದೆ 41, ಅಲ್ಜರಿ ಜೋಸೆಫ್ 55ಕ್ಕೆ2) ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 5 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ

ಸಂಕ್ಷಿಪ್ತ ಸುದ್ದಿ

ಫೋಕ್ಸ್‌ವ್ಯಾಗನ್: ‘ವರ್ಟೂಸ್’ ಬಿಡುಗಡೆ

ನವದೆಹಲಿ (ಪಿಟಿಐ): ಫೋಕ್ಸ್‌ವ್ಯಾಗನ್ ಕಂಪನಿಯು ಭಾರತದ ಮಾರುಕಟ್ಟೆಗೆ ಮಧ್ಯಮ ಗಾತ್ರದ ಸೆಡಾನ್ ‘ವರ್ಟೂಸ್’ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 11.21 ಲಕ್ಷ.

ಪುಣೆಯ ಚಾಕನ್ ಘಟಕದಲ್ಲಿ ಹೊಸ ಸೆಡಾನ್ ತಯಾರಾಗಿದೆ. ಶೇಕಡ 95ರಷ್ಟು ಸ್ಥಳೀಯವಾಗಿ ತಯಾರಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯ ‘ಭಾರತ 2.0 ಪ್ರಾಜೆಕ್ಟ್’ ಅಡಿ ಬರುತ್ತಿರುವ ಎರಡನೇ ಉತ್ಪನ್ನ ಇದಾಗಿದೆ.

1 ಲೀಟರ್ ಸಾಮರ್ಥ್ಯದ ಎಂಜಿನ್ ಇರುವ ಕಾರಿನ ಬೆಲೆ ₹ 11.21 ಲಕ್ಷದಿಂದ ₹ 15.71 ಲಕ್ಷದವರೆಗೆ ಇದೆ. 1.5 ಲೀಟರ್ ಸಾಮರ್ಥ್ಯದ ಎಂಜಿನ್ ಇರುವ ಕಾರಿನ ಬೆಲೆ ₹ 17.91 ಲಕ್ಷ.

‘ದೇಶದ ಮಧ್ಯಮ ಗಾತ್ರದ ಸೆಡಾನ್ ವಿಭಾಗದಲ್ಲಿ ಶೇ 15ರಿಂದ ಶೇ 20ರವರೆಗೆ ಮಾರುಕಟ್ಟೆ ಪಾಲು ಹೊಂದುವ ಗುರಿ ಇಟ್ಟುಕೊಳ್ಳಲಾಗಿದೆ’ ಎಂದು ಫೋಕ್ಸ್‌ವ್ಯಾಗನ್ ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ನಿರ್ದೇಶಕ ಆಶಿಶ್ ಗುಪ್ತಾ ಮಾಹಿತಿ ನೀಡಿದ್ದಾರೆ.

ಷೇರುಪೇಟೆ ವಹಿವಾಟು ▲ 428



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,356
ಇಂದಿನ ಅಂತ್ಯ	16,478
▲	122
ದಿನದ ಗರಿಷ್ಠ	16,492

ವಿನಿಮಯ ದರ

$ ಡಾಲರ್	77.74
£ ಪೌಂಡ್	---
€ ಯುರೊ	---
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹507

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1620)
ಸೋಯಾ (ರಿಫೈನ್ಡ್)	₹1530 (1535)
ಸೂರ್ಯಕಾಂತಿ (ರಿಫೈನ್ಡ್)	₹1780 (1785)
ಪಾಮೋಲಿನ್	₹1475 (1490)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹321-601
ದ್ವಿತಳಿ (ಬಿ.ವಿ)	₹421-823

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹174
ಆರ್‌ಎಸ್‌ಎಸ್-5	₹166
ಗುಡ್ ಲಾಟ್	₹158.50

ಮೇ ತಿಂಗಳಿನಲ್ಲಿ ₹ 18,529 ಕೋಟಿ ಹೂಡಿಕೆ

ಈಕ್ವಿಟಿ ಎಂಎಫ್‌ಗೆ ಹೆಚ್ಚು ಬೇಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರನ್ನು ನಿರಂತರವಾಗಿ ಆಕರ್ಷಿಸುತ್ತಿದ್ದು, ಇವುಗಳ ಮೂಲಕ ಮೇ ತಿಂಗಳಿನಲ್ಲಿ ₹ 18,529 ಕೋಟಿ ಬಂಡವಾಳ ಹೂಡಿಕೆ ಆಗಿದೆ.

ಷೇರುಪೇಟೆಯಲ್ಲಿನ ಅಸ್ಥಿರತೆ, ರಷ್ಯಾ–ಉಕ್ರೇನ್ ಸಂಘರ್ಷದಿಂದ ಉಂಟಾಗಿರುವ ಅನಿಶ್ಚಿತತೆ ಹಾಗೂ ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇದ್ದರೂ ಹೂಡಿಕೆದಾರರು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

ಏಪ್ರಿಲ್‌ನಲ್ಲಿ ₹ 15,890 ಕೋಟಿ ಹೂಡಿಕೆ ಆಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಗುರುವಾರ ತಿಳಿಸಿದೆ. 2021ರ ಮಾರ್ಚ್ ತಿಂಗಳಿನಿಂದಲೂ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಬಂಡವಾಳ ಒಳಹರಿವು ಕಂಡುಬರುತ್ತಿದೆ.

2020ರ ಜುಲೈನಿಂದ 2021ರ ಫೆಬ್ರುವರಿವರೆಗೆ ಒಟ್ಟಾರೆ ₹ 46,791 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲಿ (ಎಸ್‌ಐಪಿ) ಹೂಡಿಕೆ ಹೆಚ್ಚಾಗುತ್ತಿರುವುದರಿಂದ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಸಕಾರಾತ್ಮಕವಾಗಿದೆ. ಷೇರುಪೇಟೆಯಲ್ಲಿ ಸದ್ಯ ನಡೆಯುತ್ತಿರುವ ಏರಿಳಿತವನ್ನು ಗಮನಿಸಿದರೆ ಈಕ್ವಿಟಿ ಎಂಎಫ್ ಬಗ್ಗೆ ಹೂಡಿಕೆದಾರರ ಆಸಕ್ತಿಯು ಇದೇ ರೀತಿ ಮುಂದುವರಿಯಲಿದೆ ಎಂದು ಮೋತಿಲಾಲ್ ಓಸ್ವಾಲ್ ಎಎಂಸಿನ ಮುಖ್ಯ ವಹಿವಾಟು ಅಧಿಕಾರಿ ಅಖಿಲ್ ಚತುರ್ವೇದಿ ಹೇಳಿದ್ದಾರೆ.

ಎಸ್‌ಐಪಿ ಮೂಲಕ ಒಳಹರಿವು ಮೇನಲ್ಲಿ ₹ 11,863 ಕೋಟಿಯಿಂದ ₹ 12,286 ಕೋಟಿಗೆ ಏರಿಕೆ ಆಗಿದೆ. ಈಕ್ವಿಟಿ ಹೂಡಿಕೆಯಲ್ಲಿ ಸಣ್ಣ ಹೂಡಿಕೆದಾರರು ವಿಶ್ವಾಸ ಹೊಂದಿದ್ದಾರೆ ಎನ್ನುವುದನ್ನು ಇದು ಸೂಚಿಸುತ್ತಿದೆ. ಸತತ 9ನೇ ತಿಂಗಳಿನಲ್ಲಿಲ್ಲೂ ಪ್ರತಿ ತಿಂಗಳ ಎಸ್‌ಐಪಿ ಹೂಡಿಕೆಯು ₹ 10 ಸಾವಿರ ಕೋಟಿಯನ್ನು ದಾಟಿದೆ.

ಮೇ ತಿಂಗಳಿನಲ್ಲಿ ಮ್ಯೂಚುವಲ್ ಫಂಡ್ ಉದ್ಯಮದಿಂದ ₹7,532 ಕೋಟಿ ಬಂಡವಾಳವನ್ನು ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದಾರೆ. ಏಪ್ರಿಲ್‌ನಲ್ಲಿ ₹72,846 ಕೋಟಿ ಬಂಡವಾಳ ಹೂಡಿಕೆ ಆಗಿತ್ತು.

ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ₹ 203 ಕೋಟಿ ಹೂಡಿಕೆ ಆಗಿದೆ. ಸಾಲಪತ್ರಗಳಿಂದ ₹32,722 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ. ಏಪ್ರಿಲ್‌ನಲ್ಲಿ ₹ 69,883 ಕೋಟಿ ಬಂಡವಾಳ ಹೂಡಿಕೆ ಆಗಿತ್ತು ಎಂದು ಒಕ್ಕೂಟವು ಮಾಹಿತಿ ನೀಡಿದೆ.

ಮ್ಯೂಚುವಲ್ ಫಂಡ್ ನಿರ್ವಹಣಾ ಸಂಪತ್ತು
₹37.37 ಲಕ್ಷ ಕೋಟಿ — ಮೇ ಅಂತ್ಯಕ್ಕೆ
₹38.89 ಲಕ್ಷ ಕೋಟಿ — ಏಪ್ರಿಲ್ ಅಂತ್ಯಕ್ಕೆ

ಕರ್ನಾಟಕ ಬ್ಯಾಂಕ್: ಠೇವಣಿ ಬಡ್ಡಿದರ ಹೆಚ್ಚಳ

ಮಂಗಳೂರು: ಕರ್ನಾಟಕ ಬ್ಯಾಂಕ್ ₹2 ಕೋಟಿಯಿಂದ ₹10 ಕೋಟಿವರೆಗಿನ ಡೊಮೆಸ್ಟಿಕ್ ಹಾಗೂ ಎನ್‌ಆರ್‌ಇ ಠೇವಣಿ ಮೇಲಿನ ಬಡ್ಡಿದರವನ್ನು ಪರಿಷ್ಕರಿಸಿದೆ.

ಈ ಮೊತ್ತದ ಠೇವಣಿಗಳ ಬಡ್ಡಿದರವು ಒಂದರಿಂದ ಎರಡು ವರ್ಷಗಳ ಅವಧಿಗೆ ಶೇ 5.35, ಎರಡು ವರ್ಷದಿಂದ ಐದು ವರ್ಷಗಳ ಅವಧಿಗೆ ಶೇ 5.60 ಹಾಗೂ ಐದು ವರ್ಷದಿಂದ ಹತ್ತು ವರ್ಷಗಳ ಅವಧಿಗೆ ಶೇ 5.70 ಆಗಲಿದೆ. ಇದು ಜೂನ್ 10ರಿಂದ ಅನ್ವಯವಾಗಲಿದೆ ಎಂದು ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ರಾಜಾ ಬಿ.ಎಸ್. ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	48639-49069
ಬೆಟ್ಟೆ	38119-38579
ಕೆಂಪುಗೋಟು	28600-29000
ರಾಶಿ	48129-48559
ಕುಮಟ	
ಚಿಪ್ಪು	21109-30269
ಕೋಕ	12119-27899
ಹಳೆಚಾಲಿ	40199-43000
ಹೊಸಚಾಲಿ	32199-36915
ಸಿದ್ದಾಪುರ	
ಬಿಳಿಗೋಟು	23899-31099
ಚಾಲಿ	33099-37509
ಕೋಕ	20999-31000
ಕೆಂಪುಗೋಟು	27099-33099
ರಾಶಿ	44099-48809
ತಟ್ಟಿಬೆಟ್ಟೆ	31099-31099
ಶಿರಸಿ	
ಬೆಟ್ಟೆ	29899-45992
ಬಿಳಿಗೋಟು	24018-31099
ಚಾಲಿ	32939-38303
ರಾಶಿ	28099-49069
ಯಲ್ಲಾಪುರ	
ಬಿಳಿಗೋಟು	25510-32610
ಚಾಲಿ	33339-37860
ಕೋಕ	18020-27210
ಕೆಂಪುಗೋಟು	29040-34169
ರಾಶಿ	46030-53700
ತಟ್ಟಿಬೆಟ್ಟೆ	37010-45469
ಶಿವಮೊಗ್ಗ	
ಬೆಟ್ಟೆ	50000-52899
ಗೊರಬಲು	17520-37600
ಸರಕು	58069-80009
ಸಾಗರ	
ಬಿಳಿಗೋಟು	11690-28169
ಚಾಲಿ	30690-37009
ಕೋಕ	8989-34189
ಕೆಂಪುಗೋಟು	14989-36399
ರಾಶಿ	29499-49069
ಸಿಪ್ಪೆಗೋಟು	10100-19892

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16300	16200	16400	232.15 ಸೆಂಟ್ಸ್
ಎಸಿ	8960	8600	9025	
ಆರ್‌ಪಿ	9750	10000	10075	ಲಂಡನ್
ಆರ್‌ಸಿ	4800	4500	4625	2109 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 9-6-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10350-10400
ದಪ್ಪ ಗುಜರಾತ್(ಹೊಸ)	11150-11200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1630)
ಒಂದು ವಾರದ ಡೆಲಿವರಿ	1620 (1625)
ಸೋಯಾ ಕಚ್ಚಾ	1465 (1490)
ಪಾಮ್ ವಾರದ ಡೆಲಿವರಿ	1473 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1750)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
50,900 (50,900)
ಬೆಳ್ಳಿ ಕೆ.ಜಿ 61,850 (61,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

2021ರಲ್ಲಿ ₹ 3.50 ಲಕ್ಷ ಕೋಟಿ ಒಳಹರಿವು: ವಿಶ್ವಸಂಸ್ಥೆ

ಎಫ್‌ಡಿಐ: 7ನೇ ಸ್ಥಾನದಲ್ಲಿ ಭಾರತ

ವಿಶ್ವಸಂಸ್ಥೆ (ಪಿಟಿಐ): 2021ರಲ್ಲಿ ಭಾರತಕ್ಕೆ ಹರಿದುಬಂದ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಮೊತ್ತ ಕಡಿಮೆ ಆಗಿದ್ದರೂ, ಭಾರತವು ಜಾಗತಿಕ ಮಟ್ಟದಲ್ಲಿ ಎಫ್‌ಡಿಐ ಆಕರ್ಷಿಸಿದ ಮೊದಲ ಹತ್ತು ರಾಷ್ಟ್ರಗಳ ಸಾಲಿನಲ್ಲಿ ಸ್ಥಾನ ಪಡೆದಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

2021ರಲ್ಲಿ ಭಾರತವು ₹ 3.50 ಲಕ್ಷ ಕೋಟಿ (45 ಬಿಲಿಯನ್ ಡಾಲರ್) ಎಫ್‌ಡಿಐ ಆಕರ್ಷಿಸಿದೆ ಎಂದು ವಿಶ್ವ ಸಂಸ್ಥೆಯ ವಾಣಿಜ್ಯ ಮತ್ತು ಅಭಿವೃದ್ಧಿ ಸಭೆಯ (ಯುಎನ್‌ಸಿಟಿಎಡಿ) ವಿಶ್ವ ಹೂಡಿಕೆ ವರದಿ ಹೇಳಿದೆ.

ಉಕ್ರೇನ್–ರಷ್ಯಾ ಯುದ್ಧ, ಇಂಧನ ಹಾಗೂ ಆಹಾರ ಉತ್ಪನ್ನಗಳ ಬೆಲೆ ಏರಿಕೆ, ಹೂಡಿಕೆದಾರರಲ್ಲಿನ ಅನಿಶ್ಚಿತತೆಯ ಕಾರಣದಿಂದಾಗಿ 2022ರಲ್ಲಿ ಜಾಗತಿಕ ಮಟ್ಟದಲ್ಲಿ ಎಫ್‌ಡಿಐ ಹರಿವು ಕಡಿಮೆ ಆಗಬಹುದು ಎಂದು ಅದು ಅಂದಾಜಿಸಿದೆ.

2020ರಲ್ಲಿ ಭಾರತವು ₹ 4.97 ಲಕ್ಷ ಕೋಟಿ (64 ಬಿಲಿಯನ್ ಡಾಲರ್) ಎಫ್‌ಡಿಐ ಆಕರ್ಷಿಸಿತ್ತು. ಇದಕ್ಕೆ ಹೋಲಿಸಿದರೆ 2021ರಲ್ಲಿ ಎಫ್‌ಡಿಐ ಒಳಹರಿವಿನ ಮೊತ್ತವು ₹ 1.47 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. 2021ರಲ್ಲಿ ವಿಶ್ವದಲ್ಲಿ ಅತಿಹೆಚ್ಚು ಎಫ್‌ಡಿಐ ಆಕರ್ಷಿಸಿದ ದೇಶಗಳ ಸಾಲಿನಲ್ಲಿ ಭಾರತ 7ನೇ ಸ್ಥಾನ ಪಡೆದಿದೆ.

‘2021ರಲ್ಲಿ ಭಾರತಕ್ಕೆ ಬಂದ ಎಫ್‌ಡಿಐ ಮೊತ್ತ ಕಡಿಮೆ ಆಗಿದ್ದರೂ, ಹೊಸ ಅಂತರರಾಷ್ಟ್ರೀಯ ಹೂಡಿಕೆ ಒಪ್ಪಂದಗಳ ಘೋಷಣೆಯು 108ಕ್ಕೆ ಏರಿಕೆ ಆಗಿದೆ. ಹಿಂದಿನ ಹತ್ತು ವರ್ಷಗಳನ್ನು ಪರಿಗಣಿಸಿದರೆ, ಪ್ರತಿ ವರ್ಷ ಸರಾಸರಿ ಇಂತಹ 20 ಒಪ್ಪಂದಗಳು ಆಗುತ್ತಿದ್ದವು’ ಎಂದು ವರದಿಯು ವಿವರಿಸಿದೆ.

ದಕ್ಷಿಣ ಏಷ್ಯಾದಿಂದ, ಅದರಲ್ಲೂ ಮುಖ್ಯವಾಗಿ ಭಾರತದಿಂದ, ಬೇರೆ ದೇಶಗಳಲ್ಲಿ ಆದ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಮಾಣವು ಶೇ 43ರಷ್ಟು ಹೆಚ್ಚಳ ಕಂಡಿದೆ.

ಎಫ್‌ಡಿಐ: ಟಾಪ್ 10 ದೇಶಗಳು

1 ಅಮೆರಿಕ	6 ಬ್ರೆಜಿಲ್
2 ಚೀನಾ	7 ಭಾರತ
3 ಹಾಂಗ್‌ಕಾಂಗ್	8 ದಕ್ಷಿಣ ಆಫ್ರಿಕಾ
4 ಸಿಂಗಪುರ	9 ರಷ್ಯಾ
5 ಕೆನಡಾ	10 ಮೆಕ್ಸಿಕೊ

ರಿಲಯನ್ಸ್ ಗಳಿಕೆ: ಸೆನ್ಸೆಕ್ಸ್ 428 ಅಂಶ ಏರಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಗಳಿಕೆ ಕಂಡಿದ್ದರಿಂದ ದೇಶದ ಷೇರುಪೇಟೆಗಳ ನಾಲ್ಕು ದಿನಗಳ ನಕಾರಾತ್ಮಕ ವಹಿವಾಟಿಗೆ ಗುರುವಾರ ತಡೆ ಬಿದ್ದಿದೆ.

ಹೂಡಿಕೆದಾರರು ಐ.ಟಿ., ಫಾರ್ಮಾ ಮತ್ತು ಬ್ಯಾಂಕ್ ಷೇರುಗಳ ಖರೀದಿಗೆ ಹೆಚ್ಚಿನ ಗಮನ ನೀಡಿದರು. ಆದರೆ, ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಷೇರುಪೇಟೆಯ ಗಳಿಕೆಯನ್ನು ಮಿತಿಗೊಳಿಸಿದವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 428 ಅಂಶ ಹೆಚ್ಚಾಗಿ 55,320 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 122 ಅಂಶ ಹೆಚ್ಚಾಗಿ 16,478 ಅಂಶಗಳಿಗೆ ತಲುಪಿತು.

ವಾಹನ, ತೈಲ ಮತ್ತು ಅನಿಲ ವಲಯಗಳು ಉತ್ತಮ ವಹಿವಾಟು ನಡೆಸುತ್ತಿವೆ. ಆದರೆ, ಲೋಹ ವಲಯದ ವಹಿವಾಟು ಮಂದಗತಿಯಲ್ಲಿ ಮುಂದುವರಿಯಲಿದೆ ಎಂದು ರೆಲಿಗೇರ್ ಬ್ರೋಕಿಂಗ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.13ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 123.42 ಡಾಲರ್‌ಗೆ ತಲುಪಿದೆ.

ಸಾಲ ಕೊಡುವ ಆ್ಯಪ್: ಶೀಘ್ರವೇ ನಿಯಮ

ಮುಂಬೈ (ಪಿಟಿಐ): ಡಿಜಿಟಲ್ ವೇದಿಕೆಗಳ ಮೂಲಕ ಸಾಲ ವಿತರಣೆ ಮಾಡುವ ಕಂಪನಿಗಳಿಗೆ ಸಂಬಂಧಿಸಿದ ನಿಯಮಗಳನ್ನು ಶೀಘ್ರವೇ ಅಂತಿಮಗೊಳಿಸಲಾಗುವುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಡಿಜಿಟಲ್ ವೇದಿಕೆ (ಆ್ಯಪ್) ಮೂಲಕ ಸಾಲ ನೀಡಿದವರು ಕಿರುಕುಳ ಕೊಟ್ಟ ಕಾರಣಕ್ಕೆ, ಸಾಲ ಪಡೆದವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿವೆ.

‘ವಿಸ್ತೃತವಾದ ನಿಯಮಗಳನ್ನು ನಾವು ಶೀಘ್ರದಲ್ಲಿಯೇ ಅಂತಿಮಗೊಳಿಸಲಿದ್ದೇವೆ. ಇವು ಸಾಲ ಕೊಡುವ ಡಿಜಿಟಲ್ ವೇದಿಕೆಗಳಿಂದ ಎದುರಾಗಿರುವ ಸವಾಲುಗಳನ್ನು ನಿಭಾಯಿಸಲು ನೆರವಾಗಲಿವೆ. ಹಲವು ಡಿಜಿಟಲ್ ವೇದಿಕೆಗಳು ಅಕ್ರಮವಾಗಿವೆ’ ಎಂದು ದಾಸ್ ಅವರು ಉಪನ್ಯಾಸವೊಂದರಲ್ಲಿ ಹೇಳಿದ್ದಾರೆ.

ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಪಡೆದವರು ಸಮಸ್ಯೆ ಎದುರಾದಲ್ಲಿ ಸ್ಥಳೀಯ ಪೊಲೀಸರನ್ನು ಸಂಪರ್ಕಿಸಬೇಕು ಎಂದು ದಾಸ್ ಅವರು ಬುಧವಾರ ಸಲಹೆ ಮಾಡಿದ್ದರು. ಸಾಲ ಒದಗಿಸುವ ಬಹುತೇಕ ಡಿಜಿಟಲ್ ಆ್ಯಪ್‌ಗಳಿಗೆ ಆರ್‌ಬಿಐ ಅನುಮತಿ ಇಲ್ಲ. ಅವು ತಮ್ಮಷ್ಟಕ್ಕೆ ತಾವೇ ಕಾರ್ಯ ನಿರ್ವಹಿಸುತ್ತಿವೆ ಎಂದು ದಾಸ್ ತಿಳಿಸಿದ್ದರು.

‘ಸಾಲ ಕೊಡುವ ಆ್ಯಪ್ ಆರ್‌ಬಿಐನಲ್ಲಿ ನೋಂದಣಿ ಮಾಡಿಕೊಂಡಿದೆಯೇ ಎಂಬುದನ್ನು ಪರಿಶೀಲಿಸಿ. ಅದು ನೋಂದಣಿ ಆಗಿದೆ ಎಂದಾದರೆ, ಅದು ತಪ್ಪು ಮಾಡಿದಾಗ ಆರ್‌ಬಿಐ ಕ್ರಮ ಜರುಗಿಸುತ್ತದೆ. ಈ ಭರವಸೆಯನ್ನು ನಾನು ನೀಡುತ್ತೇನೆ’ ಎಂದು ಕೂಡ ದಾಸ್ ಅವರು ಹೇಳಿದ್ದರು.

ಸಂಸದ ಸ್ಥಾನಕ್ಕೆ ಬಾಸಿಲ್ ರಾಜಪಕ್ಸ ರಾಜೀನಾಮೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ಮಾಜಿ ಹಣಕಾಸು ಸಚಿವ ಹಾಗೂ ಅಧ್ಯಕ್ಷ ಗೋಟಬಯ ರಾಜಪಕ್ಸ ಸಹೋದರ ಬಾಸಿಲ್ ರಾಜಪಕ್ಸ ಅವರು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶ್ರೀಲಂಕಾ ಪೊದುಜನ ಪೆರಮುಣ ಪಕ್ಷವು ಸೂಕ್ತ ಅಭ್ಯರ್ಥಿಯ ನಾಮ ನಿರ್ದೇಶನ ಮಾಡಲಿ ಎಂದು ನಾನು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ’ ಎಂದು ಹೇಳಿದರು.

ಎರಡು ರಾಷ್ಟ್ರಗಳ ಪೌರತ್ವ ಹೊಂದಿರುವವರು ಸಂಸದರಾಗುವಂತಿಲ್ಲ ಎಂಬ ಅಂಶವನ್ನು ಉದ್ದೇಶಿತ 21ನೇ ತಿದ್ದುಪಡಿ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿದೆ. ನೀವು ಅಮೆರಿಕ ಹಾಗೂ ಶ್ರೀಲಂಕಾದ ಪೌರತ್ವ ಹೊಂದಿರುವುದರಿಂದ ರಾಜೀನಾಮೆ ನೀಡಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಆ ರೀತಿ ಏನೂ ಇಲ್ಲ. ಹಣಕಾಸು ಬಿಕ್ಕಟ್ಟಿಗೆ ನಾನು ಕಾರಣನೆಂದು ಆರೋಪ ಮಾಡುತ್ತಿರುವುದು’ ಸರಿಯಲ್ಲ ಎಂದರು.

ಶ್ರೀಲಂಕಾದಲ್ಲಿ ತೀವ್ರಗೊಂಡ ಆರ್ಥಿಕ ಬಿಕ್ಕಟ್ಟಿನಿಂದ ಕಳೆದ ತಿಂಗಳು ಮಹಿಂದಾ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಚೆಸ್: ಐವರು ತೀರ್ಪುಗಾರರ ನೇಮಕ

ಬೆಂಗಳೂರು: ಕರ್ನಾಟಕದ ಐವರನ್ನು ಚೆಸ್ ಒಲಿಂಪಿಯಾಡ್‌ಗೆ ತೀರ್ಪುಗಾರರನ್ನಾಗಿ ನೇಮಿಸಲಾಗಿದೆ.

ತಮಿಳುನಾಡಿನ ಮಹಾಬಲಿಪುರಂನಲ್ಲಿ ಆಗಸ್ಟ್ 10ರಿಂದ ಒಲಿಂಪಿಯಾಡ್ ನಿಗದಿಯಾಗಿದ್ದು, ವಸಂತ್ ಬಿ.ಎಚ್, ಸಲೀಂ ಬೇಗ್, ಪ್ರಾಣೇಶ್ ಯಾದವ್, ಮಂಜುನಾಥ್ ಎಂ, ಪ್ರಮೋದ್ ರಾಜ್ ಮೋರೆ ತೀರ್ಪುಗಾರರಾಗಿ ನೇಮಕಗೊಂಡವರು. 197 ರಾಷ್ಟ್ರಗಳ ಆಟಗಾರರು ಚೆಸ್ ಒಲಿಂಪಿಯಾಡ್‌ನಲ್ಲಿ ಭಾಗವಹಿಸಲಿದ್ದಾರೆ.

ಸ್ಪೋರ್ಟ್ಸ್ 18ನಲ್ಲಿ ಜಿಪಿಬಿಎಲ್ ಪ್ರಸಾರ

ಬೆಂಗಳೂರು: ಕರ್ನಾಟಕದಲ್ಲಿ ನಡೆಯಲಿರುವ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನ (ಜಿಪಿಬಿಎಲ್) ಸ್ಪೋರ್ಟ್ಸ್ 18 ವಾಹಿನಿಯಲ್ಲಿ ನೇರ ಪ್ರಸಾರವಾಗಲಿದೆ.

ಚೊಚ್ಚಲ ಆವೃತ್ತಿಯ ಟೂರ್ನಿಯು ಜುಲೈ 1ರಿಂದ 10ರವರೆಗೆ ನಿಗದಿಯಾಗಿದೆ.

ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಅಶ್ವಿನಿ–ಸುಮೀತ್‌ಗೆ ನಿರಾಸೆ

ಎಂಟರಘಟ್ಟಕ್ಕೆ ಲಕ್ಷ್ಯ, ಸಿಂಧು

ಜಕಾರ್ತ, ಇಂಡೊನೇಷ್ಯಾ (ಪಿಟಿಐ): ಜಯದ ಓಟ ಮುಂದುವರಿಸಿದ ಭಾರತದ ಲಕ್ಷ್ಯ ಸೇನ್ ಮತ್ತು ಪಿ.ವಿ. ಸಿಂಧು ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ, ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ 21-18, 21-15ರಿಂದ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಅವರನ್ನು ಪರಾಭವಗೊಳಿಸಿದರು. ಲಕ್ಷ್ಯ ಅವರಿಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ 13ನೇ ಸ್ಥಾನದಲ್ಲಿರುವ ರಾಸ್ಮಸ್ ಎದುರು 54 ನಿಮಿಷಗಳಲ್ಲಿ ಗೆಲುವು ಒಲಿಯಿತು.

ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ ಲಕ್ಷ್ಯ, ಮುಂದಿನ ಪಂದ್ಯದಲ್ಲಿ ಚೀನಾ ತೈಪೆಯ ಚೋವ್ ಟಿಯೆನ್ ಚೆನ್ ಅವರನ್ನು ಎದುರಿಸಲಿದ್ದಾರೆ.

ಲಕ್ಷ್ಯ ಸೇನ್– ಎಪಿ ಚಿತ್ರ

ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನ ಹಣಾಹಣಿಯಲ್ಲಿ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು 23-21, 20-22, 21-11ರಿಂದ ಇಂಡೊನೇಷ್ಯಾದ ಗ್ರೆಗೊರಿಯಾ ಮರಿಸ್ಕಾ ತುಂಜುಂಗ್ ಅವರ ಸವಾಲು ಮೀರಿದರು.

ಜಿದ್ದಾಜಿದ್ದಿನ ಹೋರಾಟದಲ್ಲಿ ಮೊದಲ ಗೇಮ್ ಜಯಿಸಿದ ಸಿಂಧು, ಎರಡನೇ ಗೇಮ್ ಕೈಚೆಲ್ಲಿದರು. ಆದರೆ ನಿರ್ಣಾಯಕ ಮತ್ತು ಮೂರನೇ ಗೇಮ್‌ನಲ್ಲಿ ಸಂಪೂರ್ಣ ಪಾರಮ್ಯ ಮೆರೆದರು.

ಎಂಟರಘಟ್ಟದ ಪಂದ್ಯದಲ್ಲಿ ಸಿಂಧು, ಥಾಯ್ಲೆಂಡ್‌ನ ರಚನಾಕ್ ಇಂತನನ್ ಮತ್ತು ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮರ್ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಅಶ್ವಿನಿ–ಸುಮೀತ್‌ಗೆ ಸೋಲು: ಮಿಶ್ರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಸುಮೀತ್ ರೆಡ್ಡಿ ಜೋಡಿ ನಿರಾಸೆ ಅನುಭವಿಸಿತು.

16ರ ಘಟ್ಟದ ಪಂದ್ಯದಲ್ಲಿ ಭಾರತದ ಜೋಡಿ 18–21, 13–21ರಲ್ಲಿ ಚೀನಾದ ಜೆಂಗ್ ಸಿ ವೀ ಮತ್ತು ಹುವಂಗ್ ಯಾ ಕ್ವಿಂಗ್ ಕೈಯಲ್ಲಿ ಪರಾಭವಗೊಂಡಿತು. ಈ ಪಂದ್ಯ 35 ನಿಮಿಷಗಳಲ್ಲಿ ಕೊನೆಗೊಂಡಿತು.

ಕೋಚ್ ಅನುಚಿತ ವರ್ತನೆ; ಆರೋಪ

ನವದೆಹಲಿ (ಪಿಟಿಐ): ತರಬೇತಿಗಾಗಿ ಜರ್ಮನಿಗೆ ತೆರಳಿದ್ದ ವೇಳೆ ಕೋಚ್ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಮಹಿಳಾ ಸೇಲಿಂಗ್ ಸ್ಪರ್ಧಿಯೊಬ್ಬರು ಆರೋಪಿಸಿದ್ದು, ನ್ಯಾಯ ಒದಗಿಸುವಂತೆ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಮೊರೆ ಹೋಗಿದ್ದಾರೆ.

ಸೇಲಿಂಗ್ ಸ್ಪರ್ಧಿ ಆರಂಭದಲ್ಲಿ ಯಾಚಿಂಗ್ ಫೆಡರೇಷನ್ ಆಫ್ ಇಂಡಿಯಾಗೆ (ವೈಎಐ) ದೂರು ನೀಡಿದ್ದರು. ಆದರೆ ಅಲ್ಲಿನ ಅಧಿಕಾರಿಗಳು ಸರಿಯಾಗಿ ಸ್ಪಂದಿಸದ ಕಾರಣ ಸಾಯ್ ಮೊರೆ ಹೋಗಿದ್ದಾರೆ.

‘ವಿದೇಶ ಪ್ರವಾಸದ ವೇಳೆ ಕೋಚ್ ಅನುಚಿತವಾಗಿ ವರ್ತಿಸಿ ಮುಜುಗರ ಉಂಟುಮಾಡಿದ್ದಾರೆ ಎಂದು ಮಹಿಳಾ ಸೇಲಿಂಗ್ ಸ್ಪರ್ಧಿ ದೂರು ನೀಡಿದ್ದಾರೆ. ಈ ಬಗ್ಗೆ ವೈಎಐಗೆ ದೂರು ನೀಡಿದರೂ, ಅವರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಸ್ಪರ್ಧಿಯ ದೂರನ್ನು ಕಡೆಗಣಿಸಿದ್ದು ಏಕೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಫೆಡರೇಷನ್‌ಗೆ ಸೂಚಿಸಿದ್ದೇವೆ’ ಎಂದು ಸಾಯ್ ಹೇಳಿದೆ.

ವಿಂಬಲ್ಡನ್ ವಿಜೇತರಿಗೆ ₹ 19.44 ಕೋಟಿ ಬಹುಮಾನ!

ಲಂಡನ್ (ಎಎಫ್‌ಪಿ): ವಿಂಬಲ್ಡನ್ ಗ್ರ್ಯಾನ್‌ಸ್ಲಾಂ ಟೆನಿಸ್ ಟೂರ್ನಿಯ ಬಹುಮಾನ ಮೊತ್ತ ಹೆಚ್ಚಿಸಲಾಗಿದ್ದು, ಈ ಬಾರಿಯ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗುವವರು ತಲಾ ₹ 19.44 ಕೋಟಿ ನಗದು ಬಹುಮಾನ ಪಡೆಯಲಿದ್ದಾರೆ.

ಟೂರ್ನಿಯ ಒಟ್ಟು ಬಹುಮಾನ ಮೊತ್ತ ಸುಮಾರು ₹ 400 ಕೋಟಿ ಆಗಲಿದೆ. ಕಳೆದ ಬಾರಿಗೆ ಹೋಲಿಸಿದರೆ ಬಹುಮಾನ ಮೊತ್ತದಲ್ಲಿ ಶೇ 11.1 ರಷ್ಟು ಏರಿಕೆಯಾಗಿದೆ.

ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ‘ರನ್ನರ್ ಅಪ್’ ಆಗುವವರು ತಲಾ ₹ 9.74 ಕೋಟಿ ಪಡೆಯಲಿದ್ದಾರೆ. ಮೊದಲ ಸುತ್ತಿನಲ್ಲಿ ಸೋಲುವ ಆಟಗಾರರು ಕೂಡಾ ₹ 48 ಲಕ್ಷ ಜೇಬಿಗಿಳಿಸಲಿದ್ದಾರೆ.

ಈ ಬಾರಿಯ ವಿಂಬಲ್ಡನ್ ಟೂರ್ನಿ ಜೂನ್ 27 ರಂದು ಆರಂಭವಾಗಲಿದೆ. 2021ರ ಟೂರ್ನಿಯ ವೇಳೆ ಕೋವಿಡ್ ಕಾರಣದಿಂದ, ಕಡಿಮೆ ಸಂಖ್ಯೆಯ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗಿತ್ತು.

’ಅರ್ಹತಾ ಹಂತದ ಮೊದಲ ಸುತ್ತಿನಿಂದ ಹಿಡಿದು, ಚಾಂಪಿಯನ್ ಆಗುವವರೆಗಿನ ಎಲ್ಲರಿಗೂ ಈ ಬಾರಿ ಹೆಚ್ಚಿನ ಬಹುಮಾನ ಮೊತ್ತ ಲಭಿಸಲಿದೆ. ವಿಂಬಲ್ಡನ್ ಟೂರ್ನಿಗೆ ಆಟಗಾರರು ಎಷ್ಟು ಮುಖ್ಯ ಎಂಬುದನ್ನು ಇದು ತೋರಿಸುತ್ತದೆ. ನಮ್ಮದು ವಿಶ್ವದ ಶ್ರೇಷ್ಠ ಟೂರ್ನಿಗಳಲ್ಲಿ ಒಂದಾಗಿದೆ‘ ಎಂದು ಟೂರ್ನಿಯನ್ನು ಸಂಘಟಿಸುವ ಆಲ್ ಇಂಗ್ಲೆಂಡ್ ಲಾನ್ ಟೆನಿಸ್ ಮತ್ತು ಕ್ರಾಕೆಟ್ ಕ್ಲಬ್ (ಎಐಎಲ್‌ಟಿಸಿ) ಮುಖ್ಯಸ್ಥ ಇಯಾನ್ ಹೆವಿಟ್ ತಿಳಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಯುವ ತಂಡದಲ್ಲಿ ಕುಶಾಲ್‌ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕತಾರ್‌ನ ದೋಹಾದಲ್ಲಿ ನಡೆಯಲಿರುವ ಫಿಬಾ 16 ವರ್ಷದೊಳಗಿನವರ ಏಷ್ಯಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಕುಶಾಲ್ ಗೌಡ ಸ್ಥಾನ ಪಡೆದಿದ್ದಾರೆ.

ಇದೇ 12ರಿಂದ 19ರವರೆಗೆ ಚಾಂಪಿಯನ್‌ಷಿಪ್ ನಿಗದಿಯಾಗಿದೆ. ಭಾರತ ತಂಡವು ಆಸ್ಟ್ರೇಲಿಯಾ, ಬಹರೇನ್ ಮತ್ತು ಕತಾರ್ ತಂಡಗಳಿರುವ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಜೂನ್ 12ರಂದು ಆಸ್ಟ್ರೇಲಿಯಾ, 13ರಂದು ಬಹರೇನ್ ಮತ್ತು 14ರಂದು ಕತಾರ್ ವಿರುದ್ಧ ಭಾರತ ಪಂದ್ಯಗಳನ್ನು ಆಡಲಿದೆ.

ತಂಡ ಇಂತಿದೆ: ಲೋಕೇಂದ್ರ ಸಿಂಗ್ (ನಾಯಕ), ಕುಶಾಲ್ ಗೌಡ, ಎಸ್.ಕೆ. ಫಯಾಜ್, ಜನಮೇಜಯ ಸಿಂಗ್, ಜಿ. ಅಭಿಮನ್ಯು, ಜೈದೀಪ್ ರಾಥೋಡ್, ಮೊಹಮ್ಮದ್ ಇಶಾನ್, ಲವೀಶ್, ಹರ್ಷ ದಾಗರ್, ಕುಶಾಲ್ ಸಿಂಗ್, ಸಾಹಿಬ್‌ಜೀತ್ ಸಿಂಗ್, ಸಂಜು ಗಜಬೀಯೆ.

ಮುಖ್ಯ ಕೋಚ್: ವೆಸಲಿನ್ ಮ್ಯಾಟಿಚ್, ಕೋಚ್: ಮೋಹಿತ್ ಭಂಡಾರಿ, ವ್ಯವಸ್ಥಾಪಕ: ಚೆಂಗಲರಾಯ ನಾಯ್ಡು, ಫಿಸಿಯೊ: ಶಿವ ಷಣ್ಮುಗ ಸಿಂಗ್. ರೆಫರಿ: ರಾಕೇಶ್ ರಾಮಲಿಂಗಯ್ಯ.

ಎಫ್‌ಸಿಬಿಯುಗೆ ಸೆವಿಲ್ಲಾ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫುಟ್‌ಬಾಲ್ ಕ್ರೀಡೆಯ ಬೆಳವಣಿಗೆಯ ನಿಟ್ಟಿನಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದೊಂದಿಗೆ ಸ್ಪೇನ್‌ನ ಮುಂಚೂಣಿ ಕ್ಲಬ್ ಸೆವಿಲ್ಲಾ ಎಫ್‌ಸಿ ಒಪ್ಪಂದವನ್ನು ಅಂತಿಮಗೊಳಿಸಿದೆ.

ಭಾರತದಲ್ಲಿ ತನ್ನ ಬ್ರ್ಯಾಂಡ್ ಬೆಳವಣಿಗೆಯನ್ನು ಇನ್ನಷ್ಟು ವೃದ್ಧಿಸಿಕೊಳ್ಳಲು ಸೆವಿಲ್ಲಾ ಈ ನಿರ್ಧಾರಕ್ಕೆ ಬಂದಿದೆ. 2021ರ ಜನವರಿಯಲ್ಲೇ ಉಭಯ ಕ್ಲಬ್‌ಗಳು ಈ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಅಧ್ಯಕ್ಷ ಜೋಸ್ ಕ್ಯಾಸ್ಟ್ರೊ ಕಾರ್ಮೊನಾ, ಕಾರ್ಯನಿರ್ವಹಣಾಧಿಕಾರಿ ಜೋಸ್ ಮರಿಯಾ ಕ್ರೂಜ್ ಅವರನ್ನೊಳಗೊಂಡ ಸೆವಿಲ್ಲಾ ಪ್ರತಿನಿಧಿಗಳ ತಂಡವು ಬುಧವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿತು.

‘ಮುಂದಿನ ವರ್ಷ ಐ ಲೀಗ್ ಟೂರ್ನಿಗೆ ಪ್ರವೇಶ ಪಡೆಯುವ ಹಂಬಲದಲ್ಲಿರುವ ಎಫ್‌ಸಿಬಿಯುಗೆ ಕೋಚ್, ಅಕಾಡೆಮಿ ಮತ್ತಿತರ ನೆರವು ನೀಡಲಿದ್ದೇವೆ‘ ಎಂದು ಜೋಸ್ ಮರಿಯಾ ಕ್ರೂಜ್ ತಿಳಿಸಿದ್ದಾರೆ.

ಕೋರ್ಟ್ ಮೊರೆ ಹೋದ ಸ್ವಸ್ತಿಕಾ

ಸ್ವಸ್ತಿಕಾ ಘೋಷ್

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ಆಯ್ಕೆ ಮಾಡಿರುವ ತಂಡದಲ್ಲಿ ತಮಗೆ ಅವಕಾಶ ನೀಡದಿರುವುದನ್ನು ಪ್ರಶ್ನಿಸಿ ಟೇಬಲ್ ಟೆನಿಸ್ ಆಟಗಾರ್ತಿ ಸ್ವಸ್ತಿಕಾ ಘೋಷ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಟಿಟಿ ತಂಡದ ಆಯ್ಕೆ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ ಮೂರನೇ ಸ್ಪರ್ಧಿ ಅವರು. ದಿಯಾ ಚಿತಳೆ ಮತ್ತು ಮನುಷ್ ಶಾ ಅವರು ಈ ಹಿಂದೆಯೇ ನ್ಯಾಯಾಲಯದ ಮೊರೆ ಹೋಗಿದ್ದರು.

ಅದರಲ್ಲಿ ದಿಯಾಗೆ ತಂಡದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮನುಷ್ ಅವರು ಮೀಸಲು ಆಟಗಾರನಾಗಿ ಮುಂದುವರಿದಿದ್ದಾರೆ.

’ಆಯ್ಕೆಗೆ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ ಸ್ವಸ್ತಿಕಾ ಅವರು ನಾಲ್ಕನೇ ಆಟಗಾರ್ತಿಯಾಗಿ ತಂಡದಲ್ಲಿ ಸ್ಥಾನ ಪಡೆಯಬೇಕಿತ್ತು. ಆದರೆ ಅವರನ್ನು ಮೀಸಲು ಆಟಗಾರ್ತಿಯಾಗಿ ಹೆಸರಿಸಲಾಗಿದೆ. ಅನ್ಯಾಯ ಸರಿಪಡಿಸುವಂತೆ ಕೋರಿ ದೆಹಲಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದೇವೆ. ಅರ್ಜಿಯ ವಿಚಾರಣೆ ಶುಕ್ರವಾರ ನಡೆಯಲಿದೆ‘ ಎಂದು ಸ್ವಸ್ತಿಕಾ ತಂದೆ ಸಂದೀಪ್ ಘೋಷ್ ತಿಳಿಸಿದರು.

ಚೆನ್ನೈಯಿನ್ ಸೇರಿದ ಸೌರವ್

ಚೆನ್ನೈ (ಪಿಟಿಐ): ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ಎರಡು ಬಾರಿ ಚಾಂಪಿಯನ್ ಆಗಿರುವ ಚೆನ್ನೈಯಿನ್ ಫುಟ್‌ಬಾಲ್ ಕ್ಲಬ್ ತಂಡ, ಎರಡು ವರ್ಷಗಳ ಅವಧಿಗೆ ಸೌರವ್ ದಾಸ್ ಜತೆ ಒಪ್ಪಂದ ಮಾಡಿಕೊಂಡಿದೆ.

ಸೌರವ್ ಅವರ ಆಗಮನದಿಂದ ಚೆನ್ನೈಯಿನ್ ತಂಡದ ಮಿಡ್‌ಫೀಲ್ಡ್‌ನ ಬಲ ವೃದ್ಧಿಸಿದೆ. ಮುಂಬೈ ಸಿಟಿ, ಈಸ್ಟ್ ಬೆಂಗಾಲ್ ಮತ್ತು ಮೋಹನ್ ಬಾಗನ್ ತಂಡಗಳಲ್ಲಿ ಆಡಿರುವ ಅವರ ಅನುಭವ ತಂಡದ ನೆರವಿಗೆ ಬರಲಿದೆ.

‘ಮೂರು ಕ್ಲಬ್‌ಗಳನ್ನು ಪ್ರತಿನಿಧಿಸಿರುವ ಸೌರವ್ ಗಮನಾರ್ಹ ಪ್ರದರ್ಶನ ನೀಡಿದ್ದಾರೆ ಅದೇ ರೀತಿಯ ಆಟವನ್ನು ನಮ್ಮ ತಂಡದಲ್ಲೂ ಮುಂದುವರಿಸುವ ವಿಶ್ವಾಸವಿದೆ‘ ಎಂದು ಚೆನ್ನೈಯಿನ್ ತಂಡದ ಸಹ ಮಾಲೀಕರಾದ ವಿತಾ ದನಿ ಹೇಳಿದ್ದಾರೆ.

’ಚೆನ್ನೈಯಿನ್, ಅದ್ಭುತ ಸಾಧನೆಗಳನ್ನು ಮಾಡಿರುವ ಕ್ಲಬ್. ತರಬೇತಿ ಮತ್ತು ಪಂದ್ಯಗಳಲ್ಲಿ ನನ್ನ ಶ್ರೇಷ್ಠ ಸಾಮರ್ಥ್ಯ ತೋರುತ್ತೇನೆ ಎಂಬ ಭರವಸೆಯನ್ನು ನೀಡುತ್ತೇನೆ‘ ಎಂದು ದಾಸ್ ಪ್ರತಿಕ್ರಿಯಿಸಿದ್ದಾರೆ.